ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆಲ್ಫಿ ಸಮಯ

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಬುಧವಾರ ಪಾಲ್ಗೊಂಡಿದ್ದ ಪ್ರತಿನಿಧಿಗಳು ಸೆಲ್ಫಿ ತೆಗೆದುಕೊಂಡರು



ಬೆಂಗಳೂರು ತಂತ್ರಜ್ಞಾನ ಶೃಂಗಸಭೆ–2023 ಉದ್ಘಾಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಡಿಜಿಟಲ್ ಕಂದರ ನಿವಾರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂತ್ರಜ್ಞಾನದ ಸೌಲಭ್ಯಗಳು ರಾಜ್ಯದ ಎಲ್ಲ ನಾಗರಿಕರಿಗೂ ತಲುಪಬೇಕಿದೆ. ಇದಕ್ಕಾಗಿ ಡಿಜಿಟಲ್ ಕಂದರ ನಿವಾರಣೆಗೆ ಅಗತ್ಯವಿರುವ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ನಗರದ ಬೆಂಗಳೂರು ಅರಮನೆ ಆವರಣದಲ್ಲಿ ಬುಧವಾರ ಆರಂಭವಾದ 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ–2023' ಉದ್ಘಾಟಿಸಿ ಮಾತನಾಡಿದ ಅವರು, 'ಡಿಜಿಟಲ್ ಕಂದರವನ್ನು ಮುಚ್ಚಲು ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು. ದತ್ತಾಂಶ ಮತ್ತು ಅವುಗಳ ವಿಶ್ಲೇಷಣೆಯನ್ನು ಬಳಸಿಕೊಂಡು ಆಡಳಿತದಲ್ಲಿ ಮಾಹಿತಿ ಆಧಾರಿತ ಅಭಿಯಾನ ಕೈಗೊಳ್ಳುತ್ತೇವೆ. ಬೆಂಗಳೂರಿನ ಆಚೆಗೆ ಅಗತ್ಯ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡುವ ಮೂಲಕ ಈ ಕಂದರವನ್ನು ತೊಡೆದುಹಾಕಲು ಪ್ರಯತ್ನಿಸಲಾಗುವುದು' ಎಂದು ಹೇಳಿದರು.

ಮುಂದಿನ ನಾವೀನ್ಯತಾ ಅಲೆಯನ್ನು ಎದುರಿಸಲು ರಾಜ್ಯ ಸರ್ಕಾರ ಸಜ್ಜಾಗಲಿದೆ. ಅದಕ್ಕೆ ಅಗತ್ಯವಿರುವ ಮೂಲಸೌಕರ್ಯ ಅಭಿವೃದ್ಧಿಗೆ ಹೂಡಿಕೆ ಮತ್ತು ಇತರ ನೆರವು ಒದಗಿಸಲಾಗುವುದು. ಉದ್ಯಮ ಮತ್ತು ಶಿಕ್ಷಣ ಕ್ಷೇತ್ರಗಳ ನಡುವೆ ಸಮನ್ವಯ ಸಾಧಿಸುವುದು ಹಾಗೂ ಪೂರಕವಾದ ನೀತಿಗಳನ್ನು ರೂಪಿಸುವ ಕೆಲಸವನ್ನೂ ಸರ್ಕಾರ ಮಾಡಲಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಕರ್ನಾಟಕದಲ್ಲಿ 5,500 ಉದ್ದಿಮೆಗಳು ಮತ್ತು 750 ಬಹುರಾಷ್ಟ್ರೀಯ ಕಂಪನಿಗಳಿವೆ. ರಾಜ್ಯದಿಂದ 8,500 ಕೋಟಿ ಅಮೆರಿಕನ್ ಡಾಲರ್‌ಗಳಷ್ಟು ಮೌಲ್ಯದ ಮಾಹಿತಿ ತಂತ್ರಜ್ಞಾನದ ಉತ್ಪನ್ನಗಳ ರಫ್ತು ನಡೆಯುತ್ತಿದೆ. ವಿಭಿನ್ನ ವಲಯಗಳಲ್ಲಿ ಹೊಸ ಉದ್ಯಮಗಳನ್ನು ಬೆಂಬಲಿಸುವ ಕೆಲಸ ಮಾಡಬೇಕಿದೆ. ಹೊಸ ಹೂಡಿಕೆ ಮತ್ತು ಹೊಸ ವಹಿವಾಟುಗಳ ಮೂಲಕ ಮಿತಿಗಳನ್ನು ಮೀರುವ ಸವಾಲು ಇದೆ. ಅದಕ್ಕೆ ಪೂರಕವಾದ ವ್ಯವಸ್ಥೆಯನ್ನು ರೂಪಿಸುವ ಬದ್ಧತೆಯನ್ನು ಸರ್ಕಾರ ಹೊಂದಿದೆ ಎಂದರು.


ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಉದ್ಘಾಟನೆ ಸಮಾರಂಭದಲ್ಲಿ ಉಪಸ್ಥಿತರಿದ್ದ ದೇಶ–ವಿದೇಶಗಳ ಪ್ರತಿನಿಧಿಗಳು –ಪ್ರಜಾವಾಣಿ ವಾರ್ತೆ

ಆವಿಷ್ಕಾರದಿಂದ ಉತ್ಪಾದನೆವರೆಗೆ ಮುಂಚೂಣಿಯಲ್ಲಿ: ಪ್ರಿಯಾಂಕ್

'ಬೆಂಗಳೂರು ಬಿಪಿಒಗಳ ಕೇಂದ್ರವಾಗಿತ್ತು. ನಂತರದಲ್ಲಿ ಸಂಶೋಧನೆ, ಅಭಿವೃದ್ಧಿ, ಆವಿಷ್ಕಾರಗಳ ತಾಣವಾಯಿತು. ಈಗ ಉತ್ಪಾದನೆಯಲ್ಲೂ ಮುಂಚೂಣಿ ಸ್ಥಾನ ಗಳಿಸಿದೆ. ರಾಜ್ಯದ ಪಾಲಿಗೆ ಇದೊಂದು ಮಹತ್ತರವಾದ ಸಾಧನೆ' ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಎಲೆಕ್ಟ್ರಾನಿಕ್ಸ್ ವಿನ್ಯಾಸ, ಯಂತ್ರೋಪಕರಣಗಳ ಬಿಡಿ ಭಾಗಗಳ ಉತ್ಪಾದನೆ, ಏರೋಸ್ಪೇಸ್ ಮತ್ತು ರಕ್ಷಣಾ ವಲಯ, ಜೈವಿಕ ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಆಡಳಿತದಲ್ಲಿನ ಬದ್ಧತೆಯ ಕಾರಣದಿಂದ ಇದೆಲ್ಲವೂ ಸಾಧ್ಯವಾಗಿದೆ' ಎಂದರು.

'ಅಭಿವೃದ್ಧಿಪರ ವಾತಾವರಣ ಸೃಷ್ಟಿ': 'ಉದ್ಯಮಶೀಲತೆ ಮತ್ತು ಹೂಡಿಕೆ ಆಕರ್ಷಣೆಗೆ ಪೂರಕವಾದ ಕ್ರಮಗಳ ಮೂಲಕ ಅಭಿವೃದ್ಧಿಪರ ವಾತಾವರಣ ಸೃಷ್ಟಿಸುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಪ್ರತಿಕ್ರಿಯೆಗಳು

ಹವಾಮಾನ ಸಂಬಂಧಿ ತಂತ್ರಜ್ಞಾನ ಮತ್ತು ಫಿನ್‌ಟೆಕ್ ಕ್ಷೇತ್ರಗಳಲ್ಲಿ ವೇಗವಾದ ಬೆಳವಣಿಗೆ ಇದೆ. ಈಗ ಭೂ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ. ಇದರಿಂದ ಫಿನ್‌ಟೆಕ್ ಕ್ಷೇತ್ರಕ್ಕೆ ಅನುಕೂಲಗಳಾಗಲಿದೆ.

ಪ್ರಶಾಂತ್ ಪ್ರಕಾಶ್
ನವೋದ್ಯಮಗಳಿಗೆ ಸಂಬಂಧಿಸಿದ ವಿಷನ್ ಗ್ರೂಪ್ ಅಧ್ಯಕ್ಷ

ಕಳೆದ ವರ್ಷ ಆರ್ಥಿಕ ಕುಸಿತವಿದ್ದ ಕಾರಣದಿಂದ ಜಾಗತಿಕ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರವು ಶೇಕಡ 9ರಷ್ಟು ಪ್ರಗತಿ ದಾಖಲಿಸಿತ್ತು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯವು ಹೊಂದಿರುವ ನಾಯಕತ್ವವನ್ನು ಉಳಿಸಿಕೊಳ್ಳಲು ಸೂಕ್ತವಾದ ಕಾರ್ಯತಂತ್ರ ರೂಪಿಸಬೇಕು.

ಕ್ರಿಸ್ ಗೋಪಾಲಕೃಷ್ಣನ್
ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ವಿಷನ್ ಗ್ರೂಪ್ ಅಧ್ಯಕ್ಷ

ಪ್ರತಿ ವರ್ಷ ಐ.ಟಿ ಕ್ಷೇತ್ರದಲ್ಲಿ ಕೆಲಸ ಮಾಡಲು ಕರ್ನಾಟಕಕ್ಕೆ ಬರುವವರ ಸಂಖ್ಯೆ ನಾಲ್ಕು ಲಕ್ಷದಷ್ಟಿದೆ. ಇದರಿಂದಾಗಿ ರಾಜ್ಯದ ಮೇಲೆ ಹೆಚ್ಚು ಒತ್ತಡವಿದೆ. ಅದಕ್ಕೆ ಪೂರಕವಾಗಿ ಮೂಲಸೌಕರ್ಯ ಅಭಿವೃದ್ಧಿ ಆಗಬೇಕಿದೆ.

ರಿಷಾದ್ ಪ್ರೇಮ್‌ಜಿ, ವಿಪ್ರೊ ಕಾರ್ಯಕಾರಿ ಅಧ್ಯಕ್ಷ

ಉದ್ಯಮ ಮತ್ತು ಸರ್ಕಾರದ ನಡುವಣ ಉತ್ತಮ ಸಂಬಂಧವೇ ಕರ್ನಾಟಕವು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಎತ್ತರಕ್ಕೆ ಬೆಳೆಯಲು ಕಾರಣ. ಕರ್ನಾಟಕವು ಜೈವಿಕ ತಂತ್ರಜ್ಞಾನ ಕ್ಷೇತ್ರದ ಬೃಹತ್ ಉದ್ದಿಮೆಗಳು ಹಾಗೂ ನವೋದ್ಯಮಗಳ ತವರಾಗಿದೆ. ಸರ್ಕಾರವು ಆರಂಭದ ಹಂತದಲ್ಲಿ ಮಾಡಿದ್ದ ಹೂಡಿಕೆ ಈಗ ಫಲ ನೀಡುತ್ತಿದೆ.

ಕಿರಣ್ ಮಜುಂದಾರ್ ಷಾ
ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷನ್ ಗ್ರೂಪ್ ಅಧ್ಯಕ್ಷೆ

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗೆ ಕರ್ನಾಟಕ ಸರ್ಕಾರವು ನಿರಂತರ ಬೆಂಬಲ ನೀಡುತ್ತಿದೆ. ನವೋದ್ಯಮಗಳ ಬೆಂಬಲಕ್ಕೆ ವಿಶೇಷ ಸೌಲಭ್ಯ ನೀಡಲಾಗುತ್ತಿದೆ.

ಅರವಿಂದಕುಮಾರ್
ಸಾಫ್ಟ್‌ವೇರ್ ಪಾರ್ಕ್ ಆಫ್ ಇಂಡಿಯಾದ ಮಹಾನಿರ್ದೇಶಕ

ಭಾರತವು ಬಳಕೆದಾರ ಕೇಂದ್ರಿತ ಆರ್ಥಿಕತೆಯಿಂದ ಉತ್ಪಾದನಾ ಕೇಂದ್ರಿತ ಆರ್ಥಿಕತೆಯತ್ತ ಸಾಗುತ್ತಿದೆ. ಈ ದಿಸೆಯಲ್ಲಿ ಸಾಮರ್ಥ್ಯ ವೃದ್ಧಿ ಸೇರಿದಂತೆ ಹಲವು ಸವಾಲುಗಳಿವೆ. ವಿಶೇಷ ಉತ್ತೇಜನಗಳನ್ನು ನೀಡುವ ಮೂಲಕ ಉತ್ಪಾದನಾ ಕ್ಷೇತ್ರವನ್ನು ಸರ್ಕಾರವು ಬೆಂಬಲಿಸಬೇಕು.

ನಿವೃತಿ ರೈ, ವ್ಯವಸ್ಥಾಪಕ ನಿರ್ದೇಶಕಿ, ಇನ್‌ವೆಸ್ಟ್ ಇಂಡಿಯಾ

ಕರ್ನಾಟಕದಲ್ಲಿ ಉದ್ಯಮಸ್ನೇಹಿ ಆಡಳಿತವಿದೆ. ಅಧಿಕಾರಶಾಹಿಯಲ್ಲಿ ತೊಡಕುಗಳಿಲ್ಲ. ಇದರಿಂದಾಗಿ ಹೂಡಿಕೆದಾರರು ಕರ್ನಾಟಕದಲ್ಲಿ ಕೆಲಸ ಮಾಡಲು ಬಯಸುತ್ತಾರೆ.

ಮಾರ್ಕ್ ಪೇಪರ್‌ಮಾಸ್ಟರ್
ಕಾರ್ಯಕಾರಿ ಉಪಾಧ್ಯಕ್ಷ, ಎಎಂಡಿ ಸಮೂಹ

ಸಿಎಸ್‌ಆರ್ ನಿಧಿ ಗ್ರಾಮೀಣ ಶಾಲೆಗಳಿಗಿರಲಿ: ಡಿಕೆಶಿ

'ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ಗ್ರಾಮೀಣ ಪ್ರದೇಶಗಳ ಶಾಲೆಗಳ ಅಭಿವೃದ್ಧಿಗೆ ಮೀಸಲಿಡಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಯಮಿಗಳಲ್ಲಿ ಮನವಿ ಮಾಡಿದರು.

ಶೃಂಗಸಭೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಹೊಸ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರುವ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ಪೂರಕವಾಗಿ ಶಾಲೆಗಳ ಅಭಿವೃದ್ಧಿಗೆ ಕಾರ್ಪೊರೇಟ್ ಕಂಪನಿಗಳು ಕೈಜೋಡಿಸಬೇಕು' ಎಂದರು.


ಬೆಂಗಳೂರಿನಲ್ಲಿ ಬುಧವಾರ ಆರಂಭವಾದ ಬೆಂಗಳೂರು ಟೆಕ್ ಸಮ್ಮಿಟ್ ನಲ್ಲಿ ಜನರ ಗಮನ ಸೆಳೆದ ಚಂದ್ರಯಾನದ ಮಾದರಿ –ಪ್ರಜಾವಾಣಿ ಚಿತ್ರ

ಚಂದ್ರಯಾನ ವೀಕ್ಷಣೆಗೆ 'ಬಾಹ್ಯಾಕಾಶ' ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರಯಾನ–3ರ ಯಶಸ್ಸು ಇಡೀ ಜಗತ್ತನ್ನೇ ಭಾರತದತ್ತ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯತ್ತ(ಇಸ್ರೊ) ಕುತೂಹಲದಿಂದ ನೋಡುವಂತೆ ಮಾಡಿದೆ. ಈ ಯೋಜನೆ ಕುರಿತ ಸಂಪೂರ್ಣ ಮಾಹಿತಿಗಾಗಿ ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಪ್ರತ್ಯೇಕ ಆವರಣವನ್ನೇ ತೆರೆಯಲಾಗಿದೆ.

ಗೋಲಾಕಾರದ ಟೆಂಟ್‌ನೊಳಗೆ ಬಾಹ್ಯಾಕಾಶದ ಪ್ರತಿಕೃತಿ ಸಿದ್ಧಪಡಿಸಲಾಗಿದೆ. ಅದರೊಳಗೆ ವಿಕ್ರಂ ಲ್ಯಾಂಡರ್ ಹಾಗೂ ಪ್ರಜ್ಞಾನ್ ರೋವರ್‌ನ ನೈಜ ಗಾತ್ರದ ಪ್ರತಿಕೃತಿಗಳನ್ನು ಇಡಲಾಗಿದೆ. ಚಂದ್ರನ ಮೇಲೆ ಆ.23 ರಂದು ಸುರಕ್ಷಿತವಾಗಿ ಇಳಿದ ವಿಕ್ರಂ ಲ್ಯಾಂಡರ್‌ನ ಚಿತ್ರಣವೇ ಇಲ್ಲಿ ಕಣ್ಣಮುಂದೆ ಬಂದು ನಿಲ್ಲುವಂತಿದೆ. ಲ್ಯಾಂಡರ್‌ನಿಂದ ರ್‍ಯಾಂಪ್ ಮೂಲಕ ಹೊರಬಂದ ರೋವರ್‌ನ ಚಿತ್ರಣವೂ ಇಲ್ಲಿ ಕಾಣಸಿಗಲಿದೆ.

ಚಂದ್ರಯಾನ ಯೋಜನೆ ಕುರಿತು ಇಸ್ರೊ ತಂತ್ರಜ್ಞರು ಮಾಹಿತಿ ನೀಡುತ್ತಾರೆ. ಜತೆಗೆ ಚಂದ್ರಯಾನ ಯೋಜನೆಯ ಪ್ರತಿ ಹಂತದ ಚಿತ್ರಗಳು, ಅದರ ಮಾಹಿತಿಗಳ ಭಿತ್ತಿಪತ್ರಗಳನ್ನೂ ಪ್ರದರ್ಶಿಸಲಾಗಿದೆ. ಜತೆಗೆ, ಇಸ್ರೊ ಯೋಜನೆಗಳಲ್ಲಿ ಬಳಸುವ ಪ್ರಮುಖ ರಾಕೆಟ್‌ಗಳ ಪ್ರತಿಕೃತಿಗಳೂ ಇವೆ.

ಇವೆಲ್ಲದರ ಜೊತೆಗೆ, ವಿದ್ಯಾರ್ಥಿ ಸಮುದಾಯವನ್ನು ಆಕರ್ಷಿಸುತ್ತಿರುವುದು, 'ತಾರೇ ಜಮೀನ್ ಪರ್' ಎಂಬ ತಾರಾಲಯ. ಇದರೊಳಗೆ ಬಾಹ್ಯಾಕಾಶದ ಚಿತ್ರಣದ ಜತೆಗೆ, ಮಾಹಿತಿ ಲಭ್ಯ. ತಾರಾಲಯ ಪ್ರವೇಶಕ್ಕೆ ಯುವಕ ಹಾಗೂ ಯುವತಿಯರು ಸರತಿ ಸಾಲಿನಲ್ಲಿ ನಿಂತು ಕಾಯುತ್ತಿದ್ದ ದೃಶ್ಯ ಕಂಡುಬಂತು.

ಲಂಚ: ಸಿಬಿಎಫ್‌ಸಿ ಅಧಿಕಾರಿ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾವೊಂದಕ್ಕೆ ಸೆನ್ಸಾರ್ ಪ್ರಮಾಣಪತ್ರ ನೀಡಲು ₹ 12,000 ಲಂಚ ಪಡೆಯುತ್ತಿದ್ದ ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಪ್ರಾದೇಶಿಕ ಅಧಿಕಾರಿ ಪ್ರಶಾಂತ್ ಕುಮಾರ್ ಮತ್ತು ಇಬ್ಬರು ಮಧ್ಯವರ್ತಿಗಳನ್ನು ಸಿಬಿಐ ಮಂಗಳವಾರ ಬಂಧಿಸಿದೆ.

ನಿರ್ಮಾಪಕ ಎ.ವಿ. ನಾಗರಾಜ ಎಂಬುವವರು ಸಂವಿಧಾನ ಸಿನಿ ಕಂಬೈನ್ಸ್ ಮೂಲಕ 'ಅಡವಿ' ಹೆಸರಿನ ಸಿನಿಮಾ ನಿರ್ಮಿಸಿದ್ದರು. ಸಿನಿಮಾವನ್ನು ಸೆನ್ಸಾರ್‌ಗಾಗಿ ಸಲ್ಲಿಸಲಾಗಿತ್ತು. 'ಸಬ್ ಟೈಟಲ್' ನೀಡಿರುವುದರಲ್ಲಿ ಇದ್ದ ಲೋಪಗಳನ್ನು ಆಧರಿಸಿ ಸೆನ್ಸಾರ್ ಪ್ರಮಾಣಪತ್ರ ನೀಡಲಾಗದು ಎಂದಿದ್ದ ಪ್ರಾದೇಶಿಕ ಅಧಿಕಾರಿ, ₹ 15,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ನಿರ್ಮಾಪಕರು ಭೇಟಿ ಮಾಡಿ ಚೌಕಾಸಿ ನಡೆಸಿದ್ದರು. ₹ 12,000 ಲಂಚ ಕೊಟ್ಟರೆ ಸೆನ್ಸಾರ್ ಪ್ರಮಾಣಪತ್ರ ನೀಡುವುದಾಗಿ ಅಧಿಕಾರಿ ತಿಳಿಸಿದ್ದರು. ಈ ಕುರಿತು ನಿರ್ಮಾಪಕರು ಸಿಬಿಐನ ಭ್ರಷ್ಟಾಚಾರ ನಿಗ್ರಹ ದಳದ ಬೆಂಗಳೂರು ಘಟಕಕ್ಕೆ ದೂರು ನೀಡಿದ್ದರು.

ಮಲ್ಲೇಶ್ವರದಲ್ಲಿರುವ ಥಿಯೇಟರ್ ಒಂದಕ್ಕೆ ಬಂದು ಹಣ ತಲುಪಿಸುವಂತೆ ಪ್ರಶಾಂತ್ ಕುಮಾರ್ ಸೂಚಿಸಿದ್ದರು. ಮಂಗಳವಾರ ಸಂಜೆ ನಾಗರಾಜ ಹಣದ ಸಮೇತ ಅಲ್ಲಿಗೆ ಹೋಗಿದ್ದರು. ಅಧಿಕಾರಿಯ ಸೂಚನೆಯಂತೆ ಪೃಥ್ವಿರಾಜ್ ಮತ್ತು ರವಿ ಎಂಬ ಖಾಸಗಿ ವ್ಯಕ್ತಿಗಳು ಹಣ ಪಡೆದಿದ್ದರು. ತಕ್ಷಣ ದಾಳಿಮಾಡಿದ ಸಿಬಿಐ ಅಧಿಕಾರಿಗಳು ಮೂವರನ್ನೂ ಬಂಧಿಸಿದ್ದರು.

'ಕಾರ್ಯಾಚರಣೆ ಬಳಿಕ ಸಿಬಿಎಫ್‌ಸಿ ಪ್ರಾದೇಶಿಕ ಅಧಿಕಾರಿಯ ಮನೆಯ ಮೇಲೆ ದಾಳಿಮಾಡಿ, ಶೋಧ ನಡೆಸಲಾಗಿದೆ. ಅಲ್ಲಿ ₹ 3 ಲಕ್ಷ ನಗದು ಪತ್ತೆಯಾಗಿದ್ದು, ವಶಪಡಿಸಿಕೊಳ್ಳಲಾಗಿದೆ. ಮೂವರು ಆರೋಪಿಗಳನ್ನೂ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿತ್ತು. ನ್ಯಾಯಾಲಯದ ಆದೇಶದಂತೆ ಮೂವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಸಿಬಿಐ ತಿಳಿಸಿದೆ.

ನಗರದಲ್ಲಿ ಇಂದು

'ಅಂತರಶಾಲಾ ಸೃಜನಶೀಲ ಬರವಣಿಗೆ' ಸ್ಪರ್ಧೆ: ಆಯೋಜನೆ: ಡೆಕ್ಕನ್ ಹೆರಾಲ್ಡ್, ಸ್ಥಳ: ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 9.30

ಕರ್ನಾಟಕ ರಾಜ್ಯೋತ್ಸವ, ಕನಕದಾಸರ ಜಯಂತಿ: ಉದ್ಘಾಟನೆ: ವಿಜಯ ಆರ್., ಅತಿಥಿ: ಪಟೇಲ್ ಪಾಂಡು, ಅಧ್ಯಕ್ಷತೆ: ಎನ್. ಕಾಮರಾಜ್, ಉಪಸ್ಥಿತಿ: ಬಿ.ಕೆ. ಜಯಕುಮಾರ್, ಆರ್. ಮಂಜುಳ, ಬಿ.ಕೆ. ಅಶ್ವತ್ಥನಾರಾಯಣ, ಟಿ. ರಾಮಣ್ಣ, ಬಿ.ಎಂ. ಗುಂಡಣ್ಣ, ಬಿ.ಎಚ್. ಪ್ರಭಾಕರ್, ಬಿ.ಕೆ. ಜಯರಾಂ, ಬಿ.ಎಚ್. ಕೃಷ್ಣ, ಆಯೋಜನೆ: ಶಾರದಾ ವಿದ್ಯಾಪೀಠ, ಶಾರದಾ ಪದವಿಪೂರ್ವ ಕಾಲೇಜು, ಬ್ಯಾಟರಾಯನಪುರ, ಬೆಳಿಗ್ಗೆ 10

ಕರ್ನಾಟಕ ರಾಜ್ಯೋತ್ಸವ: ಧ್ವಜಾರೋಹಣ: ಸಿ. ಕೃಷ್ಣಪ್ಪ, ಉಪಸ್ಥಿತಿ: ವೆಂಕಟೇಶಲು, ಎಚ್.ಎಂ. ಸ್ವಾಮಿ, ಸನ್ಮಾನ: ಆರ್. ನರಸಿಂಹಯ್ಯ, ಉದ್ಘಾಟನೆ: ಬಿಳಿಕೆರೆ ಲಿಂಗರಾಜಯ್ಯ, ಅಧ್ಯಕ್ಷತೆ: ರುದ್ರೇಗೌಡ, ಅತಿಥಿಗಳು: ರಶ್ಮಿ ರವಿಕಿರಣ್, ರಿಚರ್ಡ್ ಲೂಯಿಸ್, ಆಯೋಜನೆ: ಸರ್ವೋದಯ ಹಿರಿಯ ನಾಗರಿಕರ ವೇದಿಕೆ, ಸ್ಥಳ: ಈಸ್ಟ್‌ವೆಸ್ಟ್ ಸ್ಕೂಲ್ ಆವರಣ, ಸುಬ್ರಮಣ್ಯನಗರ, ಬೆಳಿಗ್ಗೆ 10ರಿಂದ

ಕರ್ನಾಟಕ ರಾಜ್ಯೋತ್ಸವ: ಧ್ವಜಾರೋಹಣ: ಕರೀಗೌಡ ಬೀಚನಹಳ್ಳಿ, ಅತಿಥಿಗಳು: ಎಂ. ಕೃಷ್ಣಮೂರ್ತಿ, ಬಿ.ಎಸ್. ದಯಾ ಸಾಗರ್, ಎನ್.ಆರ್. ಅನುಪಮ, ಆಯೋಜನೆ: ಐ.ಎಸ್.ಐ ಕಾರ್ಮಿಕರ ಒಕ್ಕೂಟ, ಸ್ಥಳ: ಭಾರತೀಯ ಸಾಂಖ್ಯಿಕ ಸಂಸ್ಥೆ, ಬೆಳಿಗ್ಗೆ 10.45

ಕನಕದಾಸರ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಸಿದ್ಧರಾಮಾನಂದ ಸ್ವಾಮೀಜಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಜಮೀರ್ ಅಹಮದ್ ಖಾನ್, ಸುರೇಶ್ ಬಿ.ಎಸ್., ನಸೀರ್ ಅಹ್ಮದ್, ಕೆ. ಗೋವಿಂದರಾಜ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

'ಕನ್ನಡ ಸಾಹಿತ್ಯ ಮತ್ತು ಸಂವಿಧಾನ': ಆಯೋಜನೆ: ಬಹುತ್ವ ಕರ್ನಾಟಕ, ಸ್ಥಳ: ಇನ್ಫೆಂಟ್ರಿ ರಸ್ತೆ, ಬಾಲಾಜಿ ಆರ್ಟ್ ಗ್ಯಾಲರಿ ಪಕ್ಕ, ಸಂಜೆ 4ರಿಂದ

'ಎಚ್.ಎಸ್. ಪಾರ್ವತಿ' ದತ್ತಿ ಪ್ರಶಸ್ತಿ ಪ್ರದಾನ: ಬರಗೂರು ರಾಮಚಂದ್ರಪ್ಪ, ಅಭಿನಂದನಾ ನುಡಿ: ಡಾ. ವಸುಂಧರಾ ಭೂಪತಿ, ಪ್ರಶಸ್ತಿ ಪುರಸ್ಕೃತರು: ಇಂದಿರಾ ಹೆಗ್ಗಡೆ, ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಬಿ.ಎಂ. ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10


ಬರಗೂರು ರಾಮಚಂದ್ರಪ್ಪ

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ರೊ. ಮುನಿರಾಜು ಎನ್., ಅತಿಥಿಗಳು: ಶಿವಕುಮಾರ್ ಎ.ಆರ್., ಚಿಕ್ಕಣ್ಣ, ರಾಜಣ್ಣ, ಎಸ್.ಎಸ್. ಪಡಶೆಟ್ಟಿ, ಕೋ.ಲ. ರಂಗನಾಥ್ ರಾವ್, ಎಂ.ಜಿ. ಫಣಿರಾಜ್, ಎಸ್. ಸತೀಶ್ ರೆಡ್ಡಿ, ಅಧ್ಯಕ್ಷತೆ: ಡಬ್ಲ್ಯು. ಕೆ. ವೆಂಕಟೇಶಮೂರ್ತಿ, ಆಯೋಜನೆ: ಸಿರಿಗನ್ನಡ ಮಿತ್ರ ತಂಡ, ಸ್ಥಳ: ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರ, ಸಂಜೆ 4

'ಹರಿಸರ್ವೋತ್ತಮ' ನೃತ್ಯರೂಪಕ ಪ್ರದರ್ಶನ: ಪ್ರಸ್ತುತಿ: ಪ್ರಭಾತ ಕಲಾ ತಂಡ, ಆಯೋಜನೆ: ನ್ಯಾಯಸುಧಾ ಮಂಗಳ ಮಹೋತ್ಸವ, ಸತ್ಯಪ್ರಮೋದ ತೀರ್ಥರ ಪಾದುಕಾ ಮಹಾ ಸಮಾರಾಧನಾ, ಸ್ಥಳ: ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಪ್ರಣವಾಂಜಲಿ ಆರ್ಟ್ಸ್ ಆಫ್ ಪರ್ಫಾರ್ಮಿಂಗ್ ಸಂಸ್ಥೆಯ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ರಸಪ್ರಶ್ನೆ ಕಾರ್ಯಕ್ರಮ

ನಗರದ ಕಬ್ಬನ್ ಉದ್ಯಾನದಲ್ಲಿರುವ ಬಾಲಭವನದಲ್ಲಿ ಬುಧವಾರ ನಡೆದ 'ಡೆಕ್ಕನ್ ಹೆರಾಲ್ಡ್' ಮಾಸ್ಟರ್‌ಮೈಂಡ್ ಅಂತರಶಾಲಾ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿಗಳ ವಿಭಾಗದಲ್ಲಿ (ಎಡದಿಂದ) ಕಾರ್ಮೆಲ್ ಇಂಗ್ಲಿಷ್ ಶಾಲೆಯ ಸರ್ಜಿತ್ ಎಸ್, ದರ್ಶೀಲ್ ವಿ (ಪ್ರಥಮ ಸ್ಥಾನ), ಕೆ. ಕಾಮರಾಜ ರಸ್ತೆಯ ಆರ್ಮಿ ಪಬ್ಲಿಕ್ ಸ್ಕೂಲ್‌ನ ಗಿಲ್ಬರ್ಟ್ ಜೋಸೆಫ್, ಆರ್ಯನ್ ಸಪ್ರಾ (ದ್ವಿತೀಯ ಸ್ಥಾನ), ವಿದ್ಯಾಮಂದಿರ ಹೈಸ್ಕೂಲ್‌ನ ವಿಷ್ಣು ವಿ. ಕಾರಂತ್, ಸಿ.ಎಸ್. ರಾಘವ್ ಸಿಂಹನ್ (ತೃತೀಯ ಸ್ಥಾನ), ಐಟಿಐ ಸೆಂಟ್ರಲ್ ಸ್ಕೂಲ್‌ನ ಈಶ್ವರ್ ಸಾಯಿ, ನಿವೇದ್ ನಂಬೀಯಾರ್ (ನಾಲ್ಕನೆ ಸ್ಥಾನ), ಕಿರಿಯರ ವಿಭಾಗದಲ್ಲಿ (ಎಡದಿಂದ ಕುಳಿತುಕೊಂಡವರು) ಬಿಎನ್‌ಎಂ ಪಬ್ಲಿಕ್ ಶಾಲೆಯ ಗೌತಮ್ ಕೃಷ್ಣಮೂರ್ತಿ, ಆರ್ಯ ಆರ್ ಜನ್ನು (ಪ್ರಥಮ ಸ್ಥಾನ), ಪದ್ಮನಾಭನಗರದ ಕಾರ್ಮೆಲ್ ಇಂಗ್ಲಿಷ್ ಶಾಲೆಯ ಸುವಿತ್ ಎಸ್.ಕೆ., ಆರುಷ್ ಕೆ (ದ್ವಿತೀಯ ಸ್ಥಾನ), ಶ್ರೀವಾಣಿ ಪಬ್ಲಿಕ್ ಶಾಲೆಯ ಶ್ರೀಶ್ ಇನಾಮದಾರ್, ಸಂಕೃಷ್ಣ ಪಂಡಿತ್ ಟಿ.ವಿ. (ತೃತೀಯ ಸ್ಥಾನ), ಆರ್‌ಪಿಇಎಸ್ ಜ್ಞಾನ ಸರಸ್ವತಿ ಪಬ್ಲಿಕ್ ಶಾಲೆಯ ಶಾರವರಿ ಆರ್, ಶ್ರವಣ ಕುಮಾರ್ ಎಚ್.ಎಲ್. (ನಾಲ್ಕನೆ ಸ್ಥಾನ) ಪಡೆದುಕೊಂಡಿದ್ದಾರೆ. ಕ್ವಿಜ್ ಮಾಸ್ಟರ್ ಮತ್ತು ಕರ್ನಾಟಕ ರಸಪ್ರಶ್ನೆ ಸಂಘದ ಉಪಾಧ್ಯಕ್ಷ ಅರುಲ್ ಮಣಿ ಇದ್ದಾರೆ –ಪ್ರಜಾವಾಣಿ ಚಿತ್ರ

'ನಿಗಮ–ಮಂಡಳಿ: ಮೊದಲ ಬಾರಿ ಶಾಸಕರಾದವರಿಗೆ ಸ್ಥಾನ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊದಲ ಬಾರಿ ಆಯ್ಕೆಯಾದ ಶಾಸಕರಿಗೆ ನಿಗಮ–ಮಂಡಳಿಗಳಲ್ಲಿ ಅವಕಾಶ ನೀಡುವುದಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ನಿಗಮ-ಮಂಡಳಿಗಳಿಗೆ ಅಧ್ಯಕ್ಷರ ನೇಮಕಾತಿ ಕುರಿತು ಸುದ್ದಿಗಾರರು ಕೇಳಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್, 'ಪಕ್ಷದ ರಾಜ್ಯ ಉಸ್ತುವಾರಿಯೂ ಆಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಪಟ್ಟಿಯನ್ನು ದೆಹಲಿಗೆ ತೆಗೆದುಕೊಂಡು ಹೋಗಿದ್ದಾರೆ. ಮೊದಲ ಬಾರಿಗೆ ಶಾಸಕರಾದವರಿಗೆ ಈ ಮೊದಲ ಪಟ್ಟಿಯಲ್ಲಿ ಅವಕಾಶ ನೀಡಿಲ್ಲ. ಮುಂದಿನ ಪಟ್ಟಿಯಲ್ಲಿ ಪಕ್ಷದ ಕಾರ್ಯಕರ್ತರಿಗೆ ಅವಕಾಶ ನೀಡಲು ತೀರ್ಮಾನಿಸಲಾಗಿದೆ' ಎಂದರು.

'ನಿಗಮ-ಮಂಡಳಿಗಳಲ್ಲಿ ಪಕ್ಷದ ಕಾರ್ಯಕರ್ತರಿಗೂ ಅವಕಾಶ ನೀಡುವ ಸಂಬಂಧ ನಾನು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸುರ್ಜೇವಾಲ ಚರ್ಚೆ ಮಾಡಿದ್ದೇವೆ. ತೆಲಂಗಾಣದಲ್ಲಿ ಚುನಾವಣಾ ಪ್ರಚಾರಕ್ಕೆ ತೆರೆ ಬಿದ್ದ ನಂತರ ನಮ್ಮ ಪಟ್ಟಿಯನ್ನು ಹೈಕಮಾಂಡ್ ನಾಯಕರು ಪರಿಶೀಲಿಸುವರು. 2- 3 ದಿನಗಳಲ್ಲಿ ಅಂತಿಮ ಪಟ್ಟಿಯನ್ನು ಅವರು ರವಾನಿಸಬಹುದು' ಎಂದರು.

'ನಾವು ನೀಡಿದ ಪಟ್ಟಿಯನ್ನು ಪಕ್ಷದ ವರಿಷ್ಠರು ಪರಿಶೀಲಿಸಬೇಕಿದೆ. ಏಕೆಂದರೆ, ಚುನಾವಣೆ ಸಂದರ್ಭದಲ್ಲಿ ಒಂದಷ್ಟು ಮಾತುಗಳನ್ನು ಕೊಟ್ಟಿರುತ್ತಾರೆ. ವರಿಷ್ಠರು ಯಾರಿಗೆ? ಏನು ಸೂಚನೆ ನೀಡಿದ್ದರೊ ಅದರ ಪ್ರಕಾರ ಅಂತಿಮ ಪಟ್ಟಿ ಸಿದ್ಧವಾಗಲಿದೆ' ಎಂದೂ ಅವರು ವಿವರಿಸಿದರು.

ಹೊಸ ಶಾಸಕರ ಅಸಮಾಧಾನ: ನಿಗಮ– ಮಂಡಳಿಗಳಿಗೆ ನೇಮಕ ಪಟ್ಟಿಯಲ್ಲಿ 25 ಶಾಸಕರಿಗೆ ಮಾತ್ರ ಅವಕಾಶ ನೀಡಲಾಗಿದ್ದು, ವಿಧಾನ ಪರಿಷತ್ ಸದಸ್ಯರು ಮತ್ತು ಮೊದಲ ಬಾರಿ ಆಯ್ಕೆಯಾದವರಿಗೆ ಸ್ಥಾನ ನೀಡಿಲ್ಲ ಎನ್ನಲಾಗಿದೆ. ಇದಕ್ಕೆ ಕೆಲವು ಪರಿಷತ್ ಸದಸ್ಯರು ಮತ್ತು ಮೊದಲ ಬಾರಿ ಆಯ್ಕೆಯಾದ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಹೇಳಲಾಗಿದೆ. ಕಾಂಗ್ರೆಸ್‌ನಲ್ಲಿ 40ಕ್ಕೂ ಹೆಚ್ಚು ಶಾಸಕರು ಮೊದಲ ಬಾರಿ ಆಯ್ಕೆಯಾಗಿದ್ದಾರೆ.

ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದವರಿಗೆ ಅನುಭವದ ಕೊರತೆಯಿದೆ ಎಂಬ ಕಾರಣಕ್ಕೆ ಅವಕಾಶ ನೀಡುತ್ತಿಲ್ಲವೇ? ತಾವು ಕೂಡಾ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿಲ್ಲವೇ? ತಮಗೂ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಕೆಲವು ಹೊಸ ಶಾಸಕರು ಆಗ್ರಹಿಸಿದ್ದಾರೆ. 'ಹಣ ವೆಚ್ಚ ಮಾಡಿ ನಾವು ಪರಿಷತ್ ಸದಸ್ಯರಾಗಿದ್ದೇವೆ. ನಮ್ಮನ್ನೂ ನಿಗಮ–ಮಂಡಳಿಗೆ ಪರಿಗಣಿಸಬೇಕು' ಎಂದು ಪರಿಷತ್‌ನ ಕೆಲವು ಸದಸ್ಯರು ಒತ್ತಾಯಿಸಿದ್ದಾರೆ.

ಪ್ಯಾಲಿಸ್ಟೀನ್ ಪರ ಕಾರ್ಯಕ್ರಮ: ಅನುಮತಿ ನಿರಾಕರಣೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ


ಬೆಂಗಳೂರು: ನಗರದ ರಂಗಶಂಕರದಲ್ಲಿ ಬುಧವಾರ ಗಾಯಕಿ ಎಂ.ಡಿ. ಪಲ್ಲವಿ ಸೇರಿದಂತೆ ಹಲವರ ನೇತೃತ್ವದಲ್ಲಿ ಪ್ಯಾಲಿಸ್ಟೀನ್ ಪರ ಆಯೋಜಿಸಿದ್ದ ಕಿರು ನಾಟಕ, ಕವನ ವಾಚನ ಕಾರ್ಯಕ್ರಮಕ್ಕೆ ಪೊಲೀಸರು ಅನುಮತಿ ನಿರಾಕರಿಸಿದ್ದರಿಂದ ಕಾರ್ಯಕ್ರಮವನ್ನು ಆಯೋಜಕರು ದಿಢೀರ್ ರದ್ದು ಮಾಡಿದರು.

ಪೊಲೀಸರ ನಡೆಗೆ ಆಯೋಜಕರೂ ಸೇರಿದಂತೆ ಹಲವರಿಂದ ಆಕ್ರೋಶ ವ್ಯಕ್ತವಾಗುತ್ತಿದೆ. ನಗರದಲ್ಲಿ ಪ್ಯಾಲಿಸ್ಟೀನ್ ಪರವಾಗಿ ಪ್ರತಿಭಟನೆ, ಸಭೆ ನಡೆಸಲು ಪೊಲೀಸರು ಅನುಮತಿ ನೀಡುತ್ತಿಲ್ಲ.

ಮಹಾತ್ಮ ಗಾಂಧಿ ರಸ್ತೆಯಲ್ಲಿ ನಡೆದಿದ್ದ ಪ್ರತಿಭಟನಕಾರರ ಮೇಲೆಯೂ ಪ್ರಕರಣ ದಾಖಲು ಮಾಡಲಾಗಿದೆ. 'ನಾವು ಎಲ್ಲಿದ್ದೀವಿ' ಎಂದು ಹಲವು ಹೋರಾಟಗಾರರು ಸಾಮಾಜಿಕ ಮಾಧ್ಯಮದಲ್ಲಿ ಪ್ರಶ್ನಿಸಿ, ಆಕ್ರೋಶ ಹೊರಹಾಕಿದ್ದಾರೆ.

'ಇದು ನಾಚಿಕೆಗೇಡಿನ ಸಂಗತಿ. ಕಲಾವಿದರು, ತಮ್ಮ ಅಭಿಮತ ಹೇಳುವುದಕ್ಕೂ ಆಸ್ಪದವಿಲ್ಲವೇ? ಸರ್ಕಾರ ಅನುಮತಿ ಕೊಡಬೇಕು' ಎಂದು ಸಾಹಿತಿ ರಹಮತ್ ತರೀಕೆರೆ ಆಗ್ರಹಿಸಿದ್ದಾರೆ.

'ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆಗೆ ನ್ಯಾಯಾಲಯ ಅನುಮತಿ ನೀಡಿದೆ. ಆದರೆ, ಅಲ್ಲಿಯೂ ಪ್ರತಿಭಟನೆ ಮಾಡದಂತೆ ತಡೆದಿದ್ದು ಏಕೆ? ಅಂದು ಎಡಪಕ್ಷಗಳು ಪ್ಯಾಲಿಸ್ಟೀನ್ ಕುರಿತು 'ಯುದ್ಧ ಬೇಡ ಶಾಂತಿ ಬೇಕು' ಎಂಬ ಘೋಷಣೆಯೊಂದಿಗೆ ಸಭೆ ನಡೆಸಲು ಕೇಳಲಾಗಿತ್ತು. ಆಗಲೂ ನಿರಾಕರಣೆ ಮಾಡಲಾಗಿತ್ತು. ನೂರಾರು ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಮಾಡಿದಾಗ ಎಲ್ಲರನ್ನೂ ಬಂಧಿಸಲಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ ಅಂದರೆ ಇದೇನಾ' ಎಂದು ರಂಗಕರ್ಮಿ ಶಶಿಕಾಂತ ಯಡಹಳ್ಳಿ ಪ್ರಶ್ನಿಸಿದ್ದಾರೆ.



'ಬಿ.ಎಲ್.ಆರ್ ಹಬ್ಬ' ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್‌ಬಾಕ್ಸಿಂಗ್ ಬೆಂಗಳೂರು ಫೌಂಡೇಷನ್' ವತಿಯಿಂದ ಡಿಸೆಂಬರ್ 1ರಿಂದ 11ರವರೆಗೆ 'ಬಿ.ಎಲ್.ಆರ್ ಹಬ್ಬ'ವನ್ನು ಆಯೋಜಿಸಲಾಗಿದೆ.

'ಈ ಬಾರಿಯ ಬೆಂಗಳೂರು ಹಬ್ಬದಲ್ಲಿ ನೃತ್ಯ, ರಂಗಭೂಮಿ, ಸಾಹಿತ್ಯ, ಪರಂಪರೆ, ವಿನ್ಯಾಸ, ಸೇರಿದಂತೆ 12 ವರ್ಗಗಳಾಗಿ ವಿಂಗಡಿಸಿ, 45 ಮಾದರಿಗಳಲ್ಲಿ 500ಕ್ಕೂ ಹೆಚ್ಚು ವೈವಿಧ್ಯಮಯ ಕಾರ್ಯಕ್ರಮಗಳು ನಗರದ ವಿವಿಧ ಉದ್ಯಾನಗಳು ಮತ್ತು ಬೀದಿಗಳು ಸೇರಿದಂತೆ 60ಕ್ಕೂ ಹೆಚ್ಚು ಸ್ಥಳಗಳಲ್ಲಿ ಹಬ್ಬವನ್ನು ಆಚರಿಸಲಾಗುತ್ತಿದೆ' ಎಂದು ಬೆಂಗಳೂರು ಹಬ್ಬದ ನಿರ್ದೇಶಕ ರವಿಚಂದರ್ ಹೇಳಿದ್ದಾರೆ.

'ಬೆಂಗಳೂರು ಲಿಟ್ ಫೆಸ್ಟ್, ಸಂಜೆ @ ಅಟ್ಟಾ ಗಲಾಟಾ, ಕಲಾ ಕೂಟ- ದೃಶ್ಯ ಕಲೆಗಳು, 25 ವರ್ಷದೊಳಗಿನವರ ಸಿಟಿ ಫಿಲ್ಮ್ ಫೆಸ್ಟ್‌ಸಿಟಿ ವಾಕ್ಸ್, ಹೆರಿಟೇಜ್ ವಾಕ್ಸ್, ಚುರು ಮುರಿ–ಸಂವಾದಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ' ಎಂದರು.

ಓಪನ್ ಸ್ಟ್ರೀಟ್ ಮೇಳ: ನಗರದಲ್ಲಿ 6 ರಸ್ತೆಗಳಲ್ಲಿ ಡಿ. 9 ಹಾಗೂ 10ರಂದು 'ಓಪನ್ ಸ್ಟ್ರೀಟ್ ಮೇಳ' ಆಯೋಜಿಸಲಾಗಿದೆ. ಮಳಿಗೆಗಳು, ಸ್ಟ್ರೀಟ್ ಆರ್ಟಿಸ್ಟ್ಸ್, ಅಲಂಕಾರ, ಬಂಟಿಂಗ್ ಮತ್ತು ಲೈಟಿಂಗ್ ಸೇರಿದಂತೆ ನಾಗರಿಕರನ್ನು ಸೆಳೆಯಲು ಆಕರ್ಷಕ ಚಟುವಟಿಕೆಗಳಿರುತ್ತವೆ.

ದಿ ಬಿಗ್ ಫೀಡ್ ಫೆಸ್ಟಿವಲ್: ಬೆಂಗಳೂರು ಅರಮನೆಯ ಮೈದಾನದಲ್ಲಿ ಡಿ. 9 ಹಾಗೂ 10 ರಂದು 'ಬಿಗ್ ಫೀಡ್ ಫೆಸ್ಟಿವಲ್' ಹಮ್ಮಿಕೊಳ್ಳಲಾಗಿದೆ. ಆಹಾರ ಮಳಿಗೆ, ಸಂಗೀತ ಕಾರ್ಯಕ್ರಮ, ವ್ಯಾಪಾರಿ ಮಳಿಗೆಗಳು ಹಾಗೂ ಇತರೆ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ ಎಂದು ರವಿಚಂದರ್ ಮಾಹಿತಿ ನೀಡಿದರು.

ಬೆಂಗಳೂರು ಹಬ್ಬದಲ್ಲಿ ಭಾಗವಹಿಸುವ ಆಸಕ್ತರು ಹೆಚ್ಚಿನ ವಿವರಣೆಯನ್ನು https://habba.unboxingblr.com/ ವೆಬ್‌ಸೈಟ್‌ನಲ್ಲಿ ಮೂಲಕ ಪಡೆದುಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರದ ವಿರುದ್ಧ ಕಾಂಗ್ರೆಸ್ ಶಾಸಕರು ದಂಗೆ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಶಾಸಕರೇ ಅವರ ಸರ್ಕಾರದ ವಿರುದ್ಧ ದಂಗೆ ಎದ್ದಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಶಾಸಕರ ಅತೃಪ್ತಿ ದಿನೇ ದಿನೇ ಹೆಚ್ಚುತ್ತಿದ್ದು, ಕಾಂಗ್ರೆಸ್ ಶಾಸಕ ಬಿ.ಆರ್.ಪಾಟೀಲರು ಮುಖ್ಯಮಂತ್ರಿ ಅವರಿಗೆ ಬರೆದ ಪತ್ರವೇ ಇದಕ್ಕೆ ತಾಜಾ ಉದಾಹರಣೆ ಎಂದರು.

ಬಿ.ಆರ್.ಪಾಟೀಲ ಒಬ್ಬರೇ ಅಲ್ಲ. ಹಲವು ಶಾಸಕರು ಅತೃಪ್ತಿ ಹೊರ ಹಾಕುತ್ತಲೇ ಬಂದಿದ್ದಾರೆ. ಕೆಲವು ಸಚಿವರ ನಡವಳಿಕೆ ಬಗ್ಗೆ ಶಾಸಕರು ಆಕ್ಷೇಪ ವ್ಯಕ್ತಪಡಿಸಿ ಬಹಿರಂಗ ಪತ್ರ ಬರೆಯುತ್ತಲೇ ಬಂದಿದ್ದಾರೆ. ಇದು ಜನರಿಗೆ ನೆಮ್ಮದಿ ಕೊಡುವ ಸರ್ಕಾರವಲ್ಲ. ಯಾರದ್ದೊ ದುಡ್ಡು ಯಲ್ಲಮ್ಮನ ಜಾತ್ರೆ ಎಂಬ ರೀತಿಯಲ್ಲಿ ಬೇರೆ ರಾಜ್ಯಗಳ ಚುನಾವಣೆಗೆ ಬೊಕ್ಕಸದ ಹಣವನ್ನು ಖರ್ಚು ಮಾಡುತ್ತಿದೆ ಎಂದು ಅಶೋಕ ಟೀಕಿಸಿದರು.

'ಗುತ್ತಿಗೆದಾರ ಅಂಬಿಕಾಪತಿ ನಿಧನದ ವಿಚಾರವನ್ನು ನೋಡಿದಾಗ ಅವರ ಮೇಲೆ ಎಷ್ಟು ಒತ್ತಡ ಇತ್ತು ಎಂಬುದು ಗೊತ್ತಾಗುತ್ತದೆ. ಹೃದಯಾಘಾತದಿಂದ ನಿಧನರಾದರೂ ಅವರ ಮೇಲೆ ಒತ್ತಡ ಇರುವುದಂತೂ ನಿಜ' ಎಂದರು.

ವೈಟಿಪಿಎಸ್: ದಾಖಲೆ ಉತ್ಪಾದನೆ

ಶಕ್ತಿನಗರ: ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ (ವೈಟಿಪಿಎಸ್) ಒಂದನೇ ವಿದ್ಯುತ್ ಘಟಕವು 800 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ಮಾಡಿದೆ.

ಪ್ರಸಕ್ತ ವರ್ಷ ವಿದ್ಯುತ್ ಘಟಕ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ವೈಟಿಪಿಎಸ್ ಪ್ರಭಾರ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ರಮೇಶ 'ಪ್ರಜಾವಾಣಿ'ಗೆ ಹೇಳಿದರು.

'ರೀಚಿಂಗ್ ಫಾರ್ ದ ಸ್ಟಾರ್ಸ್: ಎ ಕಾನ್ವರ್ಸೇಷನ್ ವಿಥ್ ನಾಸಾ ಆ್ಯಂಡ್ ಇಸ್ರೊ' ಕಾರ್ಯಕ್ರಮ

ವಿದ್ಯಾರ್ಥಿಗಳೊಂದಿಗೆ ಬಿಲ್, ರಾಕೇಶ್ ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವದಾದ್ಯಂತ ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನಕ್ಕೆ ಉತ್ಸುಕರಾಗಿದ್ದಾರೆ. ಇದರಿಂದ ಪ್ರಪಂಚದ ಅನೇಕ ರಹಸ್ಯಗಳನ್ನು ತೆರೆದಿಡಲಿದ್ದಾರೆ' ಎಂದು ನಾಸಾ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಹೇಳಿದರು.


ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಆ್ಯಂಡ್ ಟೆಕ್ನಾಲಜಿಕಲ್ ಮ್ಯೂಸಿಯಮ್ (ವಿಐಟಿಎಂ)ನಲ್ಲಿ ಏರ್ಪಡಿಸಿದ್ದ 'ರೀಚಿಂಗ್ ಫಾರ್ ದ ಸ್ಟಾರ್ಸ್: ಎ ಕಾನ್ವರ್ಸೇಷನ್ ವಿಥ್ ನಾಸಾ ಆ್ಯಂಡ್ ಇಸ್ರೊ' ಕಾರ್ಯಕ್ರಮದಲ್ಲಿ ಬಿಲ್ ನೆಲ್ಸನ್ ಹಾಗೂ ಭಾರತದ ಪ್ರಥಮ ಬಾಹ್ಯಾಕಾಶ ವಿಂಗ್ ಕಮಾಂಡರ್ (ನಿವೃತ್ತ) ರಾಕೇಶ್ ಶರ್ಮಾ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

'ಉತ್ಸುಕ ವಿದ್ಯಾರ್ಥಿಗಳು ಭವಿಷ್ಯದ ಅನ್ವೇಷಕರಾಗಿದ್ದು, ಮಾನವ ಕುಲವನ್ನು ಇನ್ನಷ್ಟು ಎತ್ತರಕ್ಕೆ ಕರೆದೊಯ್ಯಲಿದ್ದಾರೆ. ಇದಕ್ಕಾಗಿ ವಿದ್ಯಾರ್ಥಿಗಳಲ್ಲಿ ಅನ್ವೇಷಣೆಯ ಕುತೂಹಲ, ಪರಿಶ್ರಮ ಮತ್ತು ಉತ್ಸಾಹ ಅತ್ಯಂತ ಪ್ರಮುಖವಾದುದು' ಎಂದು ತಿಳಿಸಿದರು.

ವಿದ್ಯಾರ್ಥಿಗಳು, ನೆಲ್ಸನ್, ಭಾರತದ ಗಗನಯಾತ್ರಿ ರಾಕೇಶ್ ಶರ್ಮಾ ಅವರಿಂದ 8 ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಬಾಹ್ಯಾಕಾಶ ಸಂಶೋಧನೆ ಬೆಳವಣಿಗೆಗಳು, ವಿಜ್ಞಾನ, ಎಂಜಿನಿಯರ್ ಆಗಬಯಸುವವರಿಗೆ ಇರುವ ಅವಕಾಶಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ನೆಲ್ಸನ್, 'ನಿಸಾರ್' (ನಾಸಾ ಇಸ್ರೊ ಸಿಂಥೆಟಿಕ್ ಅಪರ್ಚ್ಯೂರ್ ರೆಡಾರ್) 'ಅತ್ಯಂತ ಪ್ರಮುಖ ಹವಾಮಾನ ವಿಷನ್'ನ ಭಾಗವಾಗಿದೆ. 2024ರ ಮೊದಲ ತ್ರೈಮಾಸಿಕದಲ್ಲಿ ಇದನ್ನು ಉಡ್ಡಯನ ಮಾಡುವ ಯೋಜನೆಯಿದೆ. ಭೂಮಿಯ ಪರಿಸರ, ದ್ರವ್ಯರಾಶಿ, ಸಸ್ಯಜೀವರಾಶಿ, ಸಮುದ್ರ ಮಟ್ಟ ಏರಿಕೆ, ಅಂತರ್ಜಲ, ಭೂಕಂಪ, ಸುನಾಮಿ, ಜ್ವಾಲಾಮುಖಿ, ಭೂಕುಸಿತ ಸೇರಿದಂತೆ ನೈಸರ್ಗಿಕ ಅಪಾಯಗಳ ಬದಲಾವಣೆಗಳ ದತ್ತಾಂಶವನ್ನು ನಿಸಾರ್ ಕಳುಹಿಸಲಿದೆ' ಎಂದು ಮಾಹಿತಿ ನೀಡಿದರು.

ಗಗನ ಯಾತ್ರಿ ರಾಕೇಶ್ ಶರ್ಮಾ ಅವರೊಂದಿಗೆ ಬಿಲ್ ನೆಲ್ಸನ್ ಅವರು ಯು.ಆರ್. ರಾವ್ ಉಪಗ್ರಹ ಕೇಂದ್ರಕ್ಕೆ (ಯುಆರ್‌ಎಸ್‌ಸಿ) ಗುರುವಾರ ಭೇಟಿ ನೀಡಲಿದ್ದಾರೆ.



ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಆ್ಯಂಡ್ ಟೆಕ್ನಾಲಜಿಕಲ್ ಮ್ಯೂಸಿಯಂನಲ್ಲಿ ರಾಕೇಶ್ ಶರ್ಮಾ ಅವರ ಪ್ರತಿಕೃತಿ ಮುಂದೆ ರಾಕೇಶ್ ಶರ್ಮಾ ಹಾಗೂ ಬಿಲ್ ನೆಲ್ಸನ್ ಕಾಣಿಸಿಕೊಂಡಿದ್ದು ಹೀಗೆ...

ಗುರುವಾರ, ನವೆಂಬರ್ 30, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 330 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ

ಕಲಾತ್ಮಕ ಅಭಿವ್ಯಕ್ತಿಯಾಗಿರದೆ ಆರಾಧನೆಯ ಪ್ರಬಲ ಮಾಧ್ಯಮವಾಗಿ ಪಿಚ್ವಾಯಿ ಕಲೆ



ಕನಕ ಜಯಂತಿ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,902 ▲	20,096 ▲	₹64,750 (ಬೆಂಗಳೂರು) ▲	₹78,300 (ಬೆಂಗಳೂರು) ▲	83.32 ▲



ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಕಾರ್ಮಿಕರೊಬ್ಬರ ಆರೋಗ್ಯ ವಿಚಾರಿಸಿದರು –ಪಿಟಿಐ ಚಿತ್ರ

ಏಮ್ಸ್: ಕಾರ್ಮಿಕರ ಆರೋಗ್ಯ ತಪಾಸಣೆ

ಪ್ರಜಾವಾಣಿ ವಾರ್ತೆ


ಲಖನೌ: ಸುರಂಗದಿಂದ ರಕ್ಷಿಸಲಾದ ಕಾರ್ಮಿಕರನ್ನು ಋಷಿಕೇಶದಲ್ಲಿ ಇರುವ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ (ಏಮ್ಸ್) ಬುಧವಾರ ಕರೆತರಲಾಯಿತು. ಮುನ್ನೆಚ್ಚರಿಕೆಯ ಕ್ರಮವಾಗಿ ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು.

7ನೇ ಪುಟ ನೋಡಿ

ರಾಜ್ಯದಲ್ಲಿ ಪಾಲನೆಯಾಗದ ಭ್ರೂಣಲಿಂಗ ಪತ್ತೆ ಪರೀಕ್ಷೆ ತಡೆ ಕಾಯ್ದೆ

27 ವರ್ಷದಲ್ಲಿ 89 ಪ್ರಕರಣ

• ಜಯಸಿಂಹ ಆರ್.



ಬೆಂಗಳೂರು: ಭ್ರೂಣಲಿಂಗ ಪತ್ತೆ ಪರೀಕ್ಷೆಯನ್ನು ನಿಷೇಧಿಸುವ ಕಾಯ್ದೆಯು ಜಾರಿಗೆ ಬಂದು 29 ವರ್ಷಗಳಾಗಿವೆ. 1994ರಿಂದ 2021ರ ನಡುವಣ 27 ವರ್ಷದಲ್ಲಿ ರಾಜ್ಯದಲ್ಲಿ ಈ ಕಾಯ್ದೆ ಅಡಿ ದಾಖಲಾದ ಪ್ರಕರಣಗಳ ಸಂಖ್ಯೆ 89 ಮಾತ್ರ. ಆದರೆ, ಭ್ರೂಣಲಿಂಗ ಪತ್ತೆ ಪರೀಕ್ಷೆ ಮತ್ತು ಹೆಣ್ಣು ಭ್ರೂಣಗಳ ಹತ್ಯೆ ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯುತ್ತಲೇ ಇದೆ ಎಂಬುದನ್ನು ಮಂಡ್ಯದ ಆಲೆಮನೆಯಲ್ಲಿನ ಭ್ರೂಣಲಿಂಗ ಪತ್ತೆ ಪರೀಕ್ಷೆ ಪ್ರಕರಣವು ಬಹಿರಂಗಪಡಿಸಿದೆ.

ಭ್ರೂಣಲಿಂಗ ಪತ್ತೆ ಪರೀಕ್ಷೆ ಮಾಡಿಸಲು ಬಯಸುವವರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಭ್ರೂಣಲಿಂಗ ಪತ್ತೆ ಕಾಯ್ದೆ ಹೇಳುತ್ತದೆ. ಹಾಗೆಯೇ ಪರೀಕ್ಷೆ ನಡೆಸುವ ವೈದ್ಯರು ಮತ್ತು ತಂತ್ರಜ್ಞರ ವಿರುದ್ಧವೂ ಪ್ರಕರಣ ದಾಖಲಿಸಬೇಕು, ಅಂತಹ ಪರೀಕ್ಷೆ ಮತ್ತು ಭ್ರೂಣ ಹತ್ಯೆ ನಡೆಸುವ ಪ್ರಯೋಗಾಲಯ/ಆಸ್ಪತ್ರೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಕಾಯ್ದೆ ಹೇಳುತ್ತದೆ. ಆದರೆ ರಾಜ್ಯದಲ್ಲಿ ಇಂತಹ ಪ್ರಕರಣಗಳೇ ದಾಖಲಾಗುತ್ತಿಲ್ಲ ಎಂಬುದನ್ನು ಕೇಂದ್ರ ಸರ್ಕಾರದ ವರದಿಗಳು ಹೇಳುತ್ತವೆ.

ದೇಶದಲ್ಲಿ ಲಿಂಗಾನುಪಾತದ ಸ್ಥಿತಿಗತಿ ಮತ್ತು 'ಬೇಟಿ ಬಚಾವೊ, ಬೇಟಿ ಪಡಾವೊ' ಅಭಿಯಾನದ ಪರಿಣಾಮದ ಬಗ್ಗೆ ಮಹಿಳಾ ಸಬಲೀಕರಣ ಸಂಸದೀಯ ಸಮಿತಿಯು ಅಧ್ಯಯನ ನಡೆಸಿತ್ತು.

11ನೇ ಪುಟ ನೋಡಿ

'ಸಹಾಯವಾಣಿಯೇ ಇಲ್ಲ'

ಭ್ರೂಣಲಿಂಗ ಪತ್ತೆ ಪರೀಕ್ಷೆ ತಡೆಗೆ ಘಟಕಗಳನ್ನು ತೆರೆಯಬೇಕು. ರಾಜ್ಯಮಟ್ಟದಲ್ಲಿ ಇದಕ್ಕೆ ಒಂದು ಉಚಿತ ಸಹಾಯವಾಣಿಯನ್ನು ರಚಿಸಬೇಕು. ಆದರೆ ಕರ್ನಾಟಕದಲ್ಲಿ ಉಚಿತ ಸಹಾಯವಾಣಿಯೇ ಇಲ್ಲ ಎಂದು ಸಂಸದೀಯ ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ.

ರಾಜ್ಯದಲ್ಲಿ ಇಂತಹ ಘಟಕವನ್ನು ರಚಿಸಲಾಗಿದೆ. ಭ್ರೂಣಲಿಂಗ ಪತ್ತೆ ಪರೀಕ್ಷೆ ವಿರುದ್ಧ ದೂರು ನೀಡಲು ಆನ್‌ಲೈನ್ ಪೋರ್ಟಲ್ ರಚಿಸಲಾಗಿದೆ. ಈ ಪೋರ್ಟಲ್‌ನಲ್ಲಿ ದೂರು ದಾಖಲಿಸುವ ಮುನ್ನ ನೋಂದಣಿ ಮಾಡಿಕೊಳ್ಳಬೇಕು. ಇನ್ನು ಪೋರ್ಟಲ್‌ನಲ್ಲಿ ಸಂಪರ್ಕಕ್ಕೆ ಎಂದು ಒಂದು ಸ್ಥಿರ ದೂರವಾಣಿ ಸಂಖ್ಯೆಯನ್ನು ನೀಡಲಾಗಿದೆ. ಅದಕ್ಕೆ ಕರೆ ಮಾಡಿದರೆ, 'ಈ ಸಂಖ್ಯೆ ಚಾಲ್ತಿಯಲ್ಲಿಲ್ಲ' ಎಂದು ಬರುತ್ತದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ನಿರ್ದೇಶನಾಲಯದ ಅಡಿಯಲ್ಲಿ ಭ್ರೂಣಲಿಂಗ ಪತ್ತೆ ತಡೆ ಸೇವೆಗಾಗಿ ಉಪನಿರ್ದೇಶಕರೊಬ್ಬರನ್ನು ನೇಮಕ ಮಾಡಲಾಗಿದ್ದು, ನಿರ್ದೇಶನಾಲಯದ ಜಾಲತಾಣದಲ್ಲಿ ಅಧಿಕಾರಿಯ ಮೊಬೈಲ್ ಸಂಖ್ಯೆಯನ್ನೂ ನೀಡಲಾಗಿದೆ. ಸಂಸದೀಯ ಸಮಿತಿಯು ತನ್ನ ವರದಿಯಲ್ಲಿ, ಕರ್ನಾಟಕದಲ್ಲಿ ಭ್ರೂಣಲಿಂಗ ಪತ್ತೆ ಪರೀಕ್ಷೆ ವಿರುದ್ಧ ದೂರು ನೀಡಲು ಸಹಾಯವಾಣಿ ಇಲ್ಲ ಎಂದು ಹೇಳಿರುವ ಬಗ್ಗೆ ಪ್ರತಿಕ್ರಿಯೆ ಪಡೆಯಲು ಉಪ ನಿರ್ದೇಶಕರ ಸಂಖ್ಯೆಗೆ ಕರೆ ಮಾಡಲಾಗಿತ್ತು. ಆ ಸಂಖ್ಯೆಗೆ ಕರೆ ಹೋಗಲಿಲ್ಲ.

ಬಿ.ಟಿ ಆರ್ಥಿಕತೆ ವಿಸ್ತರಣೆ ಗುರಿ

ಎವಿಜಿಸಿ ಕ್ಷೇತ್ರದಲ್ಲಿ ಉದ್ಯೋಗ ಸೃಜನೆಗೆ ಒತ್ತು

• ವಿ.ಎಸ್. ಸುಬ್ರಹ್ಮಣ್ಯ



ಬೆಂಗಳೂರಿನಲ್ಲಿ ಬುಧವಾರ ಆರಂಭವಾದ ತಂತ್ರಜ್ಞಾನ ಶೃಂಗಸಭೆಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಚಿವ ಪ್ರಿಯಾಂಕ್ ಖರ್ಗೆ ಚರ್ಚೆಯಲ್ಲಿ ತೊಡಗಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಎಂ. ಬಿ. ಪಾಟೀಲ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ಗ್ರಾಮೀಣ ಪ್ರದೇಶವೂ ಸೇರಿದಂತೆ ರಾಜ್ಯದಾದ್ಯಂತ ಜೈವಿಕ ತಂತ್ರಜ್ಞಾನದ ಆರ್ಥಿಕತೆಯನ್ನು ವಿಸ್ತರಿಸುವ ಗುರಿ ಹೊಂದಿರುವ 'ಜೈವಿಕ ತಂತ್ರಜ್ಞಾನ ನೀತಿ'ಯ ಕರಡನ್ನು ಬುಧವಾರ ಬಿಡುಗಡೆ ಮಾಡಲಾಗಿದೆ.

ಇಲ್ಲಿನ ಅರಮನೆ ಆವರಣದಲ್ಲಿ ನಡೆದ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ–2023ರ ಉದ್ಘಾಟನಾ ವೇದಿಕೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಇತರ ಗಣ್ಯರು ಕರಡನ್ನು ಬಿಡುಗಡೆ ಮಾಡಿದರು.

ಅನಿಮೇಷನ್, ವಿಷ್ಯುಯಲ್ ಎಫೆಕ್ಟ್ಸ್, ಗೇಮಿಂಗ್, ಕಾಮಿಕ್ಸ್ ಮತ್ತು ಎಕ್ಸ್‌ಟೆಂಡೆಡ್ ರಿಯಾಲಿಟಿ ಕ್ಷೇತ್ರದ ಬೆಳವಣಿಗೆ ಪ್ರೋತ್ಸಾಹ ನೀಡುವ 'ಎವಿಜಿಸಿ–ಎಕ್ಸ್‌ಆರ್ ನೀತಿ 3.0' ಅನ್ನೂ ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

'ಪರಿಣಾಮಕಾರಿ ಅನುಷ್ಠಾನದೊಂದಿಗೆ ಬದಲಾವಣೆ' ಎಂಬುದು ನೂತನ ಜೈವಿಕ ತಂತ್ರಜ್ಞಾನ ನೀತಿಯ ಘೋಷವಾಕ್ಯ. ಕರ್ನಾಟಕವನ್ನು ವೈದ್ಯಕೀಯ ಪ್ರಯೋಗ (ಕ್ಲಿನಿಕಲ್ ಟ್ರಯಲ್) ಮತ್ತು ವಂಶವಾಹಿ ಅಧ್ಯಯನ ಕ್ಷೇತ್ರದ ಪ್ರಮುಖ ಕೇಂದ್ರವನ್ನಾಗಿಸುವ ಗುರಿ ನೀತಿಯಲ್ಲಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಜೈವಿಕ ತಂತ್ರಜ್ಞಾನದ ಆವಿಷ್ಕಾರ ಕೇಂದ್ರಗಳು ಮತ್ತು ಅನುಷ್ಠಾನ ಘಟಕಗಳ ಸ್ಥಾಪನೆ, ಅತ್ಯಾಧುನಿಕ ಬಿ.ಟಿ ಕ್ಲಸ್ಟರ್‌ಗಳ ನಿರ್ಮಾಣಕ್ಕೆ ಅಭಿವೃದ್ಧಿ ಹೊಂದಿದ ಕೈಗಾರಿಕಾ ಪ್ರದೇಶಗಳಲ್ಲಿ 5 ಎಕರೆಯಿಂದ 10 ಎಕರೆಗಳವರೆಗೆ ಜಮೀನು ಒದಗಿಸುವ ಪ್ರಸ್ತಾವ ನೀತಿಯಲ್ಲಿದೆ.

30 ಸಾವಿರ ಉದ್ಯೋಗ ಸೃಷ್ಟಿ: ಎವಿಜಿಸಿ–ಎಕ್ಸ್‌ಆರ್ ಕ್ಷೇತ್ರದಲ್ಲಿ 2028ರ ವೇಳೆಗೆ 30,000 ಅತ್ಯುನ್ನತ ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸುವ ಗುರಿ 'ಎವಿಜಿಸಿ–ಎಕ್ಸ್‌ಆರ್ ನೀತಿ 3.0'ರಲ್ಲಿದೆ.

13ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆದಾಯ ಮೀರಿ ಆಸ್ತಿ: ಅರ್ಜಿ ವಾಪಸ್ ಪಡೆದ ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮ್ಮ ವಿರುದ್ಧ ಸಿಬಿಐ ತನಿಖೆಗೆ ಅನುಮತಿ ನೀಡಿದ್ದ ಕ್ರಮವನ್ನು ಪ್ರಶ್ನಿಸಿದ ರಿಟ್ ಅರ್ಜಿ ಮತ್ತು ಮೇಲ್ಮನವಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಪಸ್ ಪಡೆದಿದ್ದಾರೆ.

'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಸಿಬಿಐ ತನಿಖೆಗೆ ಅನುಮತಿ ನೀಡಿತ್ತು. ಇದನ್ನು ಆಧರಿಸಿ, ಸಿಬಿಐ ತನಿಖೆ ನಡೆಸಿತ್ತಲ್ಲದೇ, ದೋಷಾರೋಪ ಪಟ್ಟಿ ಸಲ್ಲಿಕೆಗೂ ತಯಾರಿ ನಡೆಸಿತ್ತು. ಸಿಬಿಐ ತನಿಖೆಯ ಮುಂದುವರಿದಿರುವಾಗಲೇ, ಶಿವಕುಮಾರ್ ಹೈಕೋರ್ಟ್ ಮೊರೆ ಹೋಗಿದ್ದರು. ಈ ಬೆಳವಣಿಗೆ ಮಧ್ಯೆಯೇ, ಹಿಂದಿನ ಸರ್ಕಾರ ನೀಡಿದ್ದ ಅನುಮತಿಯನ್ನು ಸಿದ್ದರಾಮಯ್ಯ ಸರ್ಕಾರ ಇತ್ತೀಚೆಗೆ ವಾಪಸ್ ಪಡೆದಿತ್ತು.

ಪ್ರಕರಣವೇನು?: 'ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ಅನುಮತಿ ನೀಡಿ 2021ರ ಸೆಪ್ಟೆಂಬರ್ 25ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿ ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ 2023ರ ಏಪ್ರಿಲ್ 20ರಂದು ವಜಾಗೊಳಿಸಿತ್ತು.

6ನೇ ಪುಟ ನೋಡಿ

ಮಸೂದೆಗೆ ರಾಷ್ಟ್ರಪತಿ ಅಂಕಿತ 'ಸುಪ್ರೀಂ' ಮಾರ್ಗಸೂಚಿ ಸಾಧ್ಯತೆ

ನವದೆಹಲಿ (ಪಿಟಿಐ): ಕೇರಳ ವಿಧಾನಸಭೆಯು ಅಂಗೀಕಾರ ನೀಡಿರುವ ಮಸೂದೆಗಳ ವಿಚಾರವಾಗಿ ಎರಡು ವರ್ಷಗಳಿಂದ ಯಾವುದೇ ತೀರ್ಮಾನ ಕೈಗೊಳ್ಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರ ನಡೆ ಕುರಿತು ಸುಪ್ರೀಂ ಕೋರ್ಟ್ ಅತೃಪ್ತಿ ವ್ಯಕ್ತಪಡಿಸಿದೆ. ರಾಜ್ಯಪಾಲರು ಮಸೂದೆಯನ್ನು ರಾಷ್ಟ್ರಪತಿಯವರ ಅಂಕಿತಕ್ಕೆ ಯಾವ ಸಂದರ್ಭಗಳಲ್ಲಿ ರವಾನಿಸಬಹುದು ಎಂಬ ಬಗ್ಗೆ ಮಾರ್ಗಸೂಚಿ ರೂಪಿಸುವ ಬಗ್ಗೆ ಪರಿಗಣಿಸುವುದಾಗಿ ಕೋರ್ಟ್ ಇದೇ ಸಂದರ್ಭದಲ್ಲಿ ಹೇಳಿದೆ.

ಎಂಟು ಮಸೂದೆಗಳ ವಿಚಾರವಾಗಿ ರಾಜ್ಯಪಾಲರು ಈಚೆಗೆ ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಹೇಳಿರುವ ಕೋರ್ಟ್, ರಾಜ್ಯಪಾಲರು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ ಮಸೂದೆಗಳ ಬಗ್ಗೆ ಚರ್ಚಿಸಬೇಕು, ಆಗ ರಾಜಕೀಯ ವಿವೇಕವೊಂದು ರೂಪಪಡೆಯಬಹುದು ಎಂದು ಹೇಳಿದೆ.



ಎಂಟು ಮಸೂದೆಗಳ ಪೈಕಿ ಏಳು ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗೆ 'ಇರಿಸಲಾಗಿದೆ', ಒಂದು ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠಕ್ಕೆ ತಿಳಿಸಿದರು.

9ನೇ ಪುಟ ನೋಡಿ

ಗುತ್ತಿಗೆದಾರರಿಗೆ ಹಣ ಬಾಕಿ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರರ ಬಾಕಿ ಹಣ ಪಾವತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ನಡೆಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, 'ಈಗಾಗಲೇ ಇಬ್ಬರು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನೂ ಎಷ್ಟು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳಬೇಕು, ಯಾಕೆ ನಿಮ್ಮ ಬಳಿ ಹಣ ಇಲ್ಲವೇ, ಬಾಕಿ ಪಾವತಿಯಲ್ಲೂ ಹಿರಿತನವೇ' ಎಂದು ಕಟುವಾಗಿ ಪ್ರಶ್ನಿಸಿದೆ.

'ಬಾಕಿ ಹಣ ಪಾವತಿಗೆ ಸಂಬಂಧಿಸಿದಂತೆ ಕೋರ್ಟ್ ಆದೇಶ ಪಾಲನೆ ಮಾಡಿಲ್ಲ' ಎಂದು ಆಕ್ಷೇಪಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಮಾಗಡಿ ತಾಲ್ಲೂಕಿನ ಬಾಗಿನಗೆರೆಯ 'ಮೆಸರ್ಸ್ ನಿಕ್ಷೇಪ ಇನ್‌ಫ್ರಾ ಪ್ರಾಜೆಕ್ಟ್' ದಾಖಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

12ನೇ ಪುಟ ನೋಡಿ

ವಿಕಸಿತ ಭಾರತ ಸಂಕಲ್ಪವನ್ನು ಸಶಕ್ತಗೊಳಿಸುತ್ತಲಿದೆ ಯುವಶಕ್ತಿ



ಉದ್ಯೋಗ ಮೇಳ ಮುಖಾಂತರ ಸರ್ಕಾರದಲ್ಲಿ 10 ಲಕ್ಷ ನೇಮಕಾತಿಗಳು

ದೇಶಾದ್ಯಂತ 37 ಸ್ಥಳಗಳಲ್ಲಿ ಸರ್ಕಾರಿ ಉದ್ಯೋಗಗಳಿಗೆ ಆಯ್ಕೆಗೊಂಡಿರುವ 51 ಸಾವಿರಕ್ಕೂ ಅಧಿಕ ಯುವಜನತೆಗೆ ನೇಮಕಾತಿ ಪತ್ರಗಳ ವಿತರಣೆ

ಪ್ರಧಾನಮಂತ್ರಿ

ನರೇಂದ್ರ ಮೋದಿ

ಇವರಿಂದ

30ನೇ ನವಂಬರ್ 2023, ಸಂಜೆ 04:00 ಗಂಟೆ

(ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ)

- ಭಾರತ ಸರ್ಕಾರವು ತನ್ನ ಪಾಲುದಾರ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ, ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುತ್ತಲಿದೆ.
- ಮಹಿಳೆಯರಿಗೆ, ವಿಶೇಷ ಚೇತನ ವ್ಯಕ್ತಿಗಳಿಗೆ ಮತ್ತು ಆಕಾಂಕ್ಷಿ ಜಿಲ್ಲೆಗಳ ಅಭ್ಯರ್ಥಿಗಳಿಗೆ ವಿಶೇಷ ಲಾಭಗಳು.
- ಸರಳ, ನ್ಯಾಯೋಚಿತ ಮತ್ತು ಪಾರದರ್ಶಕ ಆಯ್ಕೆ ಪ್ರಕ್ರಿಯೆ
- ಯುಪಿಎಸ್‌ಸಿ, ಎಸ್‌ಎಸ್‌ಸಿ, ರೈಲ್ವೆ ನೇಮಕಾತಿ ಮಂಡಳಿ, ಐಬಿಪಿಎಸ್ ನಂತಹ ಸಂಸ್ಥೆಗಳ ಮುಖಾಂತರ ಎಲ್ಲ ನೇಮಕಾತಿಗಳನ್ನು ಮಾಡಲಾಗುತ್ತದೆ.
- ವಿಶೇಷ ಆನ್‌ಲೈನ್ ವ್ಯವಸ್ಥೆಯ ಮುಖಾಂತರ, ಖಾಲಿಹುದ್ದೆಗಳ ಮತ್ತು ನೇಮಕಾತಿ ಪ್ರಕ್ರಿಯೆಗಳ ಕುರಿತು ನಿರಂತರ ಮೇಲ್ವಿಚಾರಣೆ
- ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹೊಸದಾಗಿ ನಿಯೋಜನೆಗೊಂಡಿರುವ ಎಲ್ಲಾ ಸಿಬ್ಬಂದಿಗಳಿಗೆ, ಕರ್ಮಯೋಗಿ ಪ್ರಾರಂಭ ಮಾಡ್ಯೂಲ್‌ನ ಮುಖಾಂತರ ಆನ್‌ಲೈನ್ ಓರಿಯಂಟೇಶನ್ ಕೋರ್ಸ್ ನೀಡಲಾಗುತ್ತದೆ.

CBC 15502/13/0019/2324

DD NEWS ಡಿಡಿ ಸುದ್ದಿವಾಹಿನಿಯಲ್ಲಿ ಕಾರ್ಯಕ್ರಮದ ನೇರಪ್ರಸಾರ ವೀಕ್ಷಿಸಿರಿ

ಕಾಂತರಾಜ ವರದಿ ಜಾರಿಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂತರಾಜ ಆಯೋಗದ ನೇತೃತ್ವದಲ್ಲಿ ನಡೆದ ಜಾತಿಗಣತಿ ವರದಿಯನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಆಗ್ರಹಿಸಿ ಡಿ.1ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ತಿಳಿಸಿದೆ.

ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಕೆ.ಪಿ. ನಂಜುಂಡಿ ಮಾತನಾಡಿ, ‘2016ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ₹167 ಕೋಟಿ ಖರ್ಚು ಮಾಡಿ ಕಾಂತರಾಜ ಅವರ ನೇತೃತ್ವದಲ್ಲಿ ನಡೆಸಿದ ಜಾತಿಗಣತಿ ವರದಿಯನ್ನು ಕೂಡಲೇ ಸ್ವೀಕರಿಸಿ, ಅದನ್ನು ಬಹಿರಂಗಗೊಳಿಸಬೇಕು. ಇದರಿಂದ, ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಸ್ಥಿತಿಯ ವಾಸ್ತವವನ್ನು ಅರಿಯಲು ವರದಿ ಸಹಾಯಕವಾಗಲಿದೆ. ಜನಸಂಖ್ಯೆಗೆ ಅನುಗುಣವಾಗಿ ಸೌಲಭ್ಯಗಳನ್ನು ಹಂಚಿಕೆ ಮಾಡಬೇಕು’ ಎಂದರು.

‘ರಾಜ್ಯದಲ್ಲಿ 197 ಜಾತಿಗಳಿಗೆ ಸಂಬಂಧಿಸಿದಂತೆ ಶೇ 99ರಷ್ಟು ಕಾಯಕ ಸಮುದಾಯಗಳ ನಿಖರವಾದ ಜನಸಂಖ್ಯೆ ಸರ್ಕಾರದ ಬಳಿ ಇಲ್ಲ. ಕೆಲ ಸಮುದಾಯಗಳು ಈ ವರದಿಯನ್ನು ವಿರೋಧಿಸುತ್ತಿದ್ದಾರೆ. ಅವರ ಮಾತುಗಳಿಗೆ ಗಮನ ಹರಿಸದೇ ವರದಿಯನ್ನು ಬಿಡುಗಡೆಗೊಳಿಸಬೇಕು. ನಂತರ ವರದಿಯಲ್ಲಿರುವ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಬೇಕು’ ಎಂದು ತಿಳಿಸಿದರು.

‘ರಾಜ್ಯದಲ್ಲಿ ವಿಶ್ವಕರ್ಮ ಸಮುದಾಯವು ಸುಮಾರು 25 ರಿಂದ 30 ಲಕ್ಷ ಜನಸಂಖ್ಯೆ ಹೊಂದಿದೆ. ಆದರೆ, ಸರ್ಕಾರ ಇದನ್ನು ಒಪ್ಪಿಕೊಳ್ಳುತ್ತಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಿದ್ದರಾಮಯ್ಯ ಅವರು ಕಾಂತರಾಜ ವರದಿಯನ್ನು ಸ್ವೀಕರಿಸುತ್ತೇವೆ ಎಂಬ ಹೇಳಿಕೆ ನೀಡಿದ್ದಾರೆ. ವಿಶ್ವಕರ್ಮ ಸಮುದಾಯ ಮತ್ತು ಹಿಂದುಳಿದ ವರ್ಗಗಳು ಅವರಿಗೆ ಬೆಂಬಲ ನೀಡುತ್ತೇವೆ’ ಎಂದು ಹೇಳಿದರು.

ಸ್ಪರ್ಧಾ ಪರೀಕ್ಷೆಗಳ ಆನ್‌ಲೈನ್ ತರಬೇತಿ ಸ್ಥಗಿತ

ಬೆಂಗಳೂರು: ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಕಾಂಗ್ರೆಸ್ ಸರ್ಕಾರ ಸ್ಥಗಿತಗೊಳಿಸಿದೆ.

ದ್ವಿತೀಯ ಪಿಯು ನಂತರ ಖಾಸಗಿ ತರಬೇತಿ ಸಂಸ್ಥೆಗಳಿಗೆ ತೆರಳಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ, ಅದರಲ್ಲೂ ಗ್ರಾಮೀಣರಿಗೆ ಸಿಇಟಿ, ನೀಟ್, ಜೆಇಇ ಪರೀಕ್ಷೆಗಳನ್ನು ಎದುರಿಸಲು ಅನುಕೂಲವಾಗುವಂತೆ ಆನ್‌ಲೈನ್ ತರಬೇತಿ ಆರಂಭಿಸಿತ್ತು. 2019–20ರಿಂದ ಆರಂಭವಾದ ಈ ಅವಕಾಶವನ್ನು 2 ಲಕ್ಷ ವಿದ್ಯಾರ್ಥಿಗಳು ಬಳಸಿಕೊಂಡಿದ್ದರು.

ಉನ್ನತ ಶಿಕ್ಷಣ ಇಲಾಖೆಯ ಕಲಿಕಾ ನಿರ್ವಹಣಾ ವ್ಯವಸ್ಥೆ (ಎಲ್‌ಎಂಎಸ್) ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಅಧ್ಯಯನ ಸಾಮಗ್ರಿಗಳನ್ನು ಅಪ್‌ಲೋಡ್ ಮಾಡಲಾಗಿತ್ತು. ಆಸಕ್ತ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ವಿವರಗಳನ್ನು ನೋಂದಾಯಿಸುವ ಮೂಲಕ ಪ್ರವೇಶ ಪಡೆಯಬಹುದಾಗಿತ್ತು.

ಬಿಎಂಎಸ್ ಶಿಕ್ಷಣ ಟ್ರಸ್ಟ್‌ಗೆ ರಶ್ಮಿ ಮಹೇಶ್ ನೇಮಕ

ಬೆಂಗಳೂರು: ಬಿಎಂಎಸ್ ಶಿಕ್ಷಣ ಟ್ರಸ್ಟ್‌ಗೆ (ಬಿಎಂಎಸ್‌ಇಟಿ) ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರನ್ನು ಸರ್ಕಾರ ನಾಮನಿರ್ದೇಶನ ಮಾಡಿದೆ.

ಟ್ರಸ್ಟ್‌ನಲ್ಲಿ ನಡೆದಿದೆ ಎನ್ನಲಾದ ಹಣ ದುರ್ಬಳಕೆ ಆರೋಪದ ವಿಚಾರಣೆಗಾಗಿ ತನಿಖಾ ಸಮಿತಿ ರಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರ ನೇತೃತ್ವದಲ್ಲಿ ಈಚೆಗೆ ನಡೆದ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ ಕುಮಾರಸ್ವಾಮಿ ಕಳೆದ ವರ್ಷ ಅಧಿವೇಶನದಲ್ಲಿ ಬಿಎಂಎಸ್ ಶಿಕ್ಷಣ ಟ್ರಸ್ಟ್‌ನ (ಬಿಎಂಎಸ್‌ಇಟಿ) ಅವ್ಯವಹಾರದ ಆರೋಪಗಳನ್ನು ಪ್ರಸ್ತಾಪ ಮಾಡಿದ್ದರು.

ರಸಪ್ರಶ್ನೆ: ಇಂದು ಫೈನಲ್

ಬೆಂಗಳೂರು: ಉದ್ಯಮಿ ವಿ.ಜಿ. ಸಿದ್ಧಾರ್ಥ ಸ್ಮರಣಾರ್ಥ ಅಂಬರ್ ವ್ಯಾಲಿ ಶಾಲೆ ಆಯೋಜಿಸಿರುವ ಎರಡನೇ ಆವೃತ್ತಿಯ 'ಅಂತರ ಶಾಲಾ ರಸಪ್ರಶ್ನೆ ಸ್ಪರ್ಧೆ'ಯ ಅಂತಿಮ ಸುತ್ತಿನ ಸ್ಪರ್ಧೆ ಇದೇ 30ರಂದು ಚಿಕ್ಕಮಗಳೂರಿನಲ್ಲಿರುವ ಶಾಲೆಯ ಆವರಣದಲ್ಲಿ ನಡೆಯಲಿದೆ.

ಈ ಅಂತಿಮ ಸುತ್ತಿನ ಸ್ಪರ್ಧೆಯನ್ನು ಕ್ವಿಜ್ ಮಾಸ್ಟರ್ ಗಿರಿ ಪಿಕ್ ಬ್ರೈನ್ ನಡೆಸಿಕೊಡಲಿದ್ದು, ಸಂಸದ ಶಶಿ ತರೂರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ವಾರಾಣಸಿ, ಸೋನಿಪತ್, ಗ್ವಾಲಿಯರ್, ಮುಂಬೈ, ಕೊಚ್ಚಿ, ಚೆನ್ನೈ, ಮತ್ತು ಬೆಂಗಳೂರಿನ ಒಟ್ಟು ಹತ್ತು ವಿದ್ಯಾರ್ಥಿಗಳು ಅಂತಿಮ ಸುತ್ತಿನ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಮೊದಲ ಬಹುಮಾನ ಪಡೆಯುವ ವಿದ್ಯಾರ್ಥಿ ₹ 1 ಲಕ್ಷವರೆಗಿನ ಶಿಷ್ಯವೇತನ ಮತ್ತು ಪ್ರತಿಷ್ಠಿತ ವಿ.ಜಿ. ಸಿದ್ಧಾರ್ಥ ಸ್ಮರಣೀಯ ಟ್ರೋಫಿ ಪಡೆಯಲಿದ್ದಾರೆ. ಮೂವರು ರನ್ನರ್ ಅಪ್ ವಿದ್ಯಾರ್ಥಿಗಳು ಐಪ್ಯಾಡ್ ಪಡೆಯಲಿದ್ದಾರೆ.

'ಬಿಡಿಎ ಲಂಚದ ತಾಣ: ಕುಖ್ಯಾತಿ ತೊಡೆದುಹಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರೋಕರ್‌ಗಳ ದಂಧೆ, ಮಧ್ಯಸ್ಥರು, ಲಂಚದ ತಾಣ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು (ಬಿಡಿಎ) ದೂಷಿಸಲಾಗುತ್ತಿದೆ. ಇದನ್ನು ಇಲ್ಲಿನ ಸಿಬ್ಬಂದಿ ತೊಡೆದುಹಾಕಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕನ್ನಡ ರಾಜ್ಯೋತ್ಸವ ಸಮಿತಿಯ ವತಿಯಿಂದ ಬುಧವಾರ ಆಯೋಜಿಸಲಾಗಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಾಗರಿಕರಿಗೆ ಬದುಕಿನಲ್ಲಿ ಒಂದು ಮನೆ ಕಟ್ಟಬೇಕೆಂಬ ಆಸೆ ಇರುತ್ತದೆ. ನಿವೇಶನ ಪಡೆಯಲು ಅಂತಹವರು ಬಿಡಿಎಗೆ ಬರುತ್ತಾರೆ. ಅವರೊಂದಿಗೆ ಸಮಾಧಾನದೊಂದಿಗೆ ಮಾತುಕತೆ ನಡೆಸಿ, ಕಾನೂನು ರೀತಿಯಲ್ಲಿ ಕೆಲಸ ಮಾಡಿಕೊಡಿ' ಎಂದು ಸಲಹೆ ನೀಡಿದರು.

'ಬಿಡಿಎಗೆ ಖಾಸಗಿ ಡೆವಲಪರ್ಸ್‌ಗಳು ಸ್ಪರ್ಧೆ ನೀಡುತ್ತಿವೆ. ಬಿಡಿಎ ಎಂದರೆ ಕಳಪೆ ಮಟ್ಟದ ಕೆಲಸ ಎಂಬ ಭಾವನೆ ಇದೆ. ಅದನ್ನು ನಿವಾರಿಸಿಕೊಂಡು, ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಬೇಕು. ಇದು ಒಂದೇ ದಿನ ಸಾಧ್ಯವಾಗುವುದಿಲ್ಲ. ಆದರೆ, ಅದನ್ನು ಅಳವಡಿಸಿಕೊಂಡು, ನಿಮಗಿರುವ ಅವಕಾಶದಲ್ಲಿ ಜನರ ಮನ ಗೆಲ್ಲಬೇಕು' ಎಂದು ಡಿಸಿಎಂ ಆಶಿಸಿದರು.

'ಬಿಡಿಎ ಗೌರವ ಕಾಪಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ನಿಮಗೆ ಯಾವುದೇ ರೀತಿಯ ಸಹಾಯವನ್ನು ನಾನು ಮತ್ತು ಅಧಿಕಾರಿಗಳು ನೀಡುತ್ತೇವೆ' ಎಂದರು.

ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್, ಆಯುಕ್ತ ಎನ್. ಜಯರಾಮ್, ಕನ್ನಡ ರಾಜ್ಯೋತ್ಸವ ಸಮಿತಿಯ ಅಧ್ಯಕ್ಷ ಆರ್. ಮಂಜುನಾಥ್, ಪದಾಧಿಕಾರಿಗಳು ಇದ್ದರು.



ಬಿಡಿಎ ಕನ್ನಡ ರಾಜ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಕರ್ನಾಟಕ ರಾಜ್ಯೋತ್ಸವದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಆಯುಕ್ತ ಎನ್. ಜಯರಾಮ್ ಇದ್ದರು

ನಾನೇನೂ ತಪ್ಪು ಮಾಡಿಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನೇನು ತಪ್ಪು ಮಾಡಿಲ್ಲ. ಪಕ್ಷದ ಕೆಲಸ ಮಾಡಿದ ಕಾರಣಕ್ಕೆ ನಾನು ಸಾಕಷ್ಟು ತೊಂದರೆ ಅನುಭವಿಸಿದ್ದೇನೆ. ನನಗೆ ತೊಂದರೆ ಕೊಟ್ಟರೆ ಕಾಪಾಡಲು ಆ ಭಗವಂತನಿದ್ದಾನೆ. ಈ ನಾಡಿನ ಜನರಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಹೈಕೋರ್ಟ್ ನೀಡಿರುವ ಆದೇಶದ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಅಕ್ರಮ ಆಸ್ತಿ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪಿನ ಬಗ್ಗೆ ನನಗೆ ಮಾಹಿತಿ ಇಲ್ಲ. ನ್ಯಾಯಾಲಯದ ವಿಚಾರದಲ್ಲಿ ವಕೀಲರಿಂದ ಸರಿಯಾದ ಮಾಹಿತಿ ಇಲ್ಲದೆ ಈ ವಿಚಾರವಾಗಿ ಮಾತನಾಡುವುದಿಲ್ಲ' ಎಂದು ಹೇಳಿದರು.

'ನನ್ನ ಎಲ್ಲ ಬೆಳವಣಿಗೆಗಳನ್ನು ನೀವು (ಮಾಧ್ಯಮದವರು), ಜನರು ನೋಡಿದ್ದಾರೆ. ನನಗೆ ತೊಂದರೆ ಕೊಟ್ಟ ಕಾರಣಕ್ಕೆ ಈ ರಾಜ್ಯದಲ್ಲಿ ಏನಾಯಿತು ಎಂದು ತಿಳಿದಿದೆ. ನನ್ನ ಪರವಾಗಿ ನಿಂತವರು ಹಾಗೂ ಪ್ರಾರ್ಥನೆ ಮಾಡಿದವರಿಗೆ ಕೋಟಿ ನಮಸ್ಕಾರ' ಎಂದರು.

सत्यमेव जयते
भारत सरकार

ಮೋದಿ ಸರ್ಕಾರದ ಗ್ಯಾರಂಟಿ



ವಿಕಸಿತ ಭಾರತ
ಸಂಕಲ್ಪ ಯಾತ್ರೆಯ

ಫಲಾನುಭವಿಗಳೊಂದಿಗೆ **ಪ್ರಧಾನಮಂತ್ರಿ ನರೇಂದ್ರ ಮೋದಿ** ಯವರ ಸಂವಾದ

ಪ್ರಧಾನಮಂತ್ರಿ ಭಾರತೀಯ ಜನ ಔಷಧಿ ಯೋಜನೆ

ಅಡಿಯಲ್ಲಿ ದೇಶಾದ್ಯಂತ ಲಭ್ಯವಿರುವ 10 ಸಾವಿರ ಜನ ಔಷಧಿ ಕೇಂದ್ರಗಳ ಸಂಖ್ಯೆಯನ್ನು 25 ಸಾವಿರಕ್ಕೆ ಹೆಚ್ಚಳ ಮಾಡುವ ಯೋಜನೆಯ ಪ್ರಾರಂಭೋತ್ಸವ

ಎಐಐಎಂಎಸ್, ದೇವಗಢ್, ಜಾರ್ಖಂಡ್ ಆವರಣದಲ್ಲಿ 10ನೇ ಸಾವಿರದ ಜನ ಔಷಧಿ ಕೇಂದ್ರದ ಉದ್ಘಾಟನೆ.

ಮಹಿಳಾ ನೇತೃತ್ವದಲ್ಲಿ ಪ್ರಗತಿಗೆ ವೇಗ ನೀಡುವುದಕ್ಕಾಗಿ,

ದೇಶಾದ್ಯಂತ ಪ್ರಧಾನಮಂತ್ರಿ ಮಹಿಳಾ ಕಿಸಾನ್ ಡ್ರೋನ್ ಕೇಂದ್ರ ಪ್ರಾರಂಭ.

ದೇಶದ ಮಹಿಳೆಯರಿಗೆ ಮತ್ತು ಸ್ವಯಂ ಸೇವಾ ಸಮೂಹಗಳ (ಎಸ್‌ಎಚ್‌ಜಿ) ಜೀವನೋಪಾಯಕ್ಕಾಗಿ, ಡ್ರೋನ್ ಉಡಾವಣೆಯ ವಿಶೇಷ ತರಬೇತಿ ಮತ್ತು ಮುಂದಿನ ಮೂರು ವರ್ಷಗಳಲ್ಲಿ 15,000 ಡ್ರೋನ್‌ಗಳ ವಿತರಣೆ.

(ವಿಡಿಯೊ ಕಾನ್ಫರೆನ್ಸಿಂಗ್ ಮುಖಾಂತರ)

ದಿನಾಂಕ: ನವಂಬರ್ 30, 2023 | ಸಮಯ: ಬೆಳಗ್ಗೆ 11:00 ಗಂಟೆ

CBC 02107/13/0004/2324

ಡಿಡಿ ನ್ಯೂಸ್ ವಾಹಿನಿಯಲ್ಲಿ ಈ ಕಾರ್ಯಕ್ರಮದ ನೇರಪ್ರಸಾರ ವೀಕ್ಷಿಸಿರಿ.

13 ಸಾವಿರ ನಗ್ನ ಫೋಟೊಗಳು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕನೊಬ್ಬನ ಮೊಬೈಲ್‌ನಲ್ಲಿ ಮಹಿಳೆಯರ 13 ಸಾವಿರ ನಗ್ನ ಫೋಟೊಗಳಿದ್ದು, ಈ ಸಂಬಂಧ ಕೇಂದ್ರ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪ್ರಿಯಕರನ ಮೊಬೈಲ್‌ನಲ್ಲಿ ನನ್ನ ಹಾಗೂ ಸ್ನೇಹಿತೆ ಸೇರಿದಂತೆ ವಿವಿಧ ಮಹಿಳೆಯರ 13 ಸಾವಿರ ನಗ್ನ ಫೋಟೊಗಳಿವೆ' ಎಂದು ಸಂತ್ರಸ್ತ ಯುವತಿ ಪೊಲೀಸರಿಗೆ ದೂರು ನೀಡಿದ್ದಾಳೆ.

'ಕೆಲ ದಿನಗಳ ಹಿಂದೆ ತನ್ನ ಪ್ರಿಯಕರನ ಮೊಬೈಲ್ ಗ್ಯಾಲರಿ ತೆರೆದೆ. ಅಲ್ಲಿ ಈ ಫೋಟೊಗಳನ್ನು ನೋಡಿದ್ದೇನೆ' ಎಂದು ಯುವತಿ ಪೊಲೀಸರಿಗೆ ತಿಳಿಸಿದ್ದಾರೆ.

'ಯುವತಿ ಬೆಳ್ಳಂದೂರಿನಲ್ಲಿರುವ ಖಾಸಗಿ ಕಂಪನಿಯೊಂದರ ಉದ್ಯೋಗಿಯಾಗಿದ್ದು, ಕಳೆದ 4 ತಿಂಗಳಿಂದ ಯುವಕನನ್ನು ಪ್ರೀತಿಸುತ್ತಿದ್ದರು. ಇಬ್ಬರು ಆತ್ಮೀಯ ಕ್ಷಣಗಳನ್ನು ಕಳೆದಿದ್ದರು. ಅದರ ದೃಶ್ಯ ಚಿತ್ರೀಕರಿಸಿಕೊಂಡಿದ್ದರು. ಅದನ್ನು ಅಳಿಸಲು ಮುಂದಾದ ವೇಳೆ ಈ ನಗ್ನ ಫೋಟೊಗಳು ಸಿಕ್ಕಿವೆ' ಎಂದು ಪೊಲೀಸರು ಹೇಳಿದರು.

ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕಡಿಮೆ ಮೊತ್ತಕ್ಕೆ ದುಬಾರಿ ಬೆಲೆಯ ಡ್ಯೂಕಾಟಿ ಬೈಕ್‌ಗಳ ಮಾರಾಟ

ಷೋರೂಂಗೆ ₹5.15 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬಾರಿ ಬೆಲೆ ಡ್ಯೂಕಾಟಿ ಬೈಕ್‌ಗಳನ್ನು ಗ್ರಾಹಕರಿಗೆ ಕಡಿಮೆ ಮೊತ್ತಕ್ಕೆ ಮಾರಾಟ ನಡೆಸಿದ್ದ ವಿಎಸ್‌ಟಿ ಡ್ಯೂಕಾಟಿ ಬೈಕ್ ಷೋರೂಂನ ಮುಖ್ಯಸ್ಥನನ್ನು ವಿವೇಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಗುಂಟೂರು ಜಿಲ್ಲೆ ರಾಕೇಶ್(36) ಬಂಧಿತ.

ಆರೋಪಿಯಿಂದ ₹2.32 ಕೋಟಿ ಮೌಲ್ಯದ 10 ಡ್ಯೂಕಾಟಿ ಬೈಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

'ವಿಎಸ್‌ಟಿ ಡ್ಯೂಕಾಟಿ ಕಂಪನಿಯ ಪ್ರಧಾನ ವ್ಯವಸ್ಥಾಪಕ ಸಿ.ಎನ್. ಮಹೇಶ್ ನೀಡಿದ ದೂರು ಆಧರಿಸಿ, ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು. ವಿಕ್ಟೋರಿಯಾ ರಸ್ತೆಯಲ್ಲಿರುವ ಷೋರೂಮ್‌ನಲ್ಲಿ ರಾಕೇಶ್ ಕೆಲಸ ಮಾಡುತ್ತಿದ್ದ. ತನ್ನ ಕುಟುಂಬದ ಸದಸ್ಯರೊಬ್ಬರಿಗೆ ಅನಾರೋಗ್ಯದ ಕಾರಣ ನೀಡಿ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿದ್ದ. ಬಳಿಕ ಲೆಕ್ಕ ಪರಿಶೋಧನೆಯ ವೇಳೆ, ₹5.15 ಕೋಟಿ ಮೌಲ್ಯದ 21 ಡ್ಯೂಕಾಟಿ ಬೈಕ್‌ಗಳನ್ನು ಕಂಪನಿಯ ಗಮನಕ್ಕೆ ತಾರದೇ ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಿರುವುದು ಪತ್ತೆಯಾಗಿತ್ತು. ಕಂಪನಿಗೆ ಹಣ ಹಾಕದೇ ಮೋಸ ಮಾಡಿದ್ದ' ಎಂದು ಪೊಲೀಸರು ಹೇಳಿದರು.

ಆರೋಪಿ ಐದು ವರ್ಷಗಳ ಹಿಂದೆ ಕೆಲಸಕ್ಕೆ ಸೇರಿಕೊಂಡಿದ್ದ. ಷೋರೂಂಗೆ ಹಳೆ ಬೈಕ್‌ಗಳನ್ನು ನೀಡಿ ಹೊಸ ಬೈಕ್ ಖರೀದಿಸಲು ಬಂದವರಿಗೆ ಹೆಚ್ಚು ಬೆಲೆಯ ಬೈಕ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ. ಹಣವನ್ನು ಆಫೀಸ್ ಸ್ಪೆಷಾಲಿಟಿ ಸಪ್ಲೈ ಹೆಸರಿನ ಎಚ್‌ಡಿಎಫ್‌ಸಿ ಖಾತೆಗೆ ಜಮಾವಣೆ ಮಾಡಿಸಿಕೊಂಡಿದ್ದ.

ಪ್ರಕರಣದ ತನಿಖೆಯಲ್ಲಿ 2020ರ ನಂತರ ಭಾರತದಲ್ಲಿ ಬಿಎಸ್4(ಎಮಿಷನ್ ನಾರ್ಮಸ್) ವಾಹನಗಳ ನೋಂದಣಿ ನಿಷೇಧಿಸಲಾಗಿದೆ. ಆದರೂ, ವಿಎಸ್‌ಟಿ ಆ್ಯಂಡ್ ಸನ್ಸ್ ಕಂಪನಿಯವರು ಆರೋಪಿಯ ಮೂಲಕ ಹಲವಾರು ವಾಹನಗಳನ್ನು ಅಕ್ರಮವಾಗಿ ಅರುಣಾಚಲ ಪ್ರದೇಶ ಕುರೂಂಗ್ ಕುಮ್ಮಿ ಆರ್‌ಟಿಒ ಕಚೇರಿಯಲ್ಲಿ ಆರ್‌ಟಿಒ ಅಧಿಕಾರಿಗಳು ಮತ್ತು ಮಧ್ಯವರ್ತಿಗಳೊಂದಿಗೆ ಸೇರಿ ನೋಂದಾಯಿಸಿಕೊಂಡಿರುವುದು ಪತ್ತೆಯಾಗಿದೆ. ದೂರುದಾರ ಮಹೇಶ್ ನೀಡಿರುವ 21 ಬೈಕ್‌ಗಳ ಪೈಕಿ 5 ಬೈಕ್‌ಗಳು ಬಿಎಸ್4 ವಾಹನಗಳು ಇರುವುದು ಪತ್ತೆಯಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಐಟಿ ಉದ್ಯೋಗಿಗೆ ಬೆದರಿಕೆ ಹಾಕಿ ₹3.7 ಕೋಟಿ ಸುಲಿಗೆ

ಬೆಂಗಳೂರು: ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿಸುವುದಾಗಿ ಐ.ಟಿ ಕಂಪನಿ ಉದ್ಯೋಗಿಯೊಬ್ಬರಿಗೆ ಸೈಬರ್ ದಂಧೆಕೋರರು ಬೆದರಿಕೆ ಹಾಕಿ, ₹3.7 ಕೋಟಿ ಸುಲಿಗೆ ನಡೆಸಿರುವುದು ಪತ್ತೆಯಾಗಿದೆ. ವೈಟ್‌ಫೀಲ್ಡ್‌ನ ಇನ್ಫೊಸಿಸ್ ಕಾರ್ಯ ನಿರ್ವಾಹಕರೊಬ್ಬರು ಹಣ ಕಳೆದುಕೊಂಡಿದ್ದಾರೆ.

ಭಾರತೀಯ ದೂರಸಂಪರ್ಕ ಪ್ರಾಧಿಕಾರ, ಸಿಬಿಐ ಹಾಗೂ ಮುಂಬೈ ಪೊಲೀಸರ ಹೆಸರಿನಲ್ಲಿ ಕರೆ ಮಾಡಿರುವ ದಂಧೆಕೋರರು, ಅಕ್ರಮ ಹಣ ವರ್ಗಾವಣೆ ಸೇರಿದಂತೆ ವಿವಿಧ ಅಪರಾಧ ಪ್ರಕರಣಗಳಲ್ಲಿ ಬಂಧಿಸುವುದಾಗಿ ಕರೆ ಮಾಡಿ ಬೆದರಿಸಿ ಸುಲಿಗೆ ಮಾಡಿದ್ದಾರೆ. ಈ ಸಂಬಂಧ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನ.21ರಂದು ವ್ಯಕ್ತಿಯೊಬ್ಬ ಕರೆ ಮಾಡಿ, ತಮ್ಮ ವಿರುದ್ಧ ಮುಂಬೈನಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡುವ ಬಗ್ಗೆ ಪ್ರಸ್ತಾಪಿಸಿದ್ದ. ಅದಾದ ಎರಡು ದಿನದ ನಂತರ ಕರೆ ಮಾಡಿ ₹ 3.7 ಕೋಟಿ ನೀಡುವಂತೆ ಬೆದರಿಕೆ ಹಾಕಿ ವಿವಿಧ ಬ್ಯಾಂಕ್ ಖಾತೆಗಳ ಸಂಖ್ಯೆಗಳನ್ನು ನೀಡಿದ್ದ' ಎಂದು ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

'ಹಣ ವರ್ಗಾವಣೆ ಮಾಡಿದರೆ ನಿಮ್ಮ ಮೇಲಿರುವ ಎಲ್ಲ ಪ್ರಕರಣ ರದ್ದು ಮಾಡಲಾಗುವುದು. ಜತೆಗೆ, ಲೆಕ್ಕ ಪರಿಶೋಧನೆಯಾದ ಮೇಲೆ ತಮ್ಮ ಬ್ಯಾಂಕ್ ಖಾತೆಗಳಿಗೇ ಹಣವನ್ನು ವಾಪಸ್ ಹಾಕಲಾಗುವುದು ಎಂದು ನಂಬಿಸಿದ್ದರು. ಅದರಂತೆ ಎಕ್ಸಿಕ್ಯುಟಿವ್ ಹಣ ವರ್ಗಾವಣೆ ಮಾಡಿದ್ದರು'

'ಸೈಬರ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ. ಹಣ ವರ್ಗಾವಣೆ ಮಾಡಿರುವ ಆರೋಪಿಗಳ ಬ್ಯಾಂಕ್ ಖಾತೆಗಳ ವ್ಯವಹಾರ ಸ್ಥಗಿತಗೊಳಿಸುವಂತೆ ಬ್ಯಾಂಕ್ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಲಸ ಕೊಡಿಸುವ ನೆಪದಲ್ಲಿ ₹20 ಕೋಟಿ ವಂಚನೆ?


ಪವನ್

ಬೆಂಗಳೂರು: ಹೆಚ್ಚಿನ ಸಂಬಳದ ಉದ್ಯೋಗ ನೀಡುವ ಭರವಸೆ ನೀಡಿ ಅಭ್ಯರ್ಥಿಗಳಿಂದಲೇ ಹಣ ಪಡೆದು ವಂಚಿಸಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಪೊಲೀಸರು ಬಂಧಿಸಿದ್ದಾರೆ. ಆಂಧ್ರಪ್ರದೇಶದ ವಿಶಾಖಪಟ್ಟಣದ ಪವನ್ ಕುಮಾರ್(36) ಬಂಧಿತ ಆರೋಪಿ.

18 ಮಂದಿಗೆ ₹25 ಲಕ್ಷ ವಂಚಿಸಿದ ಕುರಿತು ದೂರು ದಾಖಲಾಗಿದ್ದು, ಪವನ್ ಕುಮಾರ್ ಸೇರಿದಂತೆ 6 ಮಂದಿ ವಿರುದ್ಧ ವಂಚನೆ ಪ್ರಕರಣ ದಾಖಲಾಗಿದೆ.

'ಆರೋಪಿ ಪವನ್ ಸೇರಿದಂತೆ ಹಲವರು ಕೆಲಸ ಕೊಡಿಸುವ ನೆಪದಲ್ಲಿ ನೂರಾರು ಮಂದಿಗೆ ₹20 ಕೋಟಿ ವಂಚಿಸಿರುವ ಮಾಹಿತಿ ಇದೆ. ಈ ಕುರಿತು ತನಿಖೆ ಮುಂದುವರಿಸಲಾಗಿದೆ. ದಾಖಲೆ ಸಂಗ್ರಹಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ನವೋದ್ಯಮ ಸ್ಥಾಪಿಸಿದ್ದ ಆರೋಪಿ': ಆರು ವರ್ಷಗಳ ಹಿಂದೆ ವಿಶಾಖಪಟ್ಟಣದಿಂದ ನಗರಕ್ಕೆ ಬಂದಿದ್ದ ಆರೋಪಿ, ವೈಟ್‌ಫೀಲ್ಡ್ ಸಿಮಾಖ್ ಟೆಕ್ನಾಲಜಿ ಆ್ಯಂಡ್ ಮಾಂಟಿ ಕಾರ್ಪೊರೇಷನ್ ಎಂಬ ನವೋದ್ಯಮ ಕಂಪನಿ ತೆರೆದಿದ್ದ. ಈ ಕಂಪನಿಯಲ್ಲಿ ಉದ್ಯೋಗ ಹುಡುಕುವ ಯುವಕ–ಯುವತಿಯರಿಗೆ ಸಾಫ್ಟ್‌ವೇರ್ ಅಭಿವೃದ್ಧಿ ಕುರಿತು ತರಬೇತಿ ನೀಡುತ್ತೇವೆ. ಅಲ್ಲದೇ ಬೇರೆ ಕಂಪನಿಗಳಲ್ಲಿ ಕೆಲಸ ನೀಡುವುದಾಗಿ ನಂಬಿಸಿ ಪ್ರತಿ ಅಭ್ಯರ್ಥಿಯಿಂದ ₹ 1ರಿಂದ ₹ 2 ಲಕ್ಷದ ವರೆಗೆ ಪಡೆದುಕೊಂಡಿದ್ದ' ಎಂದು ಪೊಲೀಸರು ಹೇಳಿದರು.

ಆರಂಭದಲ್ಲಿ ಅಭ್ಯರ್ಥಿಗಳಿಗೆ ಹಲವು ಸೌಲಭ್ಯ ನೀಡಿದ್ದ. ವಾರ್ಷಿಕವಾಗಿ ದೊಡ್ಡ ಮೊತ್ತದ ಪ್ಯಾಕೇಜ್ ಕೊಡುವುದಾಗಿ ಘೋಷಿಸಿದ್ದ. ಕೆಲವರಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಿದ್ದ. ಎರಡು ತಿಂಗಳ ಬಳಿಕ ಕಂಪನಿಗೆ ಬೀಗ ಹಾಕಿ, ಪರಾರಿಯಾಗಿದ್ದ. ನಂತರ, ಆತಂಕಗೊಂಡ ಅಭ್ಯರ್ಥಿಗಳು ಕೆಲಸಕ್ಕೆ ಸೇರಿಕೊಳ್ಳಲು ಮತ್ತೆ 30 ಮಂದಿ ಬಂದಿದ್ದಾರೆ. ಹಣ ಕೊಡಲು ಸಿದ್ಧವಾಗಿದ್ದಾರೆ ಎಂದು ತಿಳಿಸಿದ್ದರು. ವಿಮಾನದ ಮೂಲಕ ಬಂದಿದ್ದ ಆರೋಪಿ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ. ಅಲ್ಲಿಗೆ ಬಂದ ಪೊಲೀಸರು ಬಂಧಿಸಿದ್ದಾರೆ.

ನಂಬರ್ ಪ್ಲೇಟ್‌ಗೆ ಸ್ಟಿಕ್ಕರ್: ಇಬ್ಬರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ನೋಂದಣಿ ಸಂಖ್ಯೆ ಕಾಣದಂತೆ ನಂಬರ್ ಪ್ಲೇಟ್‌ಗೆ ಸ್ಟಿಕ್ಕರ್ ಅಂಟಿಸಿಕೊಂಡು ಓಡಾಡುತ್ತಿದ್ದ ಇಬ್ಬರು ದ್ವಿಚಕ್ರ ವಾಹನ ಸವಾರರನ್ನು ಪೂರ್ವ ವಿಭಾಗದ ಸಂಚಾರ ಪೊಲೀಸರು ಬಂಧಿಸಿದ್ದಾರೆ.

ರಾಮಮೂರ್ತಿನಗರ ನಿವಾಸಿ ದಕ್ಷಿಣ ಮೂರ್ತಿ(23), ಕೆ.ಆರ್.ಪುರ ನಿವಾಸಿ ಹರೀಶ್(30) ಬಂಧಿತರು.

ಆರೋಪಿಗಳಿಂದ ಎರಡು ಬೈಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಇಬ್ಬರು ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಕೆ.ಆರ್.ಪುರ ಸಂಚಾರ ಠಾಣೆ ವ್ಯಾಪ್ತಿಯ ಹಳೇ ಮದ್ರಾಸ್ ಮುಖ್ಯ ರಸ್ತೆಯಲ್ಲಿ ನ.26ರಂದು ಬೆಳಿಗ್ಗೆ ಆರೋಪಿ ಹರೀಶ್ ತನ್ನ ಬೈಕ್‌ನ ನಂಬರ್ ಪ್ಲೇಟ್‌ಗೆ ಸ್ಟಿಕ್ಕರ್ ಅಂಟಿಸಿಕೊಂಡು ನಂಬರ್ ಕಾಣದಂತೆ ಮರೆ ಮಾಚಿಕೊಂಡು ಓಡಾಡುತ್ತಿದ್ದ. ಈ ಸಂಬಂಧ ಸಾರ್ವಜನಿಕರೊಬ್ಬರು ಫೋಟೊ ತೆಗೆದು ನಗರ ಸಂಚಾರ ಪೊಲೀಸರ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿದ್ದರು. ಈ ಬೆನ್ನಲ್ಲೇ ಕಾರ್ಯಾಚರಣೆ ನಡೆಸಿ ಸವಾರ ಹರೀಶ್‌ನನ್ನು ಬಂಧಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಕೆ.ಆರ್.ಪುರ ಸಂಚಾರ ಠಾಣೆ ಪೊಲೀಸರು ರಾಮಮೂರ್ತಿನಗರ ಮುಖ್ಯ ರಸ್ತೆಯಲ್ಲಿ ಇದೇ ರೀತಿ ಮಾಡಿದ್ದ ಬೈಕ್ ಸವಾರ ದಕ್ಷಿಣ ಮೂರ್ತಿಯನ್ನು ಬಂಧಿಸಲಾಗಿದೆ.

ಅನಿಲ ಸೋರಿಕೆಯಿಂದ ಸ್ಫೋಟ: ಗಾಯ

ಬೆಂಗಳೂರು: ಅಡುಗೆ ಮಾಡುವ ಸಂದರ್ಭದಲ್ಲಿ ಅನಿಲ ಸೋರಿಕೆಯಾಗಿ ಸಂಭವಿಸಿದ ಸ್ಫೋಟದಿಂದ ವ್ಯಕ್ತಿಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬಿಹಾರದ ಅಂಕಿತ್‌ರಾಜ್ (25) ಗಾಯಗೊಂಡವರು. ವಾರದ ಹಿಂದಷ್ಟೇ ಲಕ್ಷ್ಮಿ‌ಲೇಔಟ್‌ಗೆ ಬಂದಿದ್ದ ಅಂಕಿತ್ ಮೂರನೇ ಮಹಡಿಯಲ್ಲಿ ಮನೆಯೊಂದನ್ನು ಬಾಡಿಗೆಗೆ ಪಡೆದು ನೆಲೆಸಿದ್ದರು. ಬುಧವಾರ ಬೆಳಿಗ್ಗೆ 8 ಗಂಟೆ ಸಂದರ್ಭದಲ್ಲಿ ಅಡುಗೆ ಮಾಡುವ ಸಂದರ್ಭದಲ್ಲಿ ಈ ಸ್ಫೋಟ ಸಂಭವಿಸಿದೆ. ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ನಕಲಿ ವೈದ್ಯ ಸೇರಿ ಮತ್ತೆ ಇಬ್ಬರ ಬಂಧನ


ಮಕ್ಕಳ ಮಾರಾಟ: ಬಂಧಿತರ ಸಂಖ್ಯೆ 10ಕ್ಕೆ ಏರಿಕೆ– ಸಿಸಿಬಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಮಾರಾಟ ಪ್ರಕರಣದಲ್ಲಿ ಕೇಂದ್ರ ಅಪರಾಧ ವಿಭಾಗದ ಪೊಲೀಸರು ಮತ್ತೆ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ರಾಜಾಜಿನಗರದಲ್ಲಿ ಕ್ಲಿನಿಕ್ ನಡೆಸುತ್ತಿದ್ದ ನಕಲಿ ವೈದ್ಯ ಕೆವಿನ್ ಹಾಗೂ ಆರ್‌.ಟಿ. ನಗರದ ನಿವಾಸಿ ರಮ್ಯಾ ಎಂಬುವರನ್ನು ಬಂಧಿಸಿದ್ದಾರೆ. ಪ್ರಕರಣದಲ್ಲಿ ಬಂಧಿತರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.


ಕೆವಿನ್


ರಮ್ಯಾ

'ಕೆವಿನ್ ವೈದ್ಯಕೀಯ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ, ರಾಜಾಜಿನಗರದಲ್ಲಿ ಕ್ಲಿನಿಕ್ ನಡೆಸುತ್ತಿದ್ದ. ಮಾರಾಟವಾದ ಮಕ್ಕಳಿಗೆ ಬೇಕಾದ ಎಲ್ಲ ದಾಖಲೆಗಳನ್ನು ತನ್ನ ಕ್ಲಿನಿಕ್‌ನಲ್ಲಿ ತಯಾರಿಸಿ ದಂಪತಿಗೆ ಹಸ್ತಾಂತರಿಸುತ್ತಿದ್ದ. ಜನನ ಪ್ರಮಾಣಕ್ಕೆ ಬೇಕಾದ ವೈದ್ಯರ ಸಹಿ ಸೇರಿದಂತೆ ಎಲ್ಲ ವ್ಯವಸ್ಥೆ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

ರಾಧಾ ಮತ್ತು ಮಹಾಲಕ್ಷ್ಮಿ ಜತೆಗೆ ಸೇರಿಕೊಂಡು ರಮ್ಯಾ ಮಕ್ಕಳ ಮಾರಾಟ ದಂಧೆ ನಡೆಸುತ್ತಿದ್ದಳು. ಈ ಹಿಂದೆ ಹಣಕ್ಕಾಗಿ ತನ್ನ ಮಗುವನ್ನೇ ರಮ್ಯಾ ಮಾರಾಟ ಮಾಡಿದ್ದಳು. ಅಲ್ಲದೆ, ಕೆಲ ವರ್ಷದ ಹಿಂದೆ ಮದುವೆಯಾದ ಮಗಳ ಮಗುವನ್ನು ದಂಧೆಕೋರರ ಜತೆ ಸೇರಿಕೊಂಡು ಮಾರಾಟ ಮಾಡಿರುವುದು ತನಿಖೆಯಲ್ಲಿ ಗೊತ್ತಾಗಿದೆ.

'ಕುಟುಂಬದ ಯುವತಿಯೊಬ್ಬಳು ಗರ್ಭಿಣಿಯಾಗಿದ್ದಳು. ಆಕೆ ಮಗುವನ್ನು ಗರ್ಭಪಾತ ಮಾಡಿಸಲು ಮುಂದಾಗಿದ್ದಳು. ಆದರೆ, ರಮ್ಯಾ ಆಕೆಗೆ ಮನವೊಲಿಸಿ ಹಣ ಕೊಡಿಸುವುದಾಗಿ ಹೇಳಿದ್ದಳು. ತನ್ನ ಮನೆಯಲ್ಲಿ ಯುವತಿಗೆ ಆರೈಕೆ ಮಾಡಿದ್ದಳು. ಬಳಿಕ ಇತರೆ ಆರೋಪಿಗಳ ಜತೆಗೆ ಸೇರಿಕೊಂಡು ಮಗು ಮಾರಾಟ ನಡೆಸಿದ್ದಳು' ಎಂದು ಪೊಲೀಸರು ಹೇಳಿದರು.


ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ದಲಿತ ಸಂಘರ್ಷ ಸಮಿತಿ ಸದಸ್ಯರು, ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಅವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು

ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಉಭಯ ಸದನಗಳಲ್ಲಿ ಮಂಡಿಸಿ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

'ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳಿದ್ದು, ಉದ್ಯೋಗ, ಶಿಕ್ಷಣದಲ್ಲಿ ಕಲ್ಪಿಸಿರುವ ಶೇ 15ರಷ್ಟು ಮೀಸಲಾತಿ ಸಮಾನವಾಗಿ ಹಂಚಿಕೆಯಾಗಿಲ್ಲ. ಈ ತಾರತಮ್ಯ ನಿವಾರಣೆಗೆ ಎ.ಜೆ. ಸದಾಶಿವ ಆಯೋಗ ನೇಮಕ ಮಾಡಲಾಗಿತ್ತು. ಆಯೋಗವು ವರದಿ ನೀಡಿ 11 ವರ್ಷಗಳಾದರೂ ಅನುಷ್ಠಾನಗೊಳಿಸಿಲ್ಲ ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಆಕ್ರೋಶ ವ್ಯಕ್ತಪಡಿಸಿದರು.

ಕೊಲೆ: 8 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಬ್‌ಗಾಗಿ ಕಾಯುತ್ತಿದ್ದ ನೇಪಾಳದ ಯುವಕನಿಗೆ ದೊಣ್ಣೆಯಿಂದ ಥಳಿಸಿ ಕೊಲೆ ಮಾಡಿ ದರೋಡೆ ನಡೆಸಿದ್ದ ಎಂಟು ಆರೋಪಿಗಳನ್ನು ಆರ್‌ಎಂಸಿ ಯಾರ್ಡ್ ಪೊಲೀಸರು ಬಂಧಿಸಿದ್ದಾರೆ.

ದೊಡ್ಡಬಿದಿರುಕಲ್ಲು ಹಾಗೂ ಬಾಗಲಗುಂಟೆಯ ನಿವಾಸಿಗಳಾದ ಟಿ.ಚಂದ್ರು(28), ಜೀವನ್(26), ಕಾರ್ತಿಕ್(29), ಕಿರಣ್ ಕುಮಾರ್(25), ಮದನ್(24), ಮುನೇಶ್(25), ನಿಖಿಲ್(27), ಸಚಿನ್(30) ಬಂಧಿತ ಆರೋಪಿಗಳು. ಎಲ್ಲ ಆರೋಪಿಗಳೂ ಸ್ನೇಹಿತರು.

ಬಂಧಿತರಿಂದ 1 ಮೊಬೈಲ್, ₹ 5,200 ನಗದು, 1 ಸರಕು ಸಾಗಣೆ ವಾಹನ, 7 ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ತಲೆಗೆ ಹೊಡೆದಿದ್ದ ಆರೋಪಿಗಳು': ಆರೋಪಿಗಳು, ನ.13ರಂದು ನೇಪಾಳದ ಅನಿಲ್ ಬೊಹರ ಎಂಬಾತನನ್ನು ಕೊಲೆಗೈದು, ದರೋಡೆ ಮಾಡಿದ್ದರು. ಅನಿಲ್ ಬೊಹರ ಮತ್ತು ಸ್ನೇಹಿತರು ಶ್ರೀರಾಮಪುರದ ಗ್ಲಾಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ಅಂದು ಬೆಳಿಗ್ಗೆ ಮನೆಗೆ ಹೋಗಲು ಆರ್‌ಎಂಸಿ ಯಾರ್ಡ್‌ನ 1ನೇ ಗೇಟ್ ರಸ್ತೆಯ ದೇವಸ್ಥಾನ ಎದುರು ಕ್ಯಾಬ್‌ಗೆ ಕಾಯುತ್ತಿದ್ದರು. ಬುಕ್ ಮಾಡಿದ್ದ ಕ್ಯಾಬ್ ಸ್ಥಳಕ್ಕೆ ಬರುವುದು ತುಸು ವಿಳಂಬವಾಗಿತ್ತು. ಆಗ ಕೆಟಿಎಂ ಬೈಕ್ ಹಾಗೂ ಗೂಡ್ಸ್ ವಾಹನದಲ್ಲಿ ಬಂದ 10 ಮಂದಿ ದೊಣ್ಣೆಯಿಂದ ಅನಿಲ್ ಬೊಹರ ತಲೆಗೆ ಹೊಡೆದಿದ್ದರು. ಆತನ ಜತೆಗಿದ್ದ ಸ್ನೇಹಿತರಿಗೂ ಹಲ್ಲೆ ನಡೆಸಿ ದರೋಡೆ ನಡೆಸಿದ್ದರು' ಎಂದು ತಿಳಿಸಿದರು.

'ಅನಿಲ್‌ನನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನ.22ರಂದು ಅನಿಲ್ ಮೃತಪಟ್ಟಿದ್ದರು. ಈ ಸಂಬಂಧ ಆರೋಪಿಗಳ ವಿರುದ್ಧ ದರೋಡೆ ಜತೆಗೆ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು'


ಚಂದ್ರು


ಸಚಿನ್


ಕಾರ್ತಿಕ್


ಕಿರಣ್


ಜೀವನ್


ನಿಖಿಲ್


ಮದನ್


ಮುನೇಶ್

ನ.13ರಂದು ರಾತ್ರಿ ಪಟಾಕಿ ತರಲು ಹೋಗಿದ್ದರು. ನ.14ರ ನಸುಕಿನ ವೇಳೆ ಮನೆಗೆ ವಾಪಸ್ ಬರುವಾಗ ಮೋಜು- ಮಸ್ತಿಗಾಗಿ ದರೋಡೆ ಮಾಡಿ ಹಣ ಸಂಪಾದಿಸಲು ನಿರ್ಧರಿಸಿದ್ದರು. ಆ ವೇಳೆ ರಸ್ತೆಯಲ್ಲಿ ಸಿಕ್ಕಿದ ಅನಿಲ್‌ಗೆ ಹಲ್ಲೆ ಮಾಡಿದ್ದರು. ಇನ್ನೂ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಆರೋಪಿಗಳಾದ ಚಂದ್ರು, ಕಾರ್ತಿಕ್, ಸಚಿನ್ ವಿರುದ್ಧ ಈ ಹಿಂದೆಯೂ ಬಾಗಲಗುಂಟೆ ಠಾಣೆಯಲ್ಲಿ ಕಳವು ಪ್ರಕರಣ ದಾಖಲಾಗಿದ್ದವು' ಎಂದು ಪೊಲೀಸರು ಹೇಳಿದರು.

ಕೆಇಎ ನಡೆಸಿದ್ದ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದ ಆರೋಪ

ಇಬ್ಬರು ಪ್ರಾಂಶುಪಾಲರ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಳೆದ ಅಕ್ಟೋಬರ್ 28ರಂದು ವಿವಿಧ ನಿಗಮಗಳ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡಿದ ಆರೋಪದ ಮೇರೆಗೆ ಸರ್ಕಾರಿ ಪದವಿಪೂರ್ವ ಕಾಲೇಜಿನ ಇಬ್ಬರು ಪ್ರಾಂಶುಪಾಲರನ್ನು ಸಿಐಡಿ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

ಅಫಜಲಪುರ ತಾಲ್ಲೂಕು ಕರಜಗಿ ಗ್ರಾಮದ ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲ ಚಂದ್ರಕಾಂತ ಬುರಕಲ್ ಹಾಗೂ ಅಫಜಲಪುರದ ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲ ಬಸಣ್ಣ (ಬಸವರಾಜ) ಪೂಜಾರಿ ಬಂಧಿತರು.

ಚಂದ್ರಕಾಂತ ಅವರು ಅಫಜಲಪುರದ ರಾಯಲ್ ಪಬ್ಲಿಕ್ ಶಾಲಾ ಕೇಂದ್ರದಲ್ಲಿ ಆರಂಭಿಸಿದ್ದ ಪರೀಕ್ಷಾ ಕೇಂದ್ರದ ಮುಖ್ಯಸ್ಥರಾಗಿದ್ದರೆ, ಬಸಣ್ಣ ಪೂಜಾರಿ ಸಿಟಿ ಕೋಆರ್ಡಿನೇಟರ್ ಆಗಿದ್ದರು. ಈ ಸಂದರ್ಭದಲ್ಲಿ ಪರೀಕ್ಷಾ ಅಕ್ರಮಕ್ಕೆ ಸಹಕರಿಸುವ ಉದ್ದೇಶದಿಂದ ಪ್ರಶ್ನೆ ಪತ್ರಿಕೆಯನ್ನು ಸೋರಿಕೆ ಮಾಡಿದ್ದರು ಎನ್ನಲಾಗಿದೆ.

ಆರೋಪಿಗಳು ನೀಡಿದ ಸುಳಿವಿನ ಮೇರೆಗೆ ಕೆಲ ದಿನಗಳ ಹಿಂದೆ ಸಿಐಡಿ ಅಧಿಕಾರಿಗಳು ಇಬ್ಬರು ಆರೋಪಿಗಳನ್ನು ಕಚೇರಿಗೆ ಕರೆಸಿಕೊಂಡು ವಿಚಾರಣೆ ನಡೆಸಿ ಕಳುಹಿಸಿದ್ದರು. ಬುಧವಾರ ಅವರನ್ನು ಬಂಧಿಸಿ ನ್ಯಾಯಾಧೀಶರ ಎದುರು ಹಾಜರುಪಡಿಸಿದರು.

ಆರೋಪಿ ಚಂದ್ರಕಾಂತ ಬುರಕಲ್ ಪ್ರಾಂಶುಪಾಲರಾಗಿರುವ ಕಾಲೇಜಿನಲ್ಲಿ ಅಧಿಕೃತ ಅಭ್ಯರ್ಥಿಗಳ ಬದಲು ಬೇರೆಯವರು ಪರೀಕ್ಷೆ ಬರೆಯಲು ಅವಕಾಶ ನೀಡಿದ್ದರು ಎಂಬ ಆರೋಪಗಳೂ ಕೇಳಿ ಬಂದಿವೆ. ತಾಲ್ಲೂಕಿನಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದರಿಂದ ಚಂದ್ರಕಾಂತ ಅವರ ಅಕ್ರಮದ ಬಗ್ಗೆ ಯಾರೂ ಮೇಲಧಿಕಾರಿಗಳ ಗಮನಕ್ಕೆ ತಂದಿರಲಿಲ್ಲ ಎಂದು ಉಪನ್ಯಾಸಕರೊಬ್ಬರು ಮಾಹಿತಿ ನೀಡಿದ್ದಾರೆ.

ದರೋಡೆ: ಜಿ.ಪಂ. ಮಾಜಿ ಸದಸ್ಯ ಸೇರಿ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೀದರ್: ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ದರೋಡೆ ಪ್ರಕರಣವನ್ನು ಪೊಲೀಸರು 24 ಗಂಟೆಯೊಳಗೆ ಭೇದಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸೇರಿ ಮೂವರನ್ನು ವಶಕ್ಕೆ ಪಡೆದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ₹2.62 ಕೋಟಿ ನಗದು ಜಪ್ತಿ ಮಾಡಿದ್ದಾರೆ.

ಆರೋಪಿಗಳಾದ ಗುಂಡುರೆಡ್ಡಿ, ವಿಜಯಕುಮಾರ ರೆಡ್ಡಿ ಮತ್ತು ಸಂಜೀವ ರೆಡ್ಡಿ ಬಂಧಿತರು. ಪರಾರಿಯಾಗಿರುವ ಒಬ್ಬನ ಪತ್ತೆಗೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. ತಿಳಿಸಿದ್ದಾರೆ.

ಜಿ.ಪಂ. ಮಾಜಿ ಸದಸ್ಯನಾಗಿದ್ದ ಗುಂಡುರೆಡ್ಡಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಸವಕಲ್ಯಾಣದಿಂದ ಬಿಜೆಪಿ ಟಿಕೆಟ್‌ಗೆ ಯತ್ನಿಸಿದ್ದರು. ಟಿಕೆಟ್ ಕೈತಪ್ಪಿದ ಬಳಿಕ ಕಾಂಗ್ರೆಸ್ ಅಭ್ಯರ್ಥಿ ಪರ ಕೆಲಸ ಮಾಡಿದ್ದ.

ನಡೆದಿದ್ದೇನು?: ಆಂಧ್ರ ಪ್ರದೇಶದ ತಿರುಪತಿಯ ಉಮಾಶಂಕರ ಭಾರದ್ವಾಜ್ ಎಂಬುವರು ಮಂಗಳವಾರ ರಾತ್ರಿ 8.50ರ ಸುಮಾರಿಗೆ ಇಬ್ಬರು ಸ್ನೇಹಿತರೊಂದಿಗೆ ₹3.50 ಕೋಟಿ ನಗದು ಇಟ್ಟುಕೊಂಡು ಹೈದರಾಬಾದ್‌ನಿಂದ ಪಂಢರಾಪುರದ ಕಡೆಗೆ ತೆರಳುತ್ತಿದ್ದರು. ಹಾಲು ಖರೀದಿಸಿ ರೈತನಿಗೆ ಹಣ ಪಾವತಿಸಲು ಹೋಗುತ್ತಿದ್ದರು. ಈ ವೇಳೆ ನಾಲ್ವರು ದ್ವಿಚಕ್ರ ವಾಹನಗಳಲ್ಲಿ ಬಂದು, ಕಾರು ಅಡ್ಡಗಟ್ಟಿ ಗುಂಡುರೆಡ್ಡಿ, ವಿಜಯಕುಮಾರ ಎಂದು ಹೇಳಿಕೊಂಡು, ಪಿಸ್ತೂಲ್ ತೆಗೆದು ಗಾಳಿಯಲ್ಲಿ ಎರಡು ಗುಂಡು ಹಾರಿಸಿ ಹೆದರಿಸಿದ್ದಾರೆ. ಉಮಾಶಂಕರ ಅವರ ಹಣೆಯ ಮೇಲೆ ಪಿಸ್ತೂಲ್ ಇಟ್ಟು ಅವರ ಬಳಿಯಿದ್ದ ₹3.50 ಕೋಟಿ ನಗದನ್ನು ಸಿನಿಮೀಯ ರೀತಿಯಲ್ಲಿ ದೋಚಿಕೊಂಡು ಹೋಗಿದ್ದರು. ಉಮಾಶಂಕರ ಅವರು ಬುಧವಾರ ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು. ಸುಲಿಗೆ, ಕೊಲೆ ಯತ್ನ, ಶಸ್ತ್ರಾಸ್ತ್ರ ಕಾಯ್ದೆ ಅಡಿ ಪ್ರಕರಣ ದಾಖಲಾಗಿತ್ತು.

ಬಳಿಕ ಹುಮನಾಬಾದ್ ಡಿವೈಎಸ್ಪಿ ಜೆ.ಎಸ್. ನ್ಯಾಮೆಗೌಡರ್, ಮಂಠಾಳ ಸಿಪಿಐ ಕೃಷ್ಣಕುಮಾರ್ ಪಾಟೀಲ, ಬಸವಕಲ್ಯಾಣ ಪಿಎಸ್ಐ ವಾಸೀಂ ಪಟೇಲ್ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು.

'2024ರ ಡಿಸೆಂಬರ್‌ನೊಳಗೆ ಕನ್ನಡ ಸಾಹಿತ್ಯ ಸಮ್ಮೇಳನ'

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): 'ರಾಜ್ಯದಲ್ಲಿ ಈ ವರ್ಷ ಬರ ಆವರಿಸಿರುವುದರಿಂದ ಮಂಡ್ಯದಲ್ಲಿ ನಡೆಸಲು ಉದ್ದೇಶಿಸಿದ್ದ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ಮುಂದೂಡಲಾಗಿದೆ. ಆದರೆ, 2024ರೊಳಗೆ ನಡೆಸಲಾಗುವುದು' ಎಂದು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಮಹೇಶ್ ಜೋಶಿ ಹೇಳಿದರು.

ಪಟ್ಟಣದ ಕೆ.ಪಿಎಸ್ ಶಾಲೆ ಆವರಣದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಬುಧವಾರ ಆಯೋಜಿಸಿದ್ದ 'ಶಾಲೆಗೊಂದು ಕಾರ್ಯಕ್ರಮ'ದ ಸಮಾರೋಪ ಮತ್ತು ರಾಜ್ಯ ಜಾನಪದ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಪಿ.ಯು ಹೆಸರು ಬದಲು: ನಾಳೆ ಧರಣಿ

ಬೆಂಗಳೂರು: 'ಪದವಿ ಪೂರ್ವ ಶಿಕ್ಷಣ ಇಲಾಖೆಯ ಹೆಸರನ್ನು ಶಾಲಾ ಶಿಕ್ಷಣ (ಪದವಿ ಪೂರ್ವ) 'ಇಲಾಖೆ ಎಂದು ಬದಲಿಸಿರುವುದನ್ನು ಕೈಬಿಡಬೇಕು' ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘ, ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖಾ ಬೋಧಕೇತರ ನೌಕರರ ಸಂಘಗಳ ಒಕ್ಕೂಟ ಜಂಟಿಯಾಗಿ ಡಿ. 1ರಂದು ಬೆಳಿಗ್ಗೆ 10 ಗಂಟೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಲು ನಿರ್ಧರಿಸಿವೆ.

ಈ ಬೇಡಿಕೆ ಸಹಿತ ಇನ್ನೂ ಕೆಲವು ಬೇಡಿಕೆಗಳನ್ನು ಮುಂದಿಟ್ಟು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ನ. 3ರಂದು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 23ರಂದು ಮನವಿ ಸಲ್ಲಿಸಿದರೂ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಹೀಗಾಗಿ, ಧರಣಿ ನಡೆಸುವುದು ಅನಿವಾರ್ಯವಾಗಿದೆ ಎಂದು ಒಕ್ಕೂಟದ ಪದಾಧಿಕಾರಿಗಳು ತಿಳಿಸಿದ್ದಾರೆ.

ಹೆಣ್ಣುಭ್ರೂಣ ಹತ್ಯೆ ಪ್ರಕರಣ: ಆರೋಪಿಗಳ ಬಂಧನವಾಗುತ್ತಿದ್ದಂತೆ ಆಸ್ಪತ್ರೆ ಬಂದ್; ಸಾಕ್ಷ್ಯ ನಾಶಕ್ಕೂ ಯತ್ನ

ಅಕ್ರಮದ ಕೇಂದ್ರವಾಗಿದ್ದ 'ಮಾತಾ ಆಸ್ಪತ್ರೆ'

● ಆರ್. ಜಿತೇಂದ್ರ



ಮೈಸೂರಿನ ಉದಯಗಿರಿಯಲ್ಲಿ ಇರುವ ಮಾತಾ ಆಸ್ಪತ್ರೆ

ಮೈಸೂರು: ಇಲ್ಲಿನ ಉದಯಗಿರಿಯ ಮಹದೇವಪುರ ಮುಖ್ಯರಸ್ತೆಯಲ್ಲಿರುವ 'ಮಾತಾ ಆಸ್ಪತ್ರೆ' ಹೆಣ್ಣುಭ್ರೂಣ ಹತ್ಯೆ ಜಾಲದ ಕೇಂದ್ರವಾಗಿದ್ದು, 'ಅಕ್ರಮಗಳು ನಡೆದಿದ್ದರೂ ಆಸ್ಪತ್ರೆಯು ಆರೋಗ್ಯ ಇಲಾಖೆ ಅಧಿಕಾರಿಗಳ ಕಣ್ಣಿಗೇಕೆ ಕಂಡಿರಲಿಲ್ಲ' ಎಂಬ ಪ್ರಶ್ನೆ ಈಗ ಚರ್ಚೆಯಲ್ಲಿದೆ.

ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ, ಅಲ್ಲಿ ಆಸ್ಪತ್ರೆ ಇತ್ತೆಂದು ಗೊತ್ತಾಗದ ರೀತಿಯಲ್ಲಿ ಎಲ್ಲ ಫಲಕಗಳನ್ನು ತೆಗೆಯಲಾಗಿದೆ. ಕಟ್ಟಡದ ಎರಡು ಅಂತಸ್ತಿನಲ್ಲಿ ಆಸ್ಪತ್ರೆ ನಡೆಯುತ್ತಿದ್ದು, ಸದ್ಯ ಮುಖ್ಯದ್ವಾರಕ್ಕೆ ಬೀಗ ಜಡಿಯಲಾಗಿದೆ.

'ಮಾತಾ ಆಸ್ಪತ್ರೆ ನೋಂದಣಿಯೇ ಆಗಿಲ್ಲ. ಒಮ್ಮೆ ಭೇಟಿ ಕೊಟ್ಟಾಗ ಬಾಗಿಲು ಹಾಕಿತ್ತು' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ಆದರೆ, 'ಹಲವು ವರ್ಷಗಳಿಂದ ಆಸ್ಪತ್ರೆ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಪ್ರದೇಶದಲ್ಲಿ ಹೆಚ್ಚು ಪರಿಚಿತವೂ ಆಗಿದೆ' ಎಂಬುದು ಸ್ಥಳೀಯರ ನುಡಿ.

'ಆರಂಭದಲ್ಲಿ ಲತಾ ಕ್ಲಿನಿಕ್ ಆಗಿದ್ದ ಆಸ್ಪತ್ರೆಯನ್ನು ಪ್ರಕರಣದ ಆರೋಪಿ ತುಳಸಿರಾಮ್ ಮತ್ತೊಬ್ಬ ಆರೋಪಿ ಚಂದನ್ ಬಲ್ಲಾಳ್‌ಗೆ ಮಾರಿದ್ದ. ಚಂದನ್ ಅದರ ಹೆಸರನ್ನು 'ಮಾತಾ ಆಸ್ಪತ್ರೆ' ಎಂದು ಬದಲಿಸಿದ್ದ. 'ಸ್ಪೆಷಾಲಿಟಿ ಪಾಲಿ ಕ್ಲಿನಿಕ್' ಎಂಬ ಹೆಸರಿನ ಫಲಕವಿದ್ದ ಆಸ್ಪತ್ರೆಗೆ ಆಗಾಗ್ಗೆ ರೋಗಿಗಳು ಬರುತ್ತಿದ್ದರು' ಎಂದು ಕೆಲವು ಸ್ಥಳೀಯರು ಸ್ಥಳಕ್ಕೆ ಬುಧವಾರ ಭೇಟಿ ನೀಡಿದ್ದ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಕರಣದ ಪ್ರಮುಖ ಆರೋಪಿ ಚಂದನ್ ಬಲ್ಲಾಳ್ ವೃತ್ತಿಯಲ್ಲಿ ಆಯುರ್ವೇದ ವೈದ್ಯನಾಗಿದ್ದ. ನಗರದ ರಾಜಕುಮಾರ್ ರಸ್ತೆಯಲ್ಲಿ ಪೈಲ್ಸ್ ಚಿಕಿತ್ಸಾ ಕೇಂದ್ರ ನಡೆಸುತ್ತಿದ್ದ. ಅಲ್ಲಿ ರೋಗಿಗಳ ಚಿಕಿತ್ಸೆ ನೆಪದಲ್ಲಿ ಸಂದರ್ಶನ ನಡೆಸಿ, ಭ್ರೂಣ ಹತ್ಯೆಗೆ ಬೇಡಿಕೆ ಇಟ್ಟವರನ್ನು ಮಾತಾ ಕ್ಲಿನಿಕ್‌ಗೆ ಕರೆತರಲಾಗುತ್ತಿತ್ತು. ಹೆಚ್ಚಾಗಿ ಹೊರ ಜಿಲ್ಲೆಗಳ ಜನರೇ ಬರುತ್ತಿದ್ದು, ಅವರನ್ನು ಕೆಲವು ದಿನಗಳ ಕಾಲ ದಾಖಲಿಸಿಕೊಂಡು ಗರ್ಭಪಾತ ಮಾಡಿಸಲಾಗುತ್ತಿತ್ತು. ಅಂತಹವರನ್ನು ಗುರುತಿಸಿ ಕರೆತರುವುದು ಮಧ್ಯವರ್ತಿಗಳ ಕೆಲಸವಾಗಿತ್ತು' ಎಂದು ಹೇಳಲಾಗುತ್ತಿದೆ.

ಸಮಗ್ರ ತನಿಖೆಗೆ ಸೂಚನೆ

ಮಂಡ್ಯ: 'ತಾಲ್ಲೂಕಿನ ಹುಳ್ಳೇನಹಳ್ಳಿಯ ಆಲೆಮನೆಯಲ್ಲಿ ನಡೆಯುತ್ತಿದ್ದ ಹೆಣ್ಣು ಭ್ರೂಣಲಿಂಗ ಪತ್ತೆ ಪ್ರಕರಣದ ಸಮಗ್ರ ತನಿಖೆ ನಡೆಸಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದರು.

> ಮಾತಾ ಆಸ್ಪತ್ರೆ ಆರೋಗ್ಯ ಇಲಾಖೆಯಿಂದ ಪರವಾನಗಿ ಪಡೆದಿರಲಿಲ್ಲ. ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ನಾವೂ ಪರಿಶೀಲಿಸುತ್ತೇವೆ
>
> **ಶ್ರೀನಿವಾಸ,** ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ಯೋಜನಾ ನಿರ್ದೇಶಕ

ಬುಧವಾರ ಜೂಮ್ ಮೀಟಿಂಗ್ ನಡೆಸಿದ ಸಚಿವರು, 'ಸ್ಥಳೀಯ ಪಿಡಿಒ, ಆಶಾ ಕಾರ್ಯಕರ್ತೆಯರು, ಆರೋಗ್ಯ ಸಿಬ್ಬಂದಿಯ ಗಮನಕ್ಕೂ ಇಲ್ಲದೇ ಈ ಅಕ್ರಮ ನಡೆಯುತ್ತಿತ್ತೇ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. 'ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ನಿಷೇಧ ಕಾಯ್ದೆ ಬಗ್ಗೆ ಹಳ್ಳಿಗಳಲ್ಲಿ ಅರಿವು ಮೂಡಿಸಬೇಕು' ಎಂದು ಸೂಚಿಸಿದರು.

ಏಕಾಏಕಿ 'ಹಳೇ' ನೋಟಿಸ್ ಜಾರಿ

ಮೈಸೂರು: ಭ್ರೂಣ ಹತ್ಯೆ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ, ಆರೋಗ್ಯ ಇಲಾಖೆಯ ಅಧಿಕಾರಿಗಳು ಎಚ್ಚೆತ್ತಿದ್ದು, ಮಂಗಳವಾರ ರಾತ್ರಿ ಮಾತಾ ಆಸ್ಪತ್ರೆ ಬಾಗಿಲಿಗೆ ನೋಟಿಸ್ ಅಂಟಿಸಿದ್ದಾರೆ. ಮೂರು ತಿಂಗಳಲ್ಲಿ ಆಸ್ಪತ್ರೆಯಲ್ಲಿ ನಡೆದ ಭ್ರೂಣ ಪರೀಕ್ಷೆಗಳ ವಿವರ ನೀಡುವಂತೆ ಸೂಚಿಸಿದ್ದಾರೆ. ಆದರೆ ನೋಟಿಸ್‌ನಲ್ಲಿ ನವೆಂಬರ್ ಬದಲಿಗೆ 'ಜೂನ್ 22' ಎಂದು ನಮೂದಿಸಿದ್ದು, ಇದು ಹಲವು ಅನುಮಾನಗಳಿಗೆ ಕಾರಣವಾಗಿದೆ.

'ನೋಟಿಸ್ ಅಂಟಿಸಿರುವುದು, ಅದರಲ್ಲಿ ಹಳೇ ದಿನಾಂಕ ನಮೂದಿಸಿರುವುದು ಗಮನಕ್ಕೆ ಬಂದಿಲ್ಲ. ತಾಲ್ಲೂಕು ವೈದ್ಯಾಧಿಕಾರಿಗಳಿಂದ ವಿವರಣೆ ಕೇಳಿದ್ದೇನೆ' ಎಂದು ಮೈಸೂರು ಡಿಎಚ್‌ಒ ಡಾ. ಕುಮಾರಸ್ವಾಮಿ ತಿಳಿಸಿದರು.

ಅಧಿಕಾರಿಗಳು ದೌಡು

ಮೈಸೂರು/ಮಂಡ್ಯ: ಭ್ರೂಣ ಹತ್ಯೆ ಜಾಲ ಪತ್ತೆ ಪ್ರಕರಣ ಗಂಭೀರ ಸ್ವರೂಪ ಪಡೆಯುತ್ತಲೇ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಮಂಡ್ಯ, ಮೈಸೂರಿಗೆ ಬುಧವಾರ ದೌಡಾಯಿಸಿ, ಅಕ್ರಮ ನಡೆದಿರುವ ಸ್ಥಳಗಳ ಪರಿಶೀಲನೆ ನಡೆಸಿದರು.

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ಯೋಜನಾ ನಿರ್ದೇಶಕ ಶ್ರೀನಿವಾಸ ನೇತೃತ್ವದ ತಂಡವು ಮೊದಲಿಗೆ ಮಂಡ್ಯದ ಹುಳ್ಳೇನಹಳ್ಳಿ ಮತ್ತು ಹಾಡ್ಯ ನಡುವಿನ ಆಲೆಮನೆಗೆ ಭೇಟಿ ನೀಡಿ ಪರಿಶೀಲಿಸಿತು. ನಂತರ ಅಧಿಕಾರಿಗಳ ಸಭೆ ನಡೆಸಿತು.

ನಂತರ, ಪ್ರಮುಖ ಆರೋಪಿ ಚಂದನ್ ಬಲ್ಲಾಳ್ ನಡೆಸುತ್ತಿದ್ದ ಮೈಸೂರಿನ ಮಾತಾ ಆಸ್ಪತ್ರೆ, ಡಾ. ರಾಜಕುಮಾರ್ ರಸ್ತೆಯಲ್ಲಿರುವ ಪೈಲ್ಸ್ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿತು

ಆಶಾ ಕಾರ್ಯಕರ್ತೆಗೆ ಬೆದರಿಕೆ

ಹುಲ್ಲೇನಹಳ್ಳಿಯ ಆಲೆಮನೆಗೆ ಅಧಿಕಾರಿಗಳ ತಂಡ ಭೇಟಿ ನೀಡಿದ್ದ ಸಂದರ್ಭದಲ್ಲಿ, ಆರೋಪಿ ನವೀನ್ ಅಕ್ಕನ ಮಗ ಪ್ರಶಾಂತ್ ಎಂಬಾತ ಆಶಾ ಕಾರ್ಯಕರ್ತೆಗೆ ಬೆದರಿಕೆ ಹಾಕಿದನೆನ್ನಲಾಗಿದೆ.

ಅಧಿಕಾರಿಯ ಸೂಚನೆ ಮೇರೆಗೆ ಕಾರ್ಯಕರ್ತೆಯು ಆಲೆಮನೆ ಮಾಲೀಕನಿಗೆ ಕರೆ ಮಾಡಿದಾಗ ಮಾತನಾಡಿದ ಪ್ರಶಾಂತ್, 'ನೀವು ಯಾರು? ಯಾರ ಅನುಮತಿ ಮೇರೆಗೆ ಆಲೆಮನೆಗೆ ಬಂದಿದ್ದೀರಾ? ಅಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಬೆಲೆ ಬಾಳುವ ವಸ್ತುಗಳಿದ್ದು, ಕಳುವಾದರೆ ಅಥವಾ ಹಾನಿಯಾದರೆ ಮುಂದೆ ನೀವು ಅನುಭವಿಸುತ್ತೀರಾ' ಎಂದು ಬೆದರಿಕೆ ಹಾಕಿದ ಎನ್ನಲಾಗಿದೆ.

'ನಾವು ಇಲ್ಲದ ಸಮಯದಲ್ಲಿ ಆಲೆಮನೆಗೆ ನೀವು ಹೇಗೆ ಬಂದಿದ್ದೀರಾ? ಏನಾದರೂ ವ್ಯತ್ಯಾಸಗಳಾದಲ್ಲಿ ನೀವೇ ಜವಾಬ್ದಾರರು. ಮುಂದೇನು ಮಾಡಬೇಕೆಂದು ಗೊತ್ತಿದೆ. ನಿಮ್ಮ ವಿರುದ್ಧ ಪೊಲೀಸರಿಗೆ ದೂರು ಕೊಡುವೆ' ಎಂದು ಬೆದರಿಸಿದ ಎನ್ನಲಾಗಿದೆ.

'ಆರೋಪಿಗಳು ವೈದ್ಯರಲ್ಲ'

ಮಂಡ್ಯ: 'ಹೆಣ್ಣು ಭ್ರೂಣ ಲಿಂಗ ಪತ್ತೆ ಮತ್ತು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ಆರೋಪಿಗಳು ವೈದ್ಯರಲ್ಲ. ಯಾವುದೇ ತರಬೇತಿ ಪಡೆದಿರುವ ಮಾಹಿತಿಯೂ ಇಲ್ಲ' ಎಂದು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ಯೋಜನಾ ನಿರ್ದೇಶಕ ಶ್ರೀನಿವಾಸ ಸ್ಪಷ್ಟಪಡಿಸಿದರು.

'ಆರೋಪಿಗಳು ಮಂಡ್ಯದಲ್ಲಿ ಗರ್ಭಪಾತ ಮಾಡುತ್ತಿರಲಿಲ್ಲ. ಹೊರ ಜಿಲ್ಲೆಗಳಿಂದ ಮಹಿಳೆಯರನ್ನು ಕರೆತರುತ್ತಿದ್ದರೆಂಬ ಅನುಮಾನದ ಮೇಲೆ ಪ್ರಕರಣ ದಾಖಲಾಗಿದೆ. ಸಂಪೂರ್ಣ ಮಾಹಿತಿ ಪೊಲೀಸ್ ತನಿಖೆಯಿಂದ ಹೊರಬರಲಿದೆ. ಆರೋಪಿಗಳು ಮೊಬೈಲ್ ಸ್ಕ್ಯಾನಿಂಗ್ ಯಂತ್ರ ಬಳಸುತ್ತಿದ್ದರು ಎಂಬ ಮಾಹಿತಿಯೂ ಸಿಕ್ಕಿದೆ. ಪೊಲೀಸರು ವಶಕ್ಕೆ ಪಡೆದಿರುವ ಕಾರಿನ ಬಗ್ಗೆ ಐದು ತಿಂಗಳ ಹಿಂದೆಯೇ ನಾವು ನೀಡಿದ್ದ ಮಾಹಿತಿ ಮೇರೆಗೆ ಪ್ರಕರಣ ಬೆಳಕಿಗೆ ಬಂದಿದೆ' ಎಂದರು.

'ಭ್ರೂಣ ಹತ್ಯೆ ತಡೆಯುವ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ತಂಡ ರಚಿಸುವ ಸಂಬಂಧ ಎರಡು ದಿನಗಳಲ್ಲಿ ಉನ್ನತ ಮಟ್ಟದ ಸಭೆ ಕರೆಯಲಾಗಿದೆ' ಎಂದರು.

ಚೀನಾದಿಂದ ಸ್ಕ್ಯಾನರ್: 'ಚೀನಾದಿಂದ ತರಿಸಿದ, ಬ್ಯಾಗ್‌ನಲ್ಲಿ ಸಾಗಿಸಬಹುದಾದ ಮೊಬೈಲ್ ಸ್ಕ್ಯಾನಿಂಗ್ ಯಂತ್ರವನ್ನು ಆರೋಪಿಗಳು ಬಳಸುತ್ತಿದ್ದರು. ಸ್ಕ್ಯಾನಿಂಗ್ ಯಂತ್ರದ ವಯರ್ ಅನ್ನು ಮಾನಿಟರ್‌ಗೆ ಅಳವಡಿಸಿ, ಉಪಕರಣವನ್ನು ಗರ್ಭಿಣಿಯ ಹೊಟ್ಟೆಯ ಮೇಲೆ ಇಟ್ಟು ಲಿಂಗಪತ್ತೆ ಮಾಡುತ್ತಿದ್ದರು. ಅದರಲ್ಲಿ ಯಾವುದೇ ಮಾಹಿತಿ ದಾಖಲಾಗುತ್ತಿರಲಿಲ್ಲ. ಆದರೆ, ದೇಶದಲ್ಲಿ ನೋಂದಾಯಿತ ಸ್ಕ್ಯಾನಿಂಗ್ ಯಂತ್ರದಲ್ಲಿ, ಸ್ಕ್ಯಾನಿಂಗ್ ಆದ ಪ್ರಕರಣಗಳ ಮಾಹಿತಿ ದಾಖಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

'ಚೀನಾದಿಂದ ತರಿಸಿದ, ಬ್ಯಾಗ್‌ನಲ್ಲಿಟ್ಟುಕೊಂಡು ಸಾಗಿಸಬಹುದಾದ ಮೊಬೈಲ್ ಸ್ಕ್ಯಾನಿಂಗ್ ಯಂತ್ರವನ್ನು ಆರೋಪಿಗಳು ಬಳಸುತ್ತಿದ್ದರು. ಆಲೆಮನೆಯಲ್ಲಿದ್ದ 4 ಕೊಠಡಿಯಲ್ಲಿ ಮಹಿಳೆಯರನ್ನು ಕೂರಿಸುತ್ತಿದ್ದರು. ಮತ್ತೊಂದು ಕೊಠಡಿಯಲ್ಲಿ ಒಬ್ಬೊಬ್ಬರನ್ನೇ ಸ್ಕ್ಯಾನಿಂಗ್ ಮಾಡುತ್ತಿದ್ದರು. ಮಾತ್ರೆಯಲ್ಲೇ ಭ್ರೂಣ ಕರಗಿಸಬಹುದಾಗಿದ್ದರೆ ಗರ್ಭಿಣಿಯರಿಗೆ ಮಾತ್ರೆ ಕೊಟ್ಟು ಕಳುಹಿಸುತ್ತಿದ್ದರು. ಕ್ಲಿಷ್ಟವೆನಿಸುವ ಪ್ರಕರಣಗಳನ್ನು ಚೀಟಿಯಲ್ಲಿ ಬರೆದುಕೊಟ್ಟು ಮೈಸೂರಿನ ಆಸ್ಪತ್ರೆಯೊಂದಕ್ಕೆ ಕಳುಹಿಸುತ್ತಿದ್ದರು' ಎಂದು ಬಿಹಾರ ಮೂಲದ ಕಾರ್ಮಿಕರು ತಿಳಿಸಿದ್ದಾರೆ.

ವರದಿ ಕೇಳಿದ ಮಕ್ಕಳ ಹಕ್ಕುಗಳ ಆಯೋಗ

ಬೆಂಗಳೂರು: ಭ್ರೂಣ ಹತ್ಯೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳು ಕುರಿತು ತಕ್ಷಣವೇ ವರದಿಯನ್ನು ಸಲ್ಲಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಅವರು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಭ್ರೂಣ ಹತ್ಯೆ ಜಾಲ ಪತ್ತೆ ಆಗಿರುವುದು ಮಾಧ್ಯಮಗಳ ಮೂಲಕ ಆಯೋಗದ ಗಮನಕ್ಕೆ ಬಂದಿದೆ. ಜೀವ ಉಳಿಸಬೇಕಾದ ವೈದ್ಯರೇ ಅಮಾನವೀಯ ಕೃತ್ಯದಲ್ಲಿ ಭಾಗಿಯಾಗಿರುವುದಕ್ಕೆ ಇಡೀ ಮನುಕುಲವೇ ತಲೆ ತಗ್ಗಿಸುವಂತಾಗಿದೆ. ಇದರಿಂದ ರಾಜ್ಯವೇ ಆತಂಕಕ್ಕೆ ಒಳಗಾಗಿದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಭ್ರೂಣ ಹತ್ಯೆಗಳ ಪ್ರಕರಣಗಳನ್ನು ಆಯೋಗವು ಗಂಭೀರವಾಗಿ ಪರಿಗಣಿಸಿದ್ದು, ಪ್ರಕರಣದಲ್ಲಿ ಕಾನೂನು ರೀತಿಯಲ್ಲಿ ಕೈಗೊಂಡ ಕ್ರಮಗಳ ವರದಿಯನ್ನು ಸಲ್ಲಿಸಬೇಕು. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಇಲಾಖೆಯಿಂದ ಸೂಕ್ತ ಮಾರ್ಗಸೂಚಿ ಮತ್ತು ಸುತ್ತೋಲೆ ಹೊರಡಿಸಬೇಕು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿಯು ನಿಯಮಿತವಾಗಿ ಆಸ್ಪತ್ರೆ ಮತ್ತು ಸ್ಕ್ಯಾನಿಂಗ್ ಕೇಂದ್ರಗಳಿಗೆ ಭೇಟಿ ನೀಡುವುದರ ಜತೆಗೆ ಸಭೆ ನಡೆಸುವಂತೆಯೂ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ


ಕೆಎಸ್‌ಪಿಸಿಬಿ: ಮಾರ್ಗಸೂಚಿ ತಿದ್ದುಪಡಿಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರನ್ನು ನೇಮಕ ಮಾಡುವ ಸಂಬಂಧ ಈ ಹಿಂದೆ ವಿವಿಧ ನ್ಯಾಯಪೀಠಗಳು ನೀಡಿರುವ ಆದೇಶಗಳ ಅನುಸಾರ ಮಾರ್ಗಸೂಚಿಗಳನ್ನು ತಿದ್ದಪಡಿ ಮಾಡಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ತಮ್ಮ ಅಧಿಕಾರವಧಿ ಮೊಟಕುಗೊಳಿಸಿದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಕೆಎಸ್‌ಪಿಸಿಬಿ ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ ಸಲ್ಲಿಸಿದ್ದ ಅರ್ಜಿಯೂ ಸೇರಿದಂತೆ ಹಲವು ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

'ಕೆಎಸ್‌ಪಿಸಿಬಿ ಅಧ್ಯಕ್ಷರು, ಸದಸ್ಯರು ಮತ್ತು ಸದಸ್ಯ ಕಾರ್ಯದರ್ಶಿ ನೇಮಕಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯು, ನೀರು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ ಹಾಗೂ ಸುಪ್ರೀಂಕೋರ್ಟ್ ಸೇರಿದಂತೆ ವಿವಿಧ ಹೈಕೋರ್ಟ್‌ಗಳ ಆದೇಶಕ್ಕೆ ತದ್ವಿರುದ್ಧವಾಗಿದೆ. ಆದ್ದರಿಂದ, ಮಾರ್ಗಸೂಚಿಗಳನ್ನು ಅಗತ್ಯ ರೀತಿಯಲ್ಲಿ ತಿದ್ದುಪಡಿ ಮಾಡಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

ಅರ್ಜಿದಾರ ಶಾಂತ್ ಎ.ತಿಮ್ಮಯ್ಯ ಅವರ ನೇಮಕಾತಿಯನ್ನು ನ್ಯಾಯಪೀಠ ಅಮಾನ್ಯಗೊಳಿಸಿಲ್ಲ. 'ಅವರ ಸೇವಾವಧಿ 2024ರ ನವೆಂಬರ್ 4ರ ತನಕ ಇರಲಿದೆ' ಎಂದು ತಿಳಿಸಿ ಅರ್ಜಿ ವಿಲೇವಾರಿ ಮಾಡಿದೆ. ವಿಸ್ತೃತ ಆದೇಶ ಇನ್ನಷ್ಟೇ ಲಭ್ಯವಾಗಬೇಕಿದೆ.



ಸಿಬಿಐ ತನಿಖೆಗೆ ಒತ್ತಾಯ

ಬೆಂಗಳೂರು: ಬಿಬಿಎಂಪಿ ಗುತ್ತಿಗೆದಾರ ಆರ್.ಅಂಬಿಕಾಪತಿ ನಿಧನಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸಬೇಕು ಎಂದು ಬಿಜೆಪಿ ಶಾಸಕರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಮತ್ತು ಮುನಿರತ್ನ ಅವರು ಒತ್ತಾಯಿಸಿದ್ದಾರೆ.

ಅಂಬಿಕಾಪತಿ ಮನೆಗೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅಶ್ವತ್ಥನಾರಾಯಣ್, ಈ ಸಾವಿನ ಹಿಂದೆ ಷಡ್ಯಂತ್ರವಿದೆ. ಅಂಬಿಕಾಪತಿಯಿಂದ ಲಾಭ ಪಡೆದಿರುವ ಅಧಿಕಾರಿಗಳು ಮತ್ತು ಕೆಲ ಸಚಿವರ ಕಿರುಕುಳದಿಂದಲೇ ಸಾವು ಸಂಭವಿಸಿರುವ ಸಾಧ್ಯತೆ ಇದೆ ಎಂದು ಹೇಳಿದರು.

ಮಾಜಿ ಸಚಿವರೂ ಆಗಿರುವ ಹಾಲಿ ಶಾಸಕರೊಬ್ಬರಿಂದ ಅಂಬಿಕಾಪತಿ ಒತ್ತಡಕ್ಕೆ ಒಳಗಾಗಿದ್ದರು ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಮಂಗಳವಾರ ಹೇಳಿಕೆ ನೀಡಿದ್ದರು.

'ಸಾವಿಗೆ ಕಾರಣವೇನು? ಯಾರ ಒತ್ತಡವಿತ್ತು ಎಂಬುದರ ಸತ್ಯ ಹೊರಗೆ ಬರಬೇಕಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಉನ್ನತ ಮಟ್ಟದ ತನಿಖೆ ಮಾಡಬೇಕು ಇಲ್ಲವೇ, ಸಿಬಿಐ ತನಿಖೆಯನ್ನಾದರೂ ನಡೆಸಬೇಕು' ಎಂದು ಶಾಸಕ ಮುನಿರತ್ನ ಒತ್ತಾಯಿಸಿದರು. ಅಂಬಿಕಾಪತಿ ಅವರ ಭಾವ ಅಖಂಡ ಶ್ರೀನಿವಾಸ್ ಮೂರ್ತಿ ಅವರ ಜತೆಗೂ ಮುನಿರತ್ನ, ಅಶ್ವತ್ಥನಾರಾಯಣ ಚರ್ಚೆ ನಡೆಸಿದರು.

ಅರ್ಜಿ ವಾಪಸ್ ಪಡೆದ ಡಿಕೆಶಿ

ಒಂದನೇ ಪುಟದಿಂದ...

ಏಕಸದಸ್ಯ ನ್ಯಾಯಪೀಠದ ಈ ಆದೇಶವನ್ನು ಪ್ರಶ್ನಿಸಿ ಶಿವಕುಮಾರ್ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಈ ಮೇಲ್ಮನವಿ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸಿಬಿಐ ತನಿಖೆಗೆ ಮಧ್ಯಂತರ ತಡೆ ನೀಡಿತ್ತು.

ಇದಕ್ಕೆ ಪ್ರತಿಯಾಗಿ ಸಿಬಿಐ; ತನಿಖೆಗೆ ನೀಡಿರುವ ತಡೆ ತೆರವುಗೊಳಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, 'ತನಿಖೆಗೆ ನೀಡಿರುವ ತಡೆ ತೆರವು ಕೋರಿ ಸಿಬಿಐ ಸಲ್ಲಿಸಿರುವ ಮಧ್ಯಂತರ ಅರ್ಜಿ ಹಾಗೂ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಮೇಲ್ಮನವಿಯನ್ನು ಎರಡು ವಾರಗಳಲ್ಲಿ ಇತ್ಯರ್ಥಪಡಿಸಿ' ಎಂದು ಹೈಕೋರ್ಟ್‌ಗೆ ನಿರ್ದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮೇಲ್ಮನವಿಯನ್ನು ಬುಧವಾರ ವಿಚಾರಣೆಗೆ ನಿಗದಿಪಡಿಸಿತ್ತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಕಪಿಲ್ ಸಿಬಲ್, ಶಿವಕುಮಾರ್ ಪರವಾಗಿ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಹಾಜರಾಗಿ, ಸಿಬಿಐ ತನಿಖೆಗೆ ನೀಡಲಾಗಿದ್ದ ಅನುಮತಿ ಹಿಂಪಡೆದ ಅಧಿಸೂಚನೆಯನ್ನು ನ್ಯಾಯಪೀಠಕ್ಕೆ ಮೆಮೊ (ಜ್ಞಾಪನಾ ಪತ್ರ) ಮೂಲಕ ಸಲ್ಲಿಸಿದರು. ಅಂತೆಯೇ, ರಿಟ್ ಅರ್ಜಿ, ಮೇಲ್ಮನವಿ ಹಿಂಪಡೆಯುವುದಾಗಿಯೂ ಶಿವಕುಮಾರ್ ಪರ ವಕೀಲರು ನ್ಯಾಯಪೀಠಕ್ಕೆ ಲಿಖಿತ ಮೆಮೊ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್, 'ಮೇಲ್ಮನವಿಯನ್ನು ಹಿಂತೆಗೆದುಕೊಳ್ಳಲು ನಮ್ಮಿಂದ ಯಾವುದೇ ವಿರೋಧವಿಲ್ಲ. ಆದರೆ, ಏಕಸದಸ್ಯ ನ್ಯಾಯಪೀಠದಲ್ಲಿದ್ದ ರಿಟ್ ಅರ್ಜಿ ಹಿಂಪಡೆಯುವ ನಿರ್ಧಾರಕ್ಕೆ ಗಂಭೀರ ಆಕ್ಷೇಪಣೆ ಇದೆ' ಎಂದರು.

'ರಾಜ್ಯ ಸರ್ಕಾರದ ಸಮ್ಮತಿಯನ್ನು ಹಿಂತೆಗೆದುಕೊಳ್ಳುವ ಆದೇಶವು ಕಾನೂನಿನ ದೃಷ್ಟಿಯಲ್ಲಿ ಸರಿಯಲ್ಲ. ಇದಕ್ಕೆ ಪೂರ್ವನಿದರ್ಶನವಾಗಿ ಸಿಕ್ಕಿಂನ ಮೊದಲ ಮುಖ್ಯಮಂತ್ರಿ ಕಾಜಿ ಲೆಂಡುಪ್ ದೋರ್ಜಿ ವರ್ಸಸ್ ಸಿಬಿಐ ನಡುವಿನ ಪ್ರಕರಣ ನಮ್ಮ ಕಣ್ಣ ಮುಂದಿದೆ. ಅಂತೆಯೇ ಕರ್ನಾಟಕ ಸರ್ಕಾರದ ಈ ನಡೆ ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಪ್ರಕಾರ ತನಿಖೆಯನ್ನು ತಾರ್ಕಿಕ ಅಂತ್ಯಕ್ಕೆ ತಲುಪಿಸಬೇಕಾಗಿದೆ' ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅರ್ಜಿದಾರರು ತಮ್ಮ ಅರ್ಜಿ ಹಿಂಪಡೆಯುವುದಾಗಿ ಹೇಳುತ್ತಿದ್ದಾರೆ. ಕಾನೂನು ಪ್ರಕಾರ ಅವರ ಈ ನಿರ್ಧಾರವನ್ನು ತಡೆಯಲು ಸಾಧ್ಯವಿಲ್ಲ. ನಾವಿಲ್ಲಿ ನಮ್ಮ ಕಣ್ಣ ಮುಂದಿರುವ ದಾಖಲೆಗಳ ಆಧಾರದಲ್ಲಿಯೇ ಎಲ್ಲವನ್ನೂ ತೀರ್ಮಾನಿಸಬೇಕು. ಆದಾಗ್ಯೂ, 'ಸಚಿವ ಸಂಪುಟದ ನಿರ್ಧಾರವನ್ನು ಯಾರಾದರೂ ಪ್ರಶ್ನೆ ಮಾಡಿದ್ದಾರೆಯೇ, ಹಾಗೊಂದು ವೇಳೆ ಯಾರಾದರೂ ಸಂಪುಟದ ನಿರ್ಧಾರವನ್ನು ಪ್ರಶ್ನೆ ಮಾಡಬೇಕೆಂದಾದರೆ ಮಾಡಲಿ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

'ಪ್ರಕರಣದಲ್ಲಿ ನನ್ನ ವಾದವನ್ನೂ ಆಲಿಸಬೇಕು' ಎಂದು ಕೋರಿ ಬಿಜೆಪಿ ಮುಖಂಡ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಪೀಠ ಮಾನ್ಯ ಮಾಡಲಿಲ್ಲ.

ಅರ್ಜಿ ನಿರಾಕರಿಸಿದ್ದ ಹೈಕೋರ್ಟ್

'ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕು' ಎಂದು ಕೋರಿ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ 2023ರ ಅಕ್ಟೋಬರ್ 19ರಂದು ವಜಾಗೊಳಿಸಿತ್ತು.

'ಸಿಬಿಐ ತನ್ನ ತನಿಖೆಯನ್ನು ಮೂರು ತಿಂಗಳ ಒಳಗಾಗಿ ಪೂರ್ಣಗೊಳಿಸಿ ವಿಚಾರಣಾ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಬೇಕು' ಎಂದು ಆದೇಶಿಸಿತ್ತು. ಈ ಆದೇಶವನ್ನು ಶಿವಕುಮಾರ್ ಪ್ರಶ್ನಿಸಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂಬುದು ಗಮನಾರ್ಹ.



ಪೂಜಾ 'ಮಂತ್ರ ಮಾಂಗಲ್ಯ'

'ಮುಂಗಾರು ಮಳೆ' ಖ್ಯಾತಿಯ ನಟಿ ಪೂಜಾ ಗಾಂಧಿ ಹಾಗೂ ಉದ್ಯಮಿ ವಿಜಯ್ ಘೋರ್ಪಡೆ ಅವರು ಬೆಂಗಳೂರಿನಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ 'ಮಂತ್ರ ಮಾಂಗಲ್ಯ'ದ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟರು

ಬಾಲೆಖಾನ್ ಪ್ರಶಸ್ತಿಗೆ ಆಯ್ಕೆ



ಬಿ.ಎಸ್.ಮಠ



ಅಕ್ಕಮಹಾದೇವಿ



ಓಂಕಾರ ಗುಲ್ವಾಡಿ

ಧಾರವಾಡ: ಬೆಂಗಳೂರಿನ ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಸ್ಮಾರಕ ಪ್ರತಿಷ್ಠಾನ ಟ್ರಸ್ಟ್ ಮತ್ತು ಇನ್ಫೊಸಿಸ್ ಸಹಯೋಗದಲ್ಲಿ ನೀಡುವ ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಪ್ರಶಸ್ತಿಗೆ ಧಾರವಾಡದ ಪಿಟೀಲು ವಾದಕರಾದ ಬಿ.ಎಸ್. ಮಠ್ ಮತ್ತು ಅಕ್ಕಮಹಾದೇವಿ ಹಿರೇಮಠ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹ 1 ಲಕ್ಷ ನಗದು, ಫಲಕ ಒಳಗೊಂಡಿದೆ.

ಬಾಲೆಖಾನ್ ಸ್ಮಾರಕ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಸಹ ಕಲಾವಿದರಿಗೆ ನೀಡುವ ಉಸ್ತಾದ್ ಬಾಲೆಖಾನ್ ಪ್ರಶಸ್ತಿಗೆ ಮುಂಬೈ ತಬಲಾ ವಾದಕ ಓಂಕಾರ ಗುಲ್ವಾಡಿ ಆಯ್ಕೆಯಾಗಿದ್ದಾರೆ. ಈ ಪುರಸ್ಕಾರ ₹ 25 ಸಾವಿರ ನಗದು, ಫಲಕ ಒಳಗೊಂಡಿದೆ. 'ಧಾರವಾಡದಲ್ಲಿ ಡಿಸೆಂಬರ್ 2ರಂದು ಆಲೂರು ವೆಂಕಟ ರಾವ ಭವನದಲ್ಲಿ ನಡೆಯುವ ಸ್ಮರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಸಿ.ಎಂಗೆ ತ್ರಿಲೋಕ್ ಚಂದ್ರ ಕಾರ್ಯದರ್ಶಿ

ಬೆಂಗಳೂರು: ಬಿಬಿಎಂಪಿ ವಿಶೇಷ ಆಯುಕ್ತರಾಗಿದ್ದ ತ್ರಿಲೋಕ್ ಚಂದ್ರ ಕೆ.ವಿ ಅವರನ್ನು ಮುಖ್ಯಮಂತ್ರಿಯವರ ಕಾರ್ಯದರ್ಶಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಮುಖ್ಯಮಂತ್ರಿಗೆ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ ಎಸ್.ಜಿಯಾವುಲ್ಲಾ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.

ಕುಕ್ಕರ್ ಬಾಂಬ್: ಐಎಸ್ ಕೃತ್ಯ

ಕದ್ರಿ ದೇವಾಲಯ ಸ್ಫೋಟಕ್ಕೆ ಸಂಚು: ದೋಷಾರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ನಡೆದಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದೆ.

'ಶಂಕಿತರು, ದೇಶದಲ್ಲಿ ದೊಡ್ಡಮಟ್ಟದ ವಿಧ್ವಂಸಕ ಕೃತ್ಯ ಎಸಗಲು ತಯಾರಿ ನಡೆಸಿದ್ದರು. ಅದರ ಭಾಗವಾಗಿ ಮಂಗಳೂರಿನ ಕದ್ರಿಯ ಮಂಜುನಾಥ ದೇವಸ್ಥಾನದಲ್ಲಿ ಸುಧಾರಿತ ಸ್ಫೋಟ ಸಾಮಗ್ರಿ ಇಟ್ಟು ಹಿಂದೂ ಸಮಾಜದಲ್ಲಿ ಭಯದ ವಾತಾವರಣ ನಿರ್ಮಿಸುವುದು ಶಂಕಿತರ ಉದ್ದೇಶವಾಗಿತ್ತು' ಎಂದು ದೋಷಾರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಕಳೆದ ವರ್ಷದ ನವೆಂಬರ್‌ನಲ್ಲಿ ಈ ಸ್ಫೋಟ ಪ್ರಕರಣ ನಡೆದಿತ್ತು. ಪ್ರಕರಣ ಸಂಬಂಧ ಐಪಿಸಿ 120ಬಿ, 307 ಹಾಗೂ ಸ್ಫೋಟಕ ವಸ್ತುಗಳ ಕಾಯ್ದೆ–1908 ಅಡಿ ಪ್ರಕರಣ ದಾಖಲಿಸಿಕೊಂಡಿದ್ದ ಎನ್‌ಐಎ ತನಿಖೆ ನಡೆಸಿತ್ತು.

'ಈ ಸ್ಫೋಟ ಪ್ರಕರಣವು ಇಸ್ಲಾಮಿಕ್ ಸ್ಟೇಟ್ (ಐಎಸ್) ಪ್ರಾಯೋಜಿತ ಕೃತ್ಯವಾಗಿದೆ. 2022ರ ನ.19ರಂದು ಶಂಕಿತ ಮಹಮ್ಮದ್ ಶಾರಿಕ್, ಕುಕ್ಕರ್‌ನಲ್ಲಿ ಸುಧಾರಿತ ಸ್ಫೋಟಕ ಸಾಧನಗಳನ್ನು ಕೊಂಡೊಯ್ಯುವ ಸಂದರ್ಭದಲ್ಲಿ ಸ್ಫೋಟ ಸಂಭವಿಸಿತ್ತು. ಐಇಡಿ ತೀವ್ರತೆ ಕಡಿಮೆಯಿತ್ತು. ಮಹಮ್ಮದ್ ಶಾರಿಕ್ ಹಾಗೂ ಸೈಯದ್ ಶಾರಿಕ್ ಎಂಬುವರನ್ನು ಬಂಧಿಸಿ ತನಿಖೆ ನಡೆಸಲಾಗಿತ್ತು. ಪ್ರಕರಣದಲ್ಲಿ ಇಬ್ಬರ ಪಾತ್ರದ ಬಗ್ಗೆಯೂ ದೋಷಾರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಮಹಮ್ಮದ್ ಶಾರಿಕ್ ಹಾಗೂ ಸೈಯದ್ ಯಾಸಿನ್, ವಿದೇಶದಲ್ಲಿ ನೆಲೆಸಿದ್ದವರ ಪಿತೂರಿಯಂತೆ ಕೃತ್ಯ ಎಸಗಲು ಸಂಚು ರೂಪಿಸಿದ್ದರು. ಷರಿಯತ್ ಕಾನೂನು ಪ್ರಚಾರದ ಭಾಗವಾಗಿ ಭಯೋತ್ಪಾದನಾ ಕೃತ್ಯ ಎಸಗಲು ಮುಂದಾಗಿದ್ದರು. ಶಾರಿಕ್, ಕುಕ್ಕರ್ ಬಾಂಬ್ ತಯಾರಿಸಿದ್ದರೆ; ಅಗತ್ಯವಿರುವ ಸ್ಫೋಟಕ ಸಾಮಗ್ರಿಗಳನ್ನು ಸೈಯದ್ ಪೂರೈಸಿದ್ದ ಎಂದು ತನಿಖೆಯಿಂದ ಗೊತ್ತಾಗಿದೆ' ಎಂದು ಎನ್‌ಐಎ ಮೂಲಗಳು ತಿಳಿಸಿವೆ.

'ಸ್ಫೋಟ ಪ್ರಕರಣಕ್ಕೂ ಮುನ್ನ ಇಸ್ಲಾಮಿಕ್ ಸ್ಟೇಟ್ ಮುಖಂಡರ ಸೂಚನೆಯಂತೆ ಮಂಗಳೂರಿನಲ್ಲಿ ಉಗ್ರರ ಕೃತ್ಯಕ್ಕೆ ಸಂಬಂಧಿಸಿದಂತೆ ಗೋಡೆ ಬರಹ ಬರೆಯಲಾಗಿತ್ತು. ಅದರಲ್ಲೂ ಇಬ್ಬರು ಪಾತ್ರವಿರುವುದು ಸಾಬೀತಾಗಿದೆ. ಶಿವಮೊಗ್ಗದಲ್ಲಿ ಸ್ಫೋಟಿಸುವ ಪ್ರಯೋಗ ನಡೆದಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಮಂದಿಯನ್ನು ಬಂಧಿಸಿ ಕಳೆದ ಜುಲೈನಲ್ಲಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ' ಎಂದು ಹೇಳಿವೆ.

ಗಾಯಗೊಂಡಿದ್ದ ಇಬ್ಬರು

ಕುಕ್ಕರ್ ಬಾಂಬ್ ಹಿಡಿದು ಆಟೋರಿಕ್ಷಾದಲ್ಲಿ ತರುವ ವೇಳೆ ಸ್ಫೋಟಗೊಂಡಿತ್ತು. ಶಾರಿಕ್ ಹಾಗೂ ಆಟೋ ಚಾಲಕ ಗಾಯಗೊಂಡಿದ್ದರು. ಆರಂಭದಲ್ಲಿ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿದೆ ಎಂದು ಭಾವಿಸಲಾಗಿತ್ತು. ಪರಿಶೀಲನೆ ವೇಳೆ ಸ್ಫೋಟಕ ಸಾಮಗ್ರಿಗಳು ಪತ್ತೆಯಾಗಿದ್ದವು. ನಂತರ, ಎನ್‌ಐಎ ತನಿಖೆ ಕೈಗೆತ್ತಿಗೊಂಡಿತ್ತು.

ದುರಸ್ತಿಯಾದ ಅಳವಂಡಿ ಶಾಲೆ ಶೌಚಾಲಯ

ವರದಿ ಪರಿಣಾಮ

ಅಳವಂಡಿ (ಕೊಪ್ಪಳ ಜಿಲ್ಲೆ): ಜಿಲ್ಲೆಯ ಅಳವಂಡಿಯ ಮುದುಕನಗೌಡ ಗಾಳಿ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಶೌಚಾಲಯ ಇಲ್ಲದೇ ವಿದ್ಯಾರ್ಥಿನಿಯರು ಹಾಗೂ ಶಿಕ್ಷಕರು ಶೌಚಕ್ಕೆ ಬಯಲನ್ನೇ ಆಶ್ರಯಿಸುತ್ತಿರುವುದಕ್ಕೆ ಕೊನೆಗೂ ಮುಕ್ತಿ ಸಿಕ್ಕಿದೆ.

ಶಾಲೆಯ ಶೌಚಾಲಯ ಸಮಸ್ಯೆ ಕುರಿತು 'ಸರ್ಕಾರಿ ಪ್ರೌಢಶಾಲೆಯಲ್ಲಿ ಶೌಚಕ್ಕೆ ಬಯಲೇ ಗತಿ' ತಲೆಬರಹದಲ್ಲಿ ನ.23ರಂದು 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟಗೊಂಡಿತ್ತು. ವರದಿ ಪ್ರಕಟವಾದ ಬಳಿಕ ಪ್ರಧಾನ ಜಿಲ್ಲಾ ಮತ್ತು ಸಷೆನ್ಸ್ ನ್ಯಾಯಾಧೀಶರಾದ ಚಂದ್ರಶೇಖರ ಸಿ. ಅವರ ನಿರ್ದಶನದ ಮೇರೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವೇಂದ್ರ ಪಂಡಿತ್ ಅವರು ಅಂದೇ ಶಾಲೆಗೆ ಭೇಟಿ ನೀಡಿ ಶೌಚಾಲಯ ಅವ್ಯವಸ್ಥೆ ಪರಿಶೀಲಿಸಿ, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು.

ನ್ಯಾಯಾಧೀಶರ ಸೂಚನೆ ಬಳಿಕ ಎಚ್ಚೆತ್ತುಕೊಂಡ ಗ್ರಾಮ ಪಂಚಾಯಿತಿ ವಾರದಲ್ಲಿ ಪ್ರೌಢಶಾಲೆಯಲ್ಲಿ ಶೌಚಾಲಯ ನಿರ್ಮಿಸಿ ಕಾಮಾಗಾರಿ ಪೂರ್ಣಗೊಳಿಸಿದೆ. ಶೌಚಾಲಯಕ್ಕೆ ನೀರು ಪೂರೈಕೆಗೆ ಬೋರ್‌ವೆಲ್‌ಗೆ ಮೋಟರ್ ಅಳವಡಿಸಿ ಪೈಪ್‌ಲೈನ್ ಕಾಮಗಾರಿ ಮಾಡಲಾಗಿದೆ. 'ಶೌಚಾಲಯ ಇಲ್ಲದೇ ನಿತ್ಯ ಪರದಾಡುವಂತಾಗಿತ್ತು. ಪ್ರಜಾವಾಣಿ ವರದಿ ಪ್ರಕಟಿಸಿದ ಬಳಿಕ ನಮ್ಮ ಶಾಲೆಯಲ್ಲಿ ಶೌಚಾಲಯ ನಿರ್ಮಾಣವಾಗಿದೆ. ಪತ್ರಿಕೆಗೆ ಧನ್ಯವಾದಗಳು' ಎಂದು ವಿದ್ಯಾರ್ಥಿನಿಯರು ಹರ್ಷ ವ್ಯಕ್ತಪಡಿಸಿದರು.

ಎತ್ತಿನಹೊಳೆ: ಹಲವೆಡೆ ಸೋರಿಕೆ, ರಸ್ತೆ, ಆಸ್ತಿಗೆ ಹಾನಿ

ಪ್ರಾಯೋಗಿಕವಾಗಿ ಹರಿದ ನೀರು

● ಜಾನೇಕೆರೆ ಆರ್. ಪರಮೇಶ್



ಸಕಲೇಶಪುರ ತಾಲ್ಲೂಕು ಕುಂಬರಡಿ ಗ್ರಾಮದ ಎತ್ತಿನಹಳ್ಳ ಬಳಿ ಪೈಪ್‌ಲೈನ್ ವಾಲ್‌ನಲ್ಲಿ ಸೋರಿಕೆ ಆಗುತ್ತಿರುವುದು.

ಸಕಲೇಶಪುರ: ಎತ್ತಿನಹೊಳೆ ಯೋಜನೆಯ ಒಂದು ಚೆಕ್‌ಡ್ಯಾಂನಿಂದ ಪ್ರಾಯೋಗಿಕವಾಗಿ ನೀರು ಹರಿಸಲಾಗುತ್ತಿದೆ. ಈ ವೇಳೆ ಹಲವೆಡೆ ಭಾರೀ ಪ್ರಮಾಣದ ಸೋರಿಕೆ ಆಗಿದ್ದು, ರಸ್ತೆ ಹಾಗೂ ಇನ್ನಿತರ ಪ್ರದೇಶಗಳಿಗೆ ಹಾನಿಯಾಗಿದೆ.

ಸುಮಾರು 6 ಕಿ.ಮೀ ಉದ್ದದ ಪೈಪ್‌ಲೈನ್ ಮೂಲಕ ಕಾಡಮನೆ ಚೆಕ್‌ಡ್ಯಾಂ 5 ರ ಒಂದು ಪಂಪ್‌ನಿಂದ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಲ್ಲಾಗದ್ದೆ, ದೇಖಲ, ಕುಂಬರಡಿ ಸೇರಿದಂತೆ ಹಲವೆಡೆ ಪೈಪ್‌ಗಳಿಂದ ನೀರು ಸೋರಿಕೆ ಆಗಿದೆ.

ಪೈಪ್ ಸೋರಿಕೆಯ ರಭಸಕ್ಕೆ ದೇಖಲ ಗ್ರಾಮದಲ್ಲಿ ಮುಖ್ಯ ರಸ್ತೆಯೊಂದು ಕುಸಿದಿದೆ. ಕಾಡಮನೆಯಿಂದ ದೊಡ್ಡನಾಗರ ನೀರು ಶೇಖರಣಾ ಕೇಂದ್ರದವರೆಗೆ, ಕಾಡಮನೆ, ಮಲ್ಲಾಗದ್ದೆ, ನಡಹಳ್ಳಿ, ದೇಖಲ, ಕುಂಬರಡಿ, ಹೆಬ್ಬಸಾಲೆ ಮುಖ್ಯ ರಸ್ತೆಯ ಬದಿಯಲ್ಲಿಯೇ ಪೈಪ್‌ಗಳನ್ನು ಜೋಡಿಸಲಾಗಿದೆ.

ಒಟ್ಟು 8 ಪಂಪ್‌ಗಳಿಂದ, 5 ಪೈಪ್‌ಗಳಲ್ಲಿ ದೊಡ್ಡನಾಗರ ಶೇಖರಣಾ ಕೇಂದ್ರಕ್ಕೆ ನೀರು ಹರಿಸಲಾಗುತ್ತದೆ. ಕಾಡಮನೆ ವೈರ್ 5 ರಿಂದ ಡಿಸಿ 2 ರವರೆಗೆ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದೆ. ನೀರು ಯಾವ ರೀತಿ ಹರಿಯುತ್ತದೆ ಎಂಬುದನ್ನು ಪರೀಕ್ಷೆ ಮಾಡಲು, ಈ ಮಾರ್ಗದ 6 ಕಿ.ಮೀ. ಪ್ರದೇಶದಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.

'ಭೂಮಿಯೊಳಗೆ ಪೈಪ್‌ಗಳನ್ನು ಜೋಡಣೆ ಮಾಡಿ 5–6 ವರ್ಷಗಳಾಗಿವೆ. ಹಾಗಾಗಿ, ಕೆಲವೆಡೆ ವೆಲ್ಡಿಂಗ್ ಬಿಟ್ಟು ಹೋಗಿರುವುದು, ಮತ್ತೆ ಕೆಲವು ತಾಂತ್ರಿಕ ಕಾರಣಗಳಿಂದ ಕೆಲವೆಡೆ ನೀರು ಸೋರಿಕೆ ಆಗಿದೆ. ನೀರು ಹರಿಸಿ ಪರೀಕ್ಷೆ ಮಾಡುವುದರಿಂದ ಇಂತಹ ಸೋರಿಕೆ, ನೀರು ಹರಿವಿನ ಒತ್ತಡ ಗೊತ್ತಾಗುತ್ತದೆ' ಎಂದು ವಿಶ್ವೇಶ್ವರಯ್ಯ ಜಲ ನಿಗಮದ ಕಾರ್ಯಪಾಲಕ ಎಂಜಿನಿಯರ್ ವೆಂಕಟೇಶ್ ತಿಳಿಸಿದ್ದಾರೆ.

'ನೀರು ಹರಿಸುವುದನ್ನು ತಕ್ಷಣವೇ ನಿಲ್ಲಿಸಲಾಗಿದೆ. ದುರಸ್ತಿ ಕಾಮಗಾರಿಗಳನ್ನು ತ್ವರಿತವಾಗಿ ಮಾಡಲಾಗುತ್ತಿದೆ. ರಸ್ತೆ ಹಾಗೂ ಇನ್ನಿತರ ಯಾವುದೇ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಪಾಸ್ತಿ ಹಾನಿ ಆಗಿದ್ದರೆ ದುರಸ್ತಿ ಮಾಡಲಾಗುವುದು. ಈ ಬಗ್ಗೆ ಸುತ್ತಲಿನ ಗ್ರಾಮಸ್ಥರು ಆತಂಕ ಪಡುವುದು ಬೇಡ. ಯಾವುದೇ ಸಮಸ್ಯೆಗಳಿದ್ದರೂ ಇಲಾಖೆ ತಕ್ಷಣ ಸ್ಪಂದಿಸುತ್ತದೆ' ಎಂದು ಭರವಸೆ ನೀಡಿದ್ದಾರೆ.


ಪ್ರತಿಭಟನೆ

'ಕಾಡಮನೆ ಚೆಕ್ ಡ್ಯಾಂನಿಂದ ಪ್ರಾಯೋಗಿಕವಾಗಿ 6 ಕಿ.ಮೀ ಹರಿಸಿದ ನೀರು ಹತ್ತಾರು ಕಡೆ ಸೋರಿಕೆಯಾಗಿದೆ. ರಸ್ತೆ, ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗೆ ಹಾನಿ ಉಂಟಾಗಿದೆ. ಯೋಜನೆ ನಮಗೆ ಶಾಪವಾಗಿದೆ' ಎಂದು ಆರೋಪಿಸಿ ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳ ನಿವಾಸಿಗಳು ಪಂಚಾಯಿತಿ ಕೇಂದ್ರದಲ್ಲಿ ಬುಧವಾರ ಯೋಜನೆ ಕಾಮಗಾರಿ ತಡೆದು ಪ್ರತಿಭಟಿಸಿದರು.

ಡಿಸೆಂಬರ್ 3ರಂದು ಲೋಕಾರ್ಪಣೆ: ಸಿ.ಎನ್. ರಾಮಚಂದ್ರನ್ ಮಾಹಿತಿ

ಇಂಗ್ಲಿಷ್‌ನಲ್ಲಿ 'ಕುಮಾರವ್ಯಾಸ ಭಾರತ'

ಪ್ರಜಾವಾಣಿ ವಾರ್ತೆ



ಸಿ.ಎನ್. ರಾಮಚಂದ್ರನ್

ಬೆಂಗಳೂರು: 'ಕುಮಾರವ್ಯಾಸ ಭಾರತ' ಕೃತಿಯ ಇಂಗ್ಲಿಷ್ ಅನುವಾದದ ಪ್ರಥಮ ಸಂಪುಟವು ಡಿಸೆಂಬರ್ 3ರಂದು ಮಧ್ಯಾಹ್ನ 1ಗಂಟೆಗೆ ನಗರದ ಹೋಟೆಲ್ ಲಲಿತ್ ಅಶೋಕ್‌ನಲ್ಲಿ ನಡೆಯಲಿರುವ 'ಬೆಂಗಳೂರು ಸಾಹಿತ್ಯೋತ್ಸವ'ದಲ್ಲಿ ಲೋಕಾರ್ಪಣೆಯಾಗಲಿದೆ.

'ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರ ಪುತ್ರ ರೋಹನ್ ಮೂರ್ತಿ ಅವರು ಹಾರ್ವರ್ಡ್ ವಿ.ವಿಯಲ್ಲಿ ಟ್ರಸ್ಟ್ ಸ್ಥಾಪಿಸಿದ್ದಾರೆ. ಅದರ ಮೂಲಕ ಪ್ರಾಚೀನ ಭಾರತೀಯ ಸಾಹಿತ್ಯ ಕೃತಿಗಳ ಇಂಗ್ಲಿಷ್ ಅನುವಾದದ ಪ್ರಕಟಣೆಗೆ ಅನುವು ಮಾಡಿಕೊಟ್ಟಿದ್ದಾರೆ (ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ). ಇದರ ಭಾಗವಾಗಿ ಈ ಕೃತಿ ಹೊರಬರುತ್ತಿದೆ' ಎಂದು ಕೃತಿಯ ಅನುವಾದಕರಲ್ಲಿ ಒಬ್ಬರಾದ ವಿಮರ್ಶಕ ಸಿ.ಎನ್. ರಾಮಚಂದ್ರನ್ ಅವರು, 'ಪ್ರಜಾವಾಣಿ'ಗೆ ತಿಳಿಸಿದರು.

ನ್ಯೂಯಾರ್ಕ್‌ನ ಸ್ಟೋನಿಬ್ರೂಕ್ ವಿ.ವಿಯಲ್ಲಿ ಇರುವ ಭಾರತೀಯ ಅಧ್ಯಯನ ಕೇಂದ್ರದ ಮುಖ್ಯಸ್ಥ ಎಸ್.ಎನ್. ಶ್ರೀಧರ್ ಅವರು, ಆ ಸಂಸ್ಥೆಯ ನಿರ್ದೇಶಕರಾದ ಶೆಲ್ಡನ್ ಪೋಲಕ್ ಅವರನ್ನು ಸಂಪರ್ಕಿಸಿ ಅವರಿಂದ 'ಕುಮಾರವ್ಯಾಸ ಭಾರತ'ದ ಅನುವಾದಕ್ಕೆ ಒಪ್ಪಿಗೆ ಪಡೆದಿದ್ದಾರೆ ಎಂದು ಹೇಳಿದರು.

ತಾವಷ್ಟೆ ಅಲ್ಲದೆ ಎಚ್. ಎಸ್. ಶಿವಪ್ರಕಾಶ್, ನಾರಾಯಣ ಹೆಗ್ಡೆ, ಎಚ್.ಎಸ್. ರಾಘವೇಂದ್ರ ರಾವ್ ಮತ್ತು ಶ್ರೀಧರ್ ಈ ಅನುವಾದ ಯೋಜನೆಯ ಸಾಧಕ–ಬಾಧಕಗಳನ್ನು ಚರ್ಚಿಸಿದ್ದನ್ನು ಅವರು ಸ್ಮರಿಸಿದರು.

ಪ್ರತಿಯೊಬ್ಬರೂ 'ಆದಿಪಂಚಕ'ದಿಂದ ಒಂದು ಪರ್ವ ಮತ್ತು 'ಯುದ್ಧಪಂಚಕ'ದಿಂದ ಒಂದು ಪರ್ವ ಹೀಗೆ ಅನುವಾದ ಮಾಡಬೇಕು. ಶ್ರೀಧರ್ ಮುಖ್ಯ ಸಂಪಾದಕರಾಗಬೇಕೆಂದು ತೀರ್ಮಾನಿಸಲಾಗಿತ್ತು. 'ಕುಮಾರವ್ಯಾಸ ಭಾರತ' ಮಹಾಕಾವ್ಯದಲ್ಲಿ 8,000ಕ್ಕೂ ಹೆಚ್ಚು ಷಟ್ಪದಿಗಳಿವೆ. ಇಷ್ಟನ್ನೂ ಅನುವಾದಿಸುವುದು ಅಸಾಧ್ಯ. ಹೀಗಾಗಿ ಕೃತಿಯ ಮೂರನೆಯ ಒಂದು ಭಾಗದಷ್ಟು, ಅಂದರೆ ಸುಮಾರು 3,000 ಸಾವಿರ ಷಟ್ಪದಿಗಳನ್ನು ಅನುವಾದಿಸಬೇಕು. ಹಾಗಾಗಿ, ಪ್ರತಿಯೊಬ್ಬರೂ 500–600 ಷಟ್ಪದಿಗಳನ್ನು ಅನುವಾದಿಸಬೇಕೆಂದು ನಿರ್ಣಯಿಸಲಾಗಿತ್ತು ಎಂಬ ಮಾಹಿತಿಯನ್ನು ಬಿಚ್ಚಿಟ್ಟರು.

ಈ ಯೋಜನೆಯ ಮೊದಲ ಸಂಪುಟದಲ್ಲಿ 'ಆದಿಪರ್ವ' (ಅನು: ಸಿ.ಎನ್. ರಾಮಚಂದ್ರನ್) ಮತ್ತು 'ಸಭಾಪರ್ವ'ದ (ಅನು: ನಾರಾಯಣ ಹೆಗ್ಡೆ) ಅನುವಾದವಿದೆ. ಕಾರ್ಯಕ್ರಮದಲ್ಲಿ ಮೂಲ ಕೃತಿಯ ಕೆಲವು ಭಾಗಗಳ ಗಮಕ–ವ್ಯಾಖ್ಯಾನಗಳೂ ನಡೆಯಲಿವೆ ಎಂದರು.

ಗಮಕಿ ಎಂ.ಆರ್. ಸತ್ಯನಾರಾಯಣ ಗಮಕ ವಾಚನ ಮಾಡಲಿದ್ದಾರೆ. ಇಂಗ್ಲಿಷ್‌ನಲ್ಲಿ ಎಸ್.ಎನ್. ಶ್ರೀಧರ್ ವ್ಯಾಖ್ಯಾನ ಮಾಡಲಿದ್ದಾರೆ. ಈ ಸಂಪುಟವು ಅಂದೇ ಮಾರಾಟಕ್ಕೂ ಲಭ್ಯವಾಗಲಿದೆ. ಅಮೆಜಾನ್ ಆನ್‌ಲೈನ್ ವೇದಿಕೆಯಲ್ಲೂ ಕೃತಿ ದೊರೆಯಲಿದೆ ಎಂದು ವಿವರಿಸಿದರು.

ಮಂಡಕ್ಕಿ ತಿಂದು ಬದುಕಿದ ಕಾರ್ಮಿಕರು


ರಾಂಚಿ ಜಿಲ್ಲೆಯ ಖಿರಬೇಡಾ ಗ್ರಾಮದಲ್ಲಿ ಸಿಹಿ ಹಂಚಿ ಸಂಭ್ರಮಿಸಿದ ರಾಜೇಂದ್ರ ಬೆದಿಯಾ ಅವರ ಕುಟುಂಬ ಸದಸ್ಯರು ಪಿಟಿಐ ಚಿತ್ರ

ರಾಂಚಿ (ಪಿಟಿಐ): ಸಿಲ್ಕ್ಯಾರಾ-ಬಡಕೋಟ್ ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರು ಜೀವ ಉಳಿಸಿಕೊಳ್ಳಲು ಮಂಡಕ್ಕಿ ತಿನ್ನುತ್ತಿದ್ದರು, ಸುರಂಗದಲ್ಲಿನ ಕಲ್ಲು ಸಂದಿಗಳಿಂದ ಜಿನುಗುತ್ತಿದ್ದ ನೀರು ಕುಡಿಯುತ್ತಿದ್ದರು.

ಸುರಂಗದಲ್ಲಿ ಸಿಲುಕಿದ್ದವರಲ್ಲಿ ಒಬ್ಬರಾದ ಜಾರ್ಖಂಡ್‌ನ ಅನಿಲ್ ಬೆದಿಯಾ ಅವರು ಸುರಂಗವು ಕುಸಿದಾಗ ಸಾವಿನ ಸನಿಹ ಹೋಗಿಬಂದಿದ್ದರು. 'ಭಾರಿ ಸದ್ದು ಕೇಳಿಸಿತು... ನಾವೆಲ್ಲ ಸುರಂಗದಲ್ಲಿ ಸಮಾಧಿಯಾಗುತ್ತೇವೆ ಎಂದು ಭಾವಿಸಿದ್ದೆವು. ಮೊದಲ ಎರಡು ದಿನ ನಾವು ಯಾವ ಭರವಸೆಯನ್ನೂ ಹೊಂದಿರಲಿಲ್ಲ' ಎಂದು ಬೆದಿಯಾ ಅವರು ದೂರವಾಣಿ ಮೂಲಕ ತಿಳಿಸಿದರು.

'ಅದು ದುಃಸ್ವಪ್ನದಂತೆ ಇತ್ತು... ಬಾಯಾರಿಕೆ ಆದಾಗ ಸುರಂಗದಲ್ಲಿ ಜಿನುಗುತ್ತಿದ್ದ ನೀರು ಕುಡಿಯುತ್ತಿದ್ದೆವು' ಎಂದು ಹೇಳಿದರು. ಅವರು ಈಗ ಆಸ್ಪತ್ರೆಯಲ್ಲಿ ದಾಖಲಾಗಿ, ಚೇತರಿಸಿ ಕೊಳ್ಳುತ್ತಿದ್ದಾರೆ. ಬೆದಿಯಾ ಅವರು ರಾಂಚಿ ಸಮೀಪದ ಹಳ್ಳಿಯವರು. ಇಲ್ಲಿಂದ 13 ಮಂದಿ ಕಾರ್ಮಿಕರು ಉತ್ತರಕಾಶಿಗೆ ಕೆಲಸಕ್ಕಾಗಿ ತೆರಳಿದ್ದರು. ಆದರೆ ತಮಗೆ ಅಲ್ಲಿ ಕಾದಿರುವುದು ಏನು ಎಂಬುದರ ಸುಳಿವು ಅವರಲ್ಲಿ ಕಿಂಚಿತ್ತೂ ಇರಲಿಲ್ಲ.

ಸುರಂಗ ಕುಸಿದಾಗ ಆ 13 ಮಂದಿಯ ಪೈಕಿ ಮೂವರು ಒಳಗೆ ಸಿಲುಕಿಕೊಂಡರು. 41 ಮಂದಿ ಕಾರ್ಮಿಕರ ಪೈಕಿ 15 ಮಂದಿ ಜಾರ್ಖಂಡ್ ರಾಜ್ಯದ ರಾಂಚಿ, ಗಿರಿಡೀಹ್, ಖೂಂಟಿ ಮತ್ತು ಪಶ್ಚಿಮ ಸಿಂಹಭೂಮ್‌ನವರು. ಇವರು ಸುರಕ್ಷಿತವಾಗಿ ಬಂದ ಸುದ್ದಿ ಕೇಳಿದ ನಂತರ ಇಲ್ಲಿನ ಜನ ಸಂಭ್ರಮ ಆಚರಿಸಿದರು.

'ಸುರಂಗ ಕುಸಿದ ಸರಿಸುಮಾರು 70 ಗಂಟೆಗಳ ನಂತರ ಅಧಿಕಾರಿಗಳು ನಮ್ಮ ಜೊತೆ ಸಂಪರ್ಕ ಸಾಧಿಸಿದಾಗ ನಮ್ಮಲ್ಲಿ ಮೊದಲ ಬಾರಿಗೆ ಭರವಸೆ ಚಿಗುರಿತು' ಎಂದು ಬೆದಿಯಾ ನೆನಪಿಸಿಕೊಂಡರು. 'ಸುರಂಗದ ಒಳಗೆ ನಮ್ಮನ್ನು ನಾವು ಸಂತೈಸಿಕೊಳ್ಳುವುದರ ಹೊರತು ಬೇರೆ ಆಯ್ಕೆಗಳೇ ಇರಲಿಲ್ಲ. ಹೊರಗಿನ ಜನ ನಮ್ಮೊಂದಿಗೆ ಸಂಪರ್ಕ ಸಾಧಿಸಿದಾಗ, ನಾವು ಬದುಕಿ ಬರಬಹುದು ಎಂಬ ಬಲವಾದ ಭರವಸೆಯೊಂದು ಮೂಡಿತು' ಎಂದರು.

ಮೊದಲ 10 ದಿನಗಳನ್ನು ತೀವ್ರ ಆತಂಕದಲ್ಲಿ ಕಳೆದೆವು. ನಂತರ ಬಾಳೆಹಣ್ಣು, ಸೇಬು, ಕಿತ್ತಲೆ ಹಣ್ಣು, ಅನ್ನ, ದಾಲ್ ಮತ್ತು ಚಪಾತಿ ಇರುತ್ತಿದ್ದ ಊಟ, ಕುಡಿಯುವ ನೀರು ನಿರಂತರವಾಗಿ ಸಿಗಲು ಆರಂಭವಾಯಿತು ಎಂದು ವಿವರಿಸಿದರು. 'ನಾವು ಎಲ್ಲರೂ ಒಂದಾಗಿ ಪ್ರಾರ್ಥಿಸುತ್ತಿದ್ದೆವು... ದೇವರು ಕೊನೆಗೂ ನಮ್ಮ ಪ್ರಾರ್ಥನೆಗೆ ಕಿವಿಗೊಟ್ಟ' ಎಂದು ಅವರು ಭಾವುಕರಾಗಿ ಹೇಳಿದರು.

ಬೆದಿಯಾ ಅವರ ತಾಯಿ ಆತಂಕಗೊಂಡಿದ್ದರು. ಎರಡು ವಾರಗಳಿಂದ ಅವರು ಅಡುಗೆ ಮಾಡಿರಲಿಲ್ಲ. ನೆರೆಹೊರೆಯ ಮಂದಿ ನೀಡಿದ ಆಹಾರ ಸೇವಿಸುತ್ತ ಕಾಲ ತಳ್ಳುತ್ತಿದ್ದರು ಎಂದು ಗ್ರಾಮಸ್ಥರೊಬ್ಬರು ತಿಳಿಸಿದರು.

ಖಿರಬೇಡಾ ಗ್ರಾಮದಲ್ಲಿ, ಪಾರ್ಶ್ವವಾಯುವಿಗೆ ತುತ್ತಾಗಿರುವ ಶ್ರವಣ್ ಬೆದಿಯಾ ಅವರು ತಮ್ಮ ಮಗ ರಾಜೇಂದ್ರ ಅವರು ಸುರಕ್ಷಿತವಾಗಿ ಹೊರಬಂದ ಸುದ್ದಿ ಕೇಳಿ ಗಾಲಿಕುರ್ಚಿಯಲ್ಲೇ ಕುಳಿತು ಸಂಭ್ರಮ ಆಚರಿಸಿದರು. ಇದೇ ಗ್ರಾಮದ ಸುಖರಾಮ್ ಅವರ ತಾಯಿ ಪಾರ್ವತಿ, ತಮ್ಮ ಮಗ ಸುರಂಗದಲ್ಲಿ ಸಿಲುಕಿರುವ ಸುದ್ದಿ ಗೊತ್ತಾದ ನಂತರ ದುಃಖತಪ್ತರಾಗಿದ್ದರು. ಅವರನ್ನು ಸಂತೈಸಲು ಆಗುತ್ತಲೇ ಇರಲಿಲ್ಲ. ಆದರೆ ಮಂಗಳವಾರ ರಾತ್ರಿ ಶುಭ ಸುದ್ದಿ ಬಂದ ನಂತರದಲ್ಲಿ ಅವರ ಸಂತಸ ಹೇಳತೀರದಾಗಿತ್ತು.

ಕಾರ್ಮಿಕರ ಜೊತೆ ಪ್ರಧಾನಿ ಮೋದಿ ಮಾತುಕತೆ

'ಯೋಗ, ವಾಕಿಂಗ್ ಮಾಡಿ ಉತ್ಸಾಹ ಉಳಿಸಿಕೊಂಡೆವು'


ಪ್ರಧಾನಿ ಮೋದಿ ಅವರೊಂದಿಗೆ ದೂರವಾಣಿ ಸಂವಾದದಲ್ಲಿ ಪಾಲ್ಗೊಂಡಿದ್ದ ಕಾರ್ಮಿಕರು ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಸುರಂಗದಲ್ಲಿ ಸಿಲುಕಿದ್ದ 17 ದಿನಗಳ ಅವಧಿಯಲ್ಲಿ ಕಾರ್ಮಿಕರು ಯೋಗ ಮಾಡಿ, ಬೆಳಿಗ್ಗೆ ವಾಕ್ ಮಾಡಿ ತಮ್ಮಲ್ಲಿನ ಉತ್ಸಾಹ ಬತ್ತದಂತೆ ನೋಡಿಕೊಂಡಿದ್ದರು. ಈ ವಿಚಾರವನ್ನು ಕಾರ್ಮಿಕರೊಬ್ಬರು ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಹಂಚಿಕೊಂಡಿದ್ದಾರೆ.

ಪ್ರಧಾನಿ ಮೋದಿ, ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ರಕ್ಷಣಾ ತಂಡಗಳ ಪ್ರಯತ್ನದ ಬಗ್ಗೆ ಕಾರ್ಮಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಸರ್ಕಾರವು ದೇಶದ ಹೊರಗೆ ಸಿಲುಕಿಕೊಂಡಿದ್ದವರನ್ನೂ ರಕ್ಷಿಸಿರುವಾಗ, ದೇಶದೊಳಗೇ ಇದ್ದ ನಾವು ಚಿಂತಿಸ ಬೇಕಾದ ಅಗತ್ಯವೇ ಇರಲಿಲ್ಲ' ಎಂದು ಕಾರ್ಮಿಕರು ಸಂತಸದಿಂದ ಹೇಳಿದ್ದಾರೆ.

ಕಾರ್ಮಿಕರನ್ನು ರಕ್ಷಿಸಿದ ನಂತರ ಮೋದಿ ಅವರು, ಕಾರ್ಮಿಕರ ಜೊತೆ ದೂರವಾಣಿ ಮೂಲಕ ಮಾತನಾಡಿದರು. 'ನನಗಾಗುತ್ತಿರುವ ಸಂತಸವನ್ನು ಪದಗಳಲ್ಲಿ ವಿವರಿಸಲು ಆಗುತ್ತಿಲ್ಲ. ಏನಾದರೂ ಕೆಟ್ಟದ್ದು ಸಂಭವಿಸಿದ್ದರೆ ಅದನ್ನು ನಾವು ಹೇಗೆ ಸ್ವೀಕರಿಸುತ್ತಿದ್ದೆವೋ ಗೊತ್ತಿಲ್ಲ. ದೇವರ ಕೃಪೆಯಿಂದ ನೀವೆಲ್ಲರೂ ಸುರಕ್ಷಿತವಾಗಿದ್ದೀರಿ' ಎಂದು ಪ್ರಧಾನಿಯವರು ಕಾರ್ಮಿಕರಿಗೆ ತಿಳಿಸಿದರು.

ಮೋದಿ ಕಾರ್ಮಿಕರ ಜೊತೆ ಮಾತನಾಡಿರುವ ದೃಶ್ಯಾವಳಿಯನ್ನು ಪ್ರಧಾನಿ ಕಾರ್ಯಾಲಯ ಬಿಡುಗಡೆ ಮಾಡಿದೆ. ಕಾರ್ಯಾಚರಣೆ ಬಗ್ಗೆ ಗಮನ ಇರಿಸಿದ್ದಾಗಿ, ಮುಖ್ಯಮಂತ್ರಿ ಜೊತೆ ನಿರಂತರವಾಗಿ ಸಂಪರ್ಕದಲ್ಲಿ ಇದ್ದುದಾಗಿ ಪ್ರಧಾನಿ ಹೇಳಿದ್ದಾರೆ. 'ನನ್ನ ಕಚೇರಿ ಸಿಬ್ಬಂದಿಯೂ ಅಲ್ಲಿದ್ದರು. ಆದರೆ ಮಾಹಿತಿ ಸಿಕ್ಕ ಮಾತ್ರಕ್ಕೆ ಚಿಂತೆ ಕಡಿಮೆ ಆಗುತ್ತಿರಲಿಲ್ಲ' ಎಂದು ಪ್ರಧಾನಿ ಹೇಳಿದ್ದಾರೆ.

'ಸುರಂಗದಲ್ಲಿ ಸಿಲುಕಿದ್ದರೂ ನನಗೆ ಭಯ ಆಗುತ್ತಿರಲಿಲ್ಲ' ಎಂದು ಸಬಾ ಅಹ್ಮದ್ ಎನ್ನುವವರು ಹೇಳಿದ್ದಾರೆ. 'ನಾವು ಸಹೋದರರಂತೆ ಒಟ್ಟಾಗಿ ಇದ್ದೆವು. ರಾತ್ರಿ ಊಟದ ನಂತರ ಸುರಂಗದ ಒಳಗೆ ವಾಕ್ ಮಾಡುತ್ತಿದ್ದೆವು. ಯೋಗ ಮಾಡುವಂತೆ, ವಾಕ್ ಮಾಡುವಂತೆ ನಾನು ಇತರರಿಗೆ ಹೇಳುತ್ತಿದ್ದೆ. ಉತ್ತರಾಖಂಡ ಸರ್ಕಾರ, ಮುಖ್ಯಮಂತ್ರಿ ಹಾಗೂ ವಿ.ಕೆ. ಸಿಂಗ್ ಅವರಿಗೆ ಧನ್ಯವಾದ ಅರ್ಪಿಸುತ್ತೇವೆ' ಎಂದು ಅಹ್ಮದ್ ಹೇಳಿದ್ದಾರೆ.

'ನೀವು ಪ್ರಧಾನಿಯಾಗಿರುವಾಗ, ಬೇರೆ ದೇಶಗಳಲ್ಲಿ ಸಿಲುಕೊಂಡಿದ್ದವರನ್ನೂ ರಕ್ಷಿಸಿರುವಾಗ, ನಮ್ಮದೇ ದೇಶದಲ್ಲಿ ಇರುವ ನಾವು ಭಯಪಡುವ ಅಗತ್ಯವಿರಲಿಲ್ಲ' ಎಂದು ಗಬ್ಬರ್ ಸಿಂಗ್ ನೇಗಿ ಪ್ರಧಾನಿಗೆ ಹೇಳಿದ್ದಾರೆ. ಪ್ರಧಾನಿ ಜೊತೆಗಿನ ಮಾತುಕತೆಯ ಕೊನೆಯಲ್ಲಿ ಕಾರ್ಮಿಕರು 'ಭಾರತ್ ಮಾತಾ ಕಿ ಜೈ' ಎಂದು ಘೋಷಣೆ ಕೂಗಿದರು.

ಕಾರ್ಮಿಕರ ಗ್ರಾಮಗಳಲ್ಲಿ ಮನೆ ಮಾಡಿದ ಸಂಭ್ರಮ, ಹಬ್ಬದ ವಾತಾವರಣ ಸೃಷ್ಟಿ

'ಮಾತನಾಡಿದ ಬಳಿಕವೇ ನಿರಾಳರಾಗಿದ್ದು'

ಪ್ರಜಾವಾಣಿ ವಾರ್ತೆ

ಗುವಾಹಟಿ: 'ನಮ್ಮ ತಂದೆ ಸುರಂಗದಿಂದ ಹೊರಬಂದು ಮಾತನಾಡಿದ ಬಳಿಕ ಅವರು ಮನೆಗೆ ಮರಳುತ್ತಾರೆ ಎಂಬುದು ಖಚಿತವಾಯಿತು'. ಹೀಗೆಂದು ಸಿಲ್ಕ್ಯಾರಾ-ಬಡಕೋಟ್ ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರಲ್ಲಿ ಒಬ್ಬರಾದ ರಾಮ್‌ಪ್ರಸಾದ್ ನರ್ಜಾರಿ ಅವರ ಏಕೈಕ ಮಗಳು ಬಿದಂಗ್ ನರ್ಜಾರಿ (16) ಹೇಳಿದರು.

ರಾಮ್‌ಪ್ರಸಾದ್ ಅವರು ಅಸ್ಸಾಂನ ಕೋಕ್ರಾಝಾರ್ ಜಿಲ್ಲೆಯ ರಾಮ್‌ಫಾಲ್‌ಬಿಲ್ ಗ್ರಾಮದ ನಿವಾಸಿ. ಸುರಂಗದಿಂದ ಮಂಗಳವಾರ ಹೊರಗೆ ಕರೆತಂದ ಬಳಿಕ ರಾತ್ರಿ ಸುಮಾರು 8.30ಕ್ಕೆ ಅವರು ಮಗಳ ಜೊತೆ ಮಾತನಾಡಿದರು.

'ನಮ್ಮ ತಂದೆ ಅಪಾಯದಲ್ಲಿ ಸಿಲುಕಿದ್ದಾರೆ ಎಂಬ ವಿಷಯ ತಿಳಿದಾಗಿನಿಂದ ನಾವು ಸರಿಯಾಗಿ ಊಟ, ನಿದ್ದೆ ಮಾಡಿಲ್ಲ. ನಮ್ಮ ತಾಯಿ ಹಲವು ಬಾರಿ ಮೂರ್ಛೆ ಹೋಗಿದ್ದರು' ಎಂದು ದೂರವಾಣಿ ಮೂಲಕ 'ಪ್ರಜಾವಾಣಿ'ಗೆ ಬಿದಂಗ್ ತಿಳಿಸಿದರು.

ಇದಕ್ಕೂ ಮೊದಲು ರಾಮ್‌ಪ್ರಸಾದ್ ಅವರು ತಮಿಳುನಾಡಿನಲ್ಲಿ ಉಪ್ಪಿನಕಾಯಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಈ ವರ್ಷ ಮಾರ್ಚ್‌ನಲ್ಲಿ ಮನೆಗೆ ವಾಪಸ್ಸಾಗಿದ್ದರು. ಆಗ ಉತ್ತರಾಖಂಡದಲ್ಲಿ ಉದ್ಯೋಗ ದೊರಕುವ ಕುರಿತು ನೆರೆಮನೆಯ ಸಂಜಯ್ ಬಾಸುಮತಾರಿ ಅವರಿಂದ ತಿಳಿದರು.

ಸಂಜಯ್ ಮತ್ತು ಅವರ ಅಣ್ಣ ಜ್ಯೋತಿಶ್ ಇಬ್ಬರೂ ಸುರಂಗ ಮಾರ್ಗ ನಿರ್ಮಾಣ ಯೋಜನೆಯಲ್ಲಿ ಕಾರ್ಮಿಕರಾಗಿದ್ದರು. ಸಂಜಯ್ ಅವರು ಮಾಸಿಕ ₹18 ಸಾವಿರ ಆದಾಯ ಪಡೆಯುತ್ತಿದ್ದರು. ಉತ್ತಮ ಆದಾಯ ಗಳಿಸಲು ತಮ್ಮ ತಂದೆ ಕೂಡಾ ಅಲ್ಲಿಯೇ ಉದ್ಯೋಗ ಅರಸಿ ಹೋದರು ಎಂದು ಬಿದಂಗ್ ತಿಳಿಸಿದ್ದಾರೆ.

ಸುರಂಗದ ಒಳಗೆ ಸಿಲುಕಿದ್ದ ಸಂಜಯ್ ಅವರ ಮನೆಯ ಪರಿಸ್ಥಿತಿಯೂ ರಾಮ್‌ಪ್ರಸಾದ್ ಮನೆಯ ಪರಿಸ್ಥಿತಿಗಿಂತ ಭಿನ್ನವಾಗೇನೂ ಇರಲಿಲ್ಲ. 'ಸುರಂಗದಿಂದ ಹೊರಬಂದ ಅಣ್ಣನ ಜೊತೆ ಮಾತನಾಡಿದೆವು. ಆಗ ನಮಗೆ ಜೀವ ಬಂದಂತಾಯಿತು' ಎಂದು ಸಂಜಯ್ ಸಹೋದರಿ ಪಿಂಕಿ ಹೇಳುತ್ತಾರೆ. ಅವಘಡ ಸಂಭವಿಸಿದ ವೇಳೆ ಜ್ಯೋತಿಶ್ ಅವರು ಸುರಂಗದ ಹೊರಗಿದ್ದ ಕಾರಣ ಅವರು ಪಾರಾದರು.

ರಕ್ಷಣಾ ಕಾರ್ಯ ಯಶಸ್ವಿಯಾದ ಕುರಿತ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮಸ್ಥರು ಅವರಿಬ್ಬರ ಮನೆ ಎದುರು ಸೇರಿದರು.

ಅವಘಡ ಸಂಭವಿಸಿದಾಗಿನಿಂದ ಗ್ರಾಮಸ್ಥರು ಸರಿಯಾಗಿ ಊಟ, ನಿದ್ದೆ ಮಾಡಿರಲಿಲ್ಲ. ಅವರಿಬ್ಬರ ಸುರಕ್ಷತೆಗಾಗಿ ಬಾಥೌ ದೇವಾಲಯದಲ್ಲಿ (ಬೋಡೊ ಜನಾಂಗದವರ ಪ್ರಾರ್ಥನಾ ಸ್ಥಳ) ಗ್ರಾಮಸ್ಥರೆಲ್ಲರೂ ಒಟ್ಟಾಗಿ ಪ್ರಾರ್ಥನೆ ಸಲ್ಲಿಸಿದ್ದೆವು ಎಂದು ಗ್ರಾಮದ ಮುಖ್ಯಸ್ಥರು ಹೇಳಿದ್ದಾರೆ.

ಸ್ಥಳೀಯವಾಗಿ ಉದ್ಯೋಗಾವಕಾಶಗಳ ಕೊರತೆ ಇರುವ ಕಾರಣ ಇಲ್ಲಿಯ ಜನರು ಉದ್ಯೋಗ ಅರಸಿ ಬೇರೆ ರಾಜ್ಯಗಳಿಗೆ ಹೋಗುತ್ತಾರೆ.

ಮೋತಿಪುರದಲ್ಲಿ ಮತ್ತೊಮ್ಮೆ ದೀಪಾವಳಿ

ಶರಾವಸ್ತಿ, ಉತ್ತರ ಪ್ರದೇಶ (ಪಿಟಿಐ): ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರು ಸುರಕ್ಷಿತವಾಗಿ ಹೊರಬಂದದ್ದನ್ನು ಇಲ್ಲಿಯ ಮೋತಿಪುರ ಗ್ರಾಮಸ್ಥರು ಮಂಗಳವಾರ ರಾತ್ರಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಸುರಂಗದಿಂದ ಹೊರಬಂದ 41 ಕಾರ್ಮಿಕರಲ್ಲಿ ಈ ಗ್ರಾಮದ ಆರು ಮಂದಿಯೂ ಇದ್ದದ್ದು ಈ ಸಂಭ್ರಮಕ್ಕೆ ಕಾರಣ.

ರಾಮ್ ಮಿಲನ್, ಅಂಕಿತ್, ಸತ್ಯದೇವ್, ಸಂತೋಷ್, ಜೈಪ್ರಕಾಶ್ ಮತ್ತು ರಾಮ್ ಸುಂದರ್ ಅವರು ಸುರಕ್ಷಿತವಾಗಿ ಮರಳುವುದನ್ನು ಗ್ರಾಮಸ್ಥರು ಕಾತುರದಿಂದ ಎದುರು ನೋಡುತ್ತಿದ್ದರು. ಅವರ ಸುರಂಗದಿಂದ ಹೊರಬಂದಿದ್ದಾರೆ ಎಂದು ತಿಳಿಯುತ್ತಿದ್ದಂತೆ ಎರಡನೇ ಬಾರಿಗೆ ದೀಪಾವಳಿ ಆಚರಿಸಿದರು.

'ಆರು ಮಂದಿ ಸುರಂಗದಿಂದ ಹೊರಬಂದ ವಿಷಯ ತಿಳಿಯುತ್ತಿದ್ದಂತೆ ಗ್ರಾಮಸ್ಥರು ತಮ್ಮ ಮನೆಗಳಿಂದ ಹೊರ ಬಂದು ಅಭಿನಂದಿಸಿದರು. ಗ್ರಾಮದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಯಿತು. ಅವರೆಲ್ಲರೂ ಗ್ರಾಮಕ್ಕೆ ಮರಳಿದ ಬಳಿಕವೂ ದೀಪ ಹಚ್ಚಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಮತ್ತೊಮ್ಮೆ ದೀಪಾವಳಿ ಆಚರಿಸಲು ಗ್ರಾಮಸ್ಥರು ನಿರ್ಧರಿಸಿದ್ದಾರೆ' ಎಂದು ರಾಮ್ ಮಿಲನ್ ಅವರ ಮಗ ಸಂದೀಪ್ ಕುಮಾರ್ ತಿಳಿಸಿದ್ದಾರೆ.

ಏಮ್ಸ್: ಕಾರ್ಮಿಕರ ಆರೋಗ್ಯ ತಪಾಸಣೆ

ಒಂದನೇ ಪುಟದಿಂದ

ಸುರಂಗದಿಂದ ಹೊರತಂದ ತಕ್ಷಣ ಅವರನ್ನು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಗಿತ್ತು. ನಂತರ ಅವರನ್ನು ಭಾರತೀಯ ವಾಯುಪಡೆಯ ಚಿನೂಕ್ ಹೆಲಿಕಾಪ್ಟರ್ ಮೂಲಕ ಏಮ್ಸ್‌ಗೆ ಕರೆತರಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಮಿಕರ ಆರೋಗ್ಯ ಸ್ಥಿತಿಯ ಬಗ್ಗೆ ವೈದ್ಯರು ಕೂಲಂಕಷವಾಗಿ ತಪಾಸಣೆ ನಡೆಸಲಿದ್ದಾರೆ ಎಂದು ಏಮ್ಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಾರ್ಮಿಕರೆಲ್ಲ ಆರೋಗ್ಯವಾಗಿರುವಂತೆ ಕಾಣುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಕಾರ್ಮಿಕರ ವರ್ತನೆ, ರಕ್ತದ ಒತ್ತಡ, ರಕ್ತದಲ್ಲಿ ಆಮ್ಲಜನಕದ ಪ್ರಮಾಣ ಹಾಗೂ ಇತರ ಎಲ್ಲ ಆರೋಗ್ಯ ಸೂಚಕಗಳು ಸಹಜವಾಗಿ ಇವೆ ಎಂದು ಹೇಳಿದ್ದಾರೆ. ಅಗತ್ಯ ಕಂಡುಬಂದರೆ ಹೆಚ್ಚಿನ ತಪಾಸಣೆ ನಡೆಸಲಾಗುತ್ತದೆ ಎಂದಿದ್ದಾರೆ.

ಕಾರ್ಮಿಕರನ್ನು ಮನಃಶಾಸ್ತ್ರಜ್ಞರು ಕೂಡ ಪರೀಕ್ಷಿಸಲಿದ್ದಾರೆ. ಕಾರ್ಮಿಕರನ್ನು ಒಂದೆರಡು ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಇದಕ್ಕೂ ಮೊದಲು ಕಾರ್ಮಿಕರನ್ನು ಚಿನ್ಯಾಲಿಸೌರ್‌ದಲ್ಲಿನ ಆರೋಗ್ಯ ಕೇಂದ್ರದಲ್ಲಿ ಭೇಟಿ ಮಾಡಿದ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಪ್ರತಿಯೊಬ್ಬರಿಗೂ ₹1 ಲಕ್ಷ ಮೊತ್ತದ ಚೆಕ್ ವಿತರಿಸಿದರು.

ಆಸ್ಪತ್ರೆಯ ಹೊರಭಾಗದಲ್ಲಿ ಕಾಯುತ್ತಿದ್ದ ಕಾರ್ಮಿಕರ ಕುಟುಂಬ ಸದಸ್ಯರೊಂದಿಗೆ ಅವರು ಮಾತುಕತೆ ನಡೆಸಿದರು. ಯಂತ್ರದ ನೆರವಿಲ್ಲದೆ ಸುರಂಗ ಕೊರೆದ ಕಾರ್ಮಿಕರಿಗೂ ತಲಾ ₹50,000 ಬಹುಮಾನ ಘೋಷಿಸಿದರು.

ನವೆಂಬರ್ 12ರಂದು ನಿರ್ಮಾಣ ಹಂತದ ಸುರಂಗ ಕುಸಿದು ಉತ್ತರಪ್ರದೇಶ, ಜಾರ್ಖಂಡ್, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಉತ್ತರಾಖಂಡ ಮತ್ತು ಅಸ್ಸಾಂನ 41 ಕಾರ್ಮಿಕರು ಸಿಲುಕಿಕೊಂಡಿದ್ದರು. ಮಂಗಳವಾರ ಅವರನ್ನು ರಕ್ಷಿಸಲಾಗಿತ್ತು.

ಚಾರ್ ಧಾಮ್ ರಸ್ತೆ ಯೋಜನೆಯಡಿ ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಿಲ್ಕ್ಯಾರಾದಿಂದ ಡಂಡಾಲ್‌ಗಾಂವ್‌ವರೆಗೆ 4.5 ಕಿಮೀ ಉದ್ದದ ಸುರಂಗ ನಿರ್ಮಾಣವಾಗುತ್ತಿದೆ. ಈ ಸುರಂಗವು ಉತ್ತರಕಾಶಿ ಮತ್ತು ಯಮುನೋತ್ರಿಯ ಅಂತರವನ್ನು 26 ಕಿ.ಮೀ ಯಷ್ಟು ಕಡಿಮೆ ಮಾಡಲಿದೆ.

ಕಾಂಗ್ರೆಸ್ ಸರ್ಕಾರದಲ್ಲೂ ಭ್ರಷ್ಟಾಚಾರ

ಎಚ್.ಎನ್. ನಾಗಮೋಹನ್ ದಾಸ್ ಆಯೋಗಕ್ಕೆ ದೂರು ಸಲ್ಲಿಸಿದ ಡಿ.ಕೆಂಪಣ್ಣ

ಪ್ರಜಾವಾಣಿ ವಾರ್ತೆ


ಡಿ.ಕೆಂಪಣ್ಣ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರದಲ್ಲೂ ಜಲ ಸಂಪನ್ಮೂಲ ಮತ್ತು ನಗರಾಭಿವೃದ್ಧಿ ಇಲಾಖೆಗಳು ಹಾಗೂ ಬಿಬಿಎಂಪಿಯಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು, ಕೆಲವು ದಾಖಲೆಗಳೊಂದಿಗೆ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗಕ್ಕೆ ದೂರು ನೀಡಿದ್ದಾರೆ.

ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ವಿವಿಧ ಇಲಾಖೆಗಳ ಕಾಮಗಾರಿಗಳ ಗುತ್ತಿಗೆದಾರರಿಂದ ಶೇಕಡ 40ರಷ್ಟು ಕಮಿಷನ್ ಪಡೆಯಲಾಗುತ್ತಿತ್ತು ಎಂಬ ಆರೋಪದ ಕುರಿತು ಆಯೋಗ ವಿಚಾರಣೆ ನಡೆಸುತ್ತಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿನ ಭ್ರಷ್ಟಾಚಾರದ ಕುರಿತು ಮಂಗಳವಾರ ದೂರು ಸಲ್ಲಿಸಿರುವ ಕೆಂಪಣ್ಣ, ಈಗಲೂ ಭ್ರಷ್ಟಾಚಾರ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವುದನ್ನು ಆಯೋಗದ ಗಮನಕ್ಕೆ ತಂದಿದ್ದಾರೆ.

'ಜಲ ಸಂಪನ್ಮೂಲ ಮತ್ತು ನಗರಾಭಿವೃದ್ಧಿ ಇಲಾಖೆಗಳಲ್ಲಿ ಕೆಲವು ಅಧಿಕಾರಿಗಳು ಗುತ್ತಿಗೆದಾರರಿಂದ ಲಂಚಕ್ಕೆ ಬೇಡಿಕೆ ಇಡುತ್ತಿರುವ ಕುರಿತು ಕೆಂಪಣ್ಣ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಬಿಬಿಎಂಪಿಯ ಕೆಲವು ಅಧಿಕಾರಿಗಳು ಸಚಿವರ ಹೆಸರಿನಲ್ಲೇ ಹಣಕ್ಕೆ ಬೇಡಿಕೆ ಇಡುತ್ತಿರುವ ಬಗ್ಗೆಯೂ ದೂರಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಬಾಕಿ ಬಿಲ್ ಪಾವತಿಯಲ್ಲಿ ಜ್ಯೇಷ್ಠತೆ ಉಲ್ಲಂಘನೆ, ಹೆಚ್ಚು ಕಮಿಷನ್ ನೀಡಿದವರಿಗೆ ಬಿಲ್ ಪಾವತಿ, ದುರುದ್ದೇಶದಿಂದ ಕಾಮಗಾರಿಗಳಿಗೆ ತಡೆ ನೀಡಿರುವುದು, ಕೆಲಸ ಮುಂದುವರಿಸುವುದಕ್ಕೂ ಕಮಿಷನ್‌ಗೆ ಬೇಡಿಕೆ ಇಟ್ಟಿರುವುದು ಸೇರಿದಂತೆ ಹಲವು ಆರೋಪಗಳು ದೂರಿನಲ್ಲಿವೆ ಎಂಬ ಮಾಹಿತಿ ಲಭಿಸಿದೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಕೆಂಪಣ್ಣ, 'ಕೆಲವು ಇಲಾಖೆಗಳಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಬಂದಿಲ್ಲ ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತರಲಾಗಿತ್ತು. ಹೆಚ್ಚು ಭ್ರಷ್ಟಾಚಾರ ಇರುವ ಕೆಲವು ಇಲಾಖೆಗಳ ಕುರಿತು ಆಯೋಗಕ್ಕೆ ಸಲ್ಲಿಸಿರುವ ದೂರಿನಲ್ಲಿ ಮಾಹಿತಿ ನೀಡಿದ್ದೇವೆ. ಹಿಂದೆ ನಡೆದಿರುವ ಭ್ರಷ್ಟಾಚಾರದ ತನಿಖೆಯ ಜತೆಯಲ್ಲೇ ಈಗ ನಡೆಯುತ್ತಿರುವ ಅಕ್ರಮಗಳನ್ನೂ ನಿಯಂತ್ರಿಸುವಂತೆ ಆಯೋಗಕ್ಕೆ ಮನವಿ ಮಾಡಿದ್ದೇವೆ' ಎಂದರು.

'ದೂರನ್ನು ಪರಿಶೀಲಿಸಿಲ್ಲ'

'ಗುತ್ತಿಗೆದಾರರ ಸಂಘದ ನಿಯೋಗವು ಮಂಗಳವಾರ ಆಯೋಗಕ್ಕೆ ದೂರು ಸಲ್ಲಿಸಿದೆ. ಅದನ್ನು ಇನ್ನೂ ಪರಿಶೀಲಿಸಿಲ್ಲ. ಹೀಗಾಗಿ ದೂರಿನಲ್ಲಿ ಏನು ಉಲ್ಲೇಖಿಸಿದ್ದಾರೆ ಎಂಬುದು ಇನ್ನೂ ತಿಳಿದಿಲ್ಲ' ಎಂದು ತನಿಖಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ತಿಳಿಸಿದರು.

'ಕಾರ್ಮಿಕರಿಗಿಂತ ನಮಗೇ ಹೆಚ್ಚು ಖುಷಿ'

ಉತ್ತರಕಾಶಿ (ಪಿಟಿಐ): ಸುರಂಗದಲ್ಲಿ ಸಿಲುಕಿದ್ದವರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿದ್ದವರ ಪೈಕಿ, ಕಾರ್ಮಿಕರನ್ನು ಮೊದಲು ಭೇಟಿ ಮಾಡಿದ್ದು ಫಿರೋಜ್ ಖುರೇಷಿ ಮತ್ತು ಮೋನು ಕುಮಾರ್. ಇವರು ರ್‍ಯಾಟ್-ಹೋಲ್ ಮೈನಿಂಗ್ ಕೆಲಸಗಳಲ್ಲಿ ನಿಪುಣರು.

ದೆಹಲಿಯ ಖುರೇಷಿ ಮತ್ತು ಉತ್ತರ ಪ್ರದೇಶದ ಮೋನು ಅವರು ಈ ಕಾರ್ಮಿಕರನ್ನು ರಕ್ಷಿಸಲು ವಿವಿಧ ಏಜೆನ್ಸಿಗಳ ಜೊತೆ ಸೇರಿಕೊಂಡ 12 ಮಂದಿ ರ್‍ಯಾಟ್-ಹೋಲ್ ಮೈನಿಂಗ್ ನಿಪುಣರ ತಂಡದ ಸದಸ್ಯರು. ಕುಸಿದುಬಿದ್ದಿದ್ದ ಭಾಗದಲ್ಲಿ ಸುರಂಗವನ್ನು ಯಂತ್ರಗಳ ನೆರವಿಲ್ಲದೆ ಕೊರೆದು, ಕಾರ್ಮಿಕರು ಇದ್ದ ಸ್ಥಳವನ್ನು ಮೊದಲು ತಲುಪಿದವರು ಇವರು.

'ಕುಸಿದುಬಿದ್ದಿದ್ದ ಭಾಗದಲ್ಲಿ ಸುರಂಗ ಕೊರೆಯುತ್ತ ಸಾಗಿದ ನಾವು ಕೊನೆಯ ಹಂತಕ್ಕೆ ಬಂದಾಗ, ನಮ್ಮ ಮಾತುಗಳು ಕಾರ್ಮಿಕರಿಗೆ ಕೇಳಿಸುತ್ತಿದ್ದವು' ಎಂದು ಖುರೇಷಿ ತಿಳಿಸಿದರು.

'ನಮ್ಮನ್ನು ಕಂಡು ಕಾರ್ಮಿಕರು, ಆಲಂಗಿಸಿದರು. ನಮಗೆ ಧನ್ಯವಾದ ಸಮರ್ಪಿಸಿದರು. ನಮ್ಮನ್ನು ಎತ್ತಿ ತಮ್ಮ ಭುಜದ ಮೇಲೆ ಕೂರಿಸಿಕೊಂಡರು' ಎಂದರು. ಅಲ್ಲದೆ, 'ಕಾರ್ಮಿಕರಿಗಿಂತ ಹೆಚ್ಚು ನಾವೇ ಖುಷಿಪಟ್ಟಿದ್ದೇವೆ' ಎಂದು ಕೂಡ ತಿಳಿಸಿದರು. ಖುರೇಷಿ ಅವರು ದೆಹಲಿಯ ರಾಕ್‌ವೆಲ್ ಎಂಟರ್‌ಪ್ರೈಸಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

'ನಾವು ಅಲ್ಲಿ ಸರಿಸುಮಾರು ಅರ್ಧ ಗಂಟೆ ಇದ್ದೆವು' ಎಂದು ಮೋನು ಹೇಳಿದರು. ಇವರು ಉತ್ತರ ಪ್ರದೇಶದ ಬುಲಂದ್‌ಶಹರ್‌ನವರು.

ನಮ್ಮ ಕೆಲಸವನ್ನು 24ರಿಂದ 36 ಗಂಟೆಗಳಲ್ಲಿ ಪೂರ್ಣಗೊಳಿಸುವುದಾಗಿ ಹೇಳಿದ್ದೆವು. ಈ ಕಾರ್ಯದಲ್ಲಿ ಭಾಗಿಯಾಗಿದ್ದಕ್ಕೆ ನಾವು ಹಣ ಕೇಳಿಲ್ಲ ಎಂದು ರ್‍ಯಾಟ್ ಹೋಲ್ ಮೈನಿಂಗ್ ತಂಡದ ಮುಖ್ಯಸ್ಥ ವಕೀಲ್ ಹಸನ್ ತಿಳಿಸಿದರು.

'ತಪಾಸಣೆ ಬಳಿಕ ಕಾಮಗಾರಿ ಮುಂದುವರಿಕೆ'

ನವದೆಹಲಿ (ಪಿಟಿಐ): ಸಿಲ್ಕ್ಯಾರಾ ಸುರಂಗಮಾರ್ಗದಲ್ಲಿ ಅಗತ್ಯ ಸುರಕ್ಷತಾ ತಪಾಸಣೆ ನಡೆಸಿ, ಕುಸಿದ ಭಾಗವನ್ನು ದುರಸ್ತಿಗೊಳಿಸಿದ ಬಳಿಕವೇ ಯೋಜನೆಯ ಕಾಮಗಾರಿಯನ್ನು ಮುಂದುವರೆಸಲಾಗುವುದು ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

'ಸಿಲ್ಕ್ಯಾರ ಸುರಂಗಮಾರ್ಗ ಯೋಜನೆಯನ್ನು ಸಂಪೂರ್ಣವಾಗಿ ಪರಿಶೀಲನೆಗೆ ಒಳಪಡಿಸುತ್ತೇವೆ. ಜೊತೆಗೆ ಕೆಲವು ವ್ಯವಸ್ಥೆಗಳನ್ನು ಉತ್ತಮಪಡಿಸುತ್ತೇವೆ' ಎಂದು ಸಚಿವಾಲಯದ ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ.

ಉತ್ತರಾಖಂಡ ಸರ್ಕಾರವು ಈಗಾಗಲೇ ತಜ್ಞರ ತಂಡವೊಂದನ್ನು ರಚಿಸಿದೆ. ಮತ್ತೊಂದು ತಂಡ ರಚಿಸಲು ಸಚಿವಾಲಯ ಚಿಂತನೆ ನಡೆಸಿದೆ.

ಭದ್ರಾವತಿ: ಸಿಡಿಲು ಬಡಿದು ಇಬ್ಬರ ಸಾವು

ಬೆಂಗಳೂರು: ಮಲೆನಾಡು ಮತ್ತು ಉತ್ತರ ಕರ್ನಾಟಕದ ವಿವಿಧೆಡೆ ಮಂಗಳವಾರ ರಾತ್ರಿ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗಿದ್ದು, ಶಿವಮೊಗ್ಗ ಜಿಲ್ಲೆಯಲ್ಲಿ ಸಿಡಿಲು ಬಡಿದು ಸಹೋದರರಿಬ್ಬರು ಮೃತಪಟ್ಟಿದ್ದಾರೆ.

ಭದ್ರಾವತಿ ತಾಲ್ಲೂಕಿನ ಹುಣಸೆಕಟ್ಟೆ ಜಂಕ್ಷನ್ ಬಳಿಯ ಗದ್ದೆಯಲ್ಲಿ ಸಿಡಿಲು ಬಡಿದು ಗೌಳಿಗರ ಕ್ಯಾಂಪ್ ನಿವಾಸಿಗಳಾದ ಎಸ್.ಬೀರೇಶ್ (32), ಎಸ್.ಸುರೇಶ್ (30) ಅಸುನೀಗಿದ್ದಾರೆ.

ಕುರಿಗಳ ಸಾವು: ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನಲ್ಲಿ ಜೋರು ಗಾಳಿ ಮಳೆಗೆ ಸೂರಣಗಿಯಲ್ಲಿ ಮರ ಉರುಳಿ ಬಿದ್ದು ನಾಲ್ಕು ಕುರಿಗಳು ಮೃತಪಟ್ಟಿವೆ.

ಕನಕ: ಬಾಳ ಬೆಳೆಯ ಬಂಗಾರ

● ಎಸ್. ಸೂರ್ಯಪ್ರಕಾಶ ಪಂಡಿತ್



ಬೆಳೆಯನ್ನು ಬೆಳೆಯಬೇಕಾದರೆ ತೋಟದಲ್ಲಿ ವ್ಯವಸಾಯ ನಿರಂತರವಾಗಿ ನಡೆಯುತ್ತಿರಬೇಕು. ಸತ್ವಪೂರ್ಣ ಬೀಜವನ್ನು ಭೂಮಿಯಲ್ಲಿ ಬಿತ್ತಬೇಕು. ಸಮಯಕ್ಕೆ ಸರಿಯಾಗಿ ಅದಕ್ಕೆ ನೀರನ್ನು ಹಾಯಿಸಬೇಕು. ಪೈರಿಗೆ ರಕ್ಷಣೆಯನ್ನು ಒದಗಿಸಬೇಕು. ನೆಲದಲ್ಲಿ ಹುಟ್ಟುತ್ತಲೇ ಇರುವ ಕಳೆಯನ್ನು ಕಿತ್ತೊಗೆಯಬೇಕು. ಆಗ ಬೆಳೆ ನಮ್ಮ ಕೈ ಹಿಡಿದೀತು; ಫಲ ಕೊಟ್ಟೀತು.

ಸಮಾಜದ ಪ್ರಗತಿಗೂ ಮನುಜನ ಏಳಿಗೆಗೂ ಕಾರಣವಾಗಿರುವುದೇ 'ಕೃಷಿ'. ನೆಲದಲ್ಲಿ ಭತ್ತ–ರಾಗಿಗಳನ್ನು ಬೆಳೆಯುವುದಷ್ಟೆ ಕೃಷಿಯಲ್ಲ; ಮನದಲ್ಲಿ ಭಕ್ತಿ–ವಿರಾಗಗಳನ್ನು ಬೆಳೆಸಿಕೊಳ್ಳುವುದೂ ಕೃಷಿಯೇ. ಒಂದು ಹೊರಗಿನ ಕೃಷಿ, ಇನ್ನೊಂದು ಒಳಗಿನ ಕೃಷಿ. ಈ ಎರಡರಲ್ಲೂ ಸಮನ್ವಯವನ್ನು ಸಾಧಿಸಿದವನೇ ಋಷಿ. ಇಂಥ ಜ್ಞಾನಿಗಳಷ್ಟೆ ಅಂತರಂಗ–ಬಹಿರಂಗದ ಬಾಳ್ವೆಗೆ ಬೆಳಕಾಗಬಲ್ಲರು. ಕನಕದಾಸರು ಅಂಥ ಜ್ಞಾನಿಗಳು; ಮಾತ್ರವಲ್ಲ, ಸಮಾಜ ಸುಧಾರಕರು.

ಜ್ಞಾನಿಗಳು ಕೈಗೆತ್ತಿಕೊಳ್ಳುವ ಸಮಾಜ ಸುಧಾರಣೆಗೆ ಮೂಲವೇ ಅವರ ಅಂತರಂಗದ ಬೆಳಕು. ಅದೇ ಅವರ ಶಕ್ತಿ. ಆಧ್ಯಾತ್ಮಿಕತೆಯೇ ಈ ಶಕ್ತಿಯ ಮೂಲಸತ್ತ್ವ. ಅಧ್ಯಾತ್ಮಕ್ಕೂ ಜಗತ್ತಿಗೂ ನಮ್ಮ ನೋಟಕ್ಕೂ ನೇರ ನಂಟು. ದೃಷ್ಟಿಗೆ ಕರಣವೇ ಕಣ್ಣು. ಆದರೆ ಈ ನಮ್ಮ ಕಣ್ಣಿಗೆ ಹೊರಗೆ ಮಾತ್ರ ನೋಡಿ ಅಭ್ಯಾಸ. ಅದರ ನೋಟ ನಮ್ಮ ಒಳಗೂ ಹೊಕ್ಕರೆ ಅದುವೇ ಅಧ್ಯಾತ್ಮ; ಮೂಲದ ಅರಿವು. ಆದರೆ ಒಳಗಣ್ಣಿನ ಈ ನೋಟಕ್ಕೆ ಸಾಧನೆ ಬೇಕೆನ್ನಿ! ಇದನ್ನೇ ಕನಕದಾಸರು ಹೀಗೆಂದರು:

'ಕಣ್ಣೆ ಕಾಮನ ಬೀಜ – ಈ
ಕಣ್ಣಿಂದಲೆ ನೋಡೊ ಮೋಕ್ಷಸಾಮ್ರಾಜ್ಯ
ಕಣ್ಣಿನ ಮೂರುತಿ ಬಿಗಿದು – ಒಳ
ಗಣ್ಣಿನಿಂದಲೆ ದೇವರ ನೋಡಣ್ಣ!'

ಒಳಗಣ್ಣು ತೆರೆದಾಗ ನಮಗೆ ಜೀವಾತ್ಮ–ಪರಮಾತ್ಮಗಳ ಅದ್ವೈತಾನುಭವ ಒದಗುತ್ತದೆ. 'ತನು ನಿನ್ನದು ಜೀವನ ನಿನ್ನದೋ' ಎಂಬ ಈ ಅರಿವು ಮೂಡಿದಾಗ ನಮ್ಮ ರಾಗ–ದ್ವೇಷಗಳು ಮರೆಯಾಗುತ್ತವೆ. ಸಮಾನತೆಗೂ ಸಾಮರಸ್ಯಕ್ಕೂ ಈ ಸತ್ವಗುಣವೇ ಗಾಳಿ, ಬೆಳಕು ಮತ್ತು ನೀರು. ಇದು ಸಿದ್ಧವಾದ ಮೇಲೆಯಷ್ಟೆ ಬಾಳಿನ ಕೃಷಿಗೆ ತೊಡಗಬೇಕು. 'ನಾರಾಯಣ ಎಂಬ ನಾಮದ ಬೀಜವನು ನಾಲಿಗೆಯಾ ಕೂರಿಗೆಯ ಮಾಡಿ ಬಿತ್ತಿರಯ್ಯ' ಎಂದು ವ್ಯವಸಾಯದ ದಾರಿಯನ್ನು ತೋರಿದ್ದಾರೆ, ಕನಕದಾಸರು. ಹೃದಯವನ್ನೇ ಹೊಲವನ್ನಾಗಿ ಮಾಡಿಕೊಂಡು, ದೇಹವನ್ನೇ ನೇಗಿಲಾಗಿಸಿಕೊಂಡು, ಮನಸ್ಸನ್ನೇ ಧಾನ್ಯವನ್ನಾಗಿ ನೋಡಬೇಕೆಂದು ವಿವರಿಸುತ್ತ, ಬಾಳೆಂಬ ಕೃಷಿಯ ಮರ್ಮಗಳನ್ನೆಲ್ಲ ಅವರು ತಮ್ಮ ಕೃತಿಗಳ ಮೂಲಕ ತಿಳಿಸಿಕೊಟ್ಟಿದ್ದಾರೆ.

ಕನಕದಾಸರ ಜೀವನದಲ್ಲಿ ನಡೆದಿರುವ 'ಕೋಣಮಂತ್ರ'ದ ಸಾಕ್ಷಾತ್ಕಾರ, ಕೃಷ್ಣನ ವಿಗ್ರಹ ಅವರ ಕಡೆಗೆ ತಿರುಗಿದ್ದು – ಇಂಥ 'ಪವಾಡ'ಗಳಿಗೂ ಅಧ್ಯಾತ್ಮಸಾಧನೆಗೂ ಪ್ರತ್ಯಕ್ಷ ಸಂಬಂಧವುಂಟು. ದೇವರಿಲ್ಲದ ಸ್ಥಳವೇ ಸಿಗದೆ ಅವರು ಹಣ್ಣನ್ನು ತಿನ್ನದೆ ಹಿಂದಿರುಗಿದ್ದು, ಸ್ವರ್ಗಕ್ಕೆ 'ನಾನು ಹೋದರೆ ಹೋಗಬಹುದು' ಎಂದು ಘೋಷಿಸಿದ್ದು – ಇವು ಅವರ ಜ್ಞಾನಸಿದ್ಧಿಯನ್ನು ಸೂಚಿಸುತ್ತವೆ. ಹೀಗೆ ಅವರ ಜೀವನದುದ್ದಕ್ಕೂ ಕಾಣುವುದು ಜ್ಞಾನ–ಭಕ್ತಿಗಳ ಸಂಗಮವನ್ನೇ. ಹೀಗಾಗಿಯೇ ಅವರ ಜೀವನ–ದರ್ಶನ ಇಂದಿಗೂ ನಮಗೆ ಬೆಳಕು ಮತ್ತು ತಂಪು. ಆದರೆ ನಮ್ಮ ಇಂದಿನ ಸಮಾಜ ಸುಧಾರಣೆಯ ಪೈರುಗಳು ನಾಟಿಕೊಳ್ಳುವ ಮೊದಲೇ ಒಣಗಿಹೋಗುತ್ತಿರುತ್ತವೆ. ಇದಕ್ಕೆ ಕಾರಣವೇ, ನಾವು ಬಿತ್ತಿರುವ ಬೀಜದಲ್ಲಿ ಮರೆಯಾಗಿರುವ ಅಧ್ಯಾತ್ಮದ ಸತ್ವ. ಕಾಮ, ಕ್ರೋಧ, ಮದ, ಮತ್ಸರಗಳೆಂಬ ಕಳೆಗಳ ದಾಳಿಯಲ್ಲಿ ನಮ್ಮ ಬಾಳ ಬೆಳೆಯು ಬಾಡುತ್ತಿರುವುದನ್ನೇ ನಾವು ಗಮನಿಸುತ್ತಿಲ್ಲ.

ಉದ್ಯೋಗ ಮಿತಿ ಹೆಚ್ಚಿಸದ ಕೇಂದ್ರ

ಹಾವೇರಿ: 'ಬರಗಾಲದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ (ನರೇಗಾ) 150 ದಿನ ಕೆಲಸ ಕೊಡಬೇಕು ಎಂಬ ನಿಯಮವಿದ್ದರೂ ಕೇಂದ್ರ ದುಡಿಮೆಯ ದಿನ ಹೆಚ್ಚಿಸಲು ಅನುಮತಿ ಕೊಡುತ್ತಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಕಾಗಿನೆಲೆಯಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಅಷ್ಟೇ ಅಲ್ಲ, ದೇಶದ 12 ರಾಜ್ಯಗಳಲ್ಲಿ ಬರ ಇದೆ. ಇಂತಹ ಸಂದರ್ಭದಲ್ಲಿ ದುಡಿಯುವ ಜನರಿಗೆ ಹೆಚ್ಚಿನ ದುಡಿಯುವ ಅವಕಾಶ ಕೊಡಬೇಕಿದೆ' ಎಂದರು.

ಸಮಸ್ಯೆ ಬಗೆಹರಿದಿದೆ: ಶಾಸಕ ಬಿ.ಆರ್. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಸಮಸ್ಯೆಗಳನ್ನು ಮುಖ್ಯಮಂತ್ರಿ ಬಗೆಹರಿಸಿ, ಅಧಿವೇಶನದಲ್ಲಿ ಭಾಗವಹಿಸುವಂತೆ ಆದೇಶಿಸಿದ್ದಾರೆ. ಹೀಗಾಗಿ, ಭಾಗವಹಿಸುತ್ತೇನೆ' ಎಂದು ಆಳಂದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಹೇಳಿದರು.

ಶಕ್ತಿಭವನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಮುಖ್ಯಮಂತ್ರಿ ಕರೆ ಮಾಡಿ ಕರೆದಿದ್ದರು. ಮುಕ್ಕಾಲು ಗಂಟೆ ಮಾತನಾಡಿದರು. ನನಗೆ ಸಮಾಧಾನ ಆಗಿದೆ. ಅವರ ಮೇಲೆ ನನಗೆ ನಂಬಿಕೆ ಇದೆ' ಎಂದರು.

'ಕೃಷ್ಣ ಬೈರೇಗೌಡ ಮಾತನಾಡಿದ ಅರ್ಥವನ್ನು ಬಿಚ್ಚಿ ಹೇಳಬೇಕೇ? ಕೆಆರ್‌ಐಡಿಎಲ್‌ಗೆ ಯಾಕೆ ಕಾಮಗಾರಿ ಕೊಡಬೇಕೆಂದು ಎಲ್ಲ ಶಾಸಕರಿಗೆ ಅವರು ಸವಾಲು ಹಾಕಿದ್ದಾರೆ. ಪಂಚರಾಜ್ಯಗಳ ಚುನಾವಣೆ ಇದ್ದುದರಿಂದ ನಾನು ಸುಮ್ಮನಿದ್ದೆ. ಈಗ ಈ ವಿಚಾರ ಎತ್ತಿದ್ದೇನೆ. ಪ್ರಿಯಾಂಕ್ ಖರ್ಗೆ ಜೊತೆ ಯಾವುದೇ ಮನಃಸ್ತಾಪ ಇಲ್ಲ. ಕೃಷ್ಣ ಬೈರೇಗೌಡ ಜೊತೆಗೂ ಭಿನ್ನಾಭಿಪ್ರಾಯ ಇಲ್ಲ' ಎಂದರು.

ಜನ ಒಪ್ಪುವುದಿಲ್ಲ: 'ಬಿ.ಆರ್. ಪಾಟೀಲರ ಮೇಲೆ ಅಪಾರ ಗೌರವವಿದೆ. ಅವರ ನೋವನ್ನು ಅವರು ಹೇಳಿಕೊಂಡಿದ್ದಾರೆ. ಅವರ ಮೇಲೆ ಯಾರಾದರೂ ಆರೋಪ ಮಾಡಿದರೆ ಜನ ಒಪ್ಪುವುದಿಲ್ಲ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಪ್ರಾಮಾಣಿಕತೆ ಪ್ರಶ್ನಿಸಿಲ್ಲ: ಪ್ರಿಯಾಂಕ್

'ಬಿ.ಆರ್. ಪಾಟೀಲರ ಪ್ರಾಮಾಣಿಕತೆ ಬಗ್ಗೆ ಯಾರೂ ಪ್ರಶ್ನೆ ಎತ್ತಿಲ್ಲ. ನಮ್ಮಲ್ಲಿ ಗೊಂದಲ ಇಲ್ಲ' ಎಂದು ಗ್ರಾಮೀಣಾಭಿವೃದ್ಧಿ ಪ್ರಿಯಾಂಕ್ ಖರ್ಗೆ ಹೇಳಿದರು.

ಮುಖ್ಯಮಂತ್ರಿಗೆ ಪಾಟೀಲ ಪತ್ರ ಬರೆದಿರುವ ಹಿನ್ನೆಲೆಯಲ್ಲಿ ಬುಧವಾರ ಮಾತನಾಡಿದ ಪ್ರಿಯಾಂಕ್, 'ಕೆಆರ್‌ಐಡಿಎಲ್ ಅಕ್ರಮ ಬಗ್ಗೆ ಈಗಾಗಲೇ ಆಂತರಿಕ ತನಿಖೆ ಮಾಡಿಸಿದ್ದೇವೆ. ಅದರ ವರದಿ ಸಿದ್ಧವಿದೆ. ತನಿಖೆ ಮಾಡಬೇಕೆನ್ನುವುದೇ ಪಾಟೀಲರ ಮನವಿ. ಯಾಕೆ ಪತ್ರ ಬರೆದರೋ ಗೊತ್ತಿಲ್ಲ' ಎಂದರು.

'ಕೆಆರ್‌ಐಡಿಎಲ್ ಅಕ್ರಮ ತನಿಖೆಯನ್ನು ನಾಗಮೋಹನದಾಸ್ ವಿಚಾರಣಾ ಆಯೋಗಕ್ಕೆ ವಹಿಸುವ ಪ್ರಸ್ತಾವಕ್ಕೂ ಪಾಟೀಲರು ಒಪ್ಪಿದ್ದರು. ಆದಷ್ಟು ಬೇಗ ತನಿಖೆಗೆ ಕೊಡುವ ಬಗ್ಗೆ ತೀರ್ಮಾನಿಸುತ್ತೇವೆ' ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ವ್ಯಂಗ್ಯ

ಆಡಳಿತ ಪಕ್ಷದ ಶಾಸಕರಿಗೇ ಈ ಗತಿಯೇ?

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಯರೆಡ್ಡಿ, ಶ್ಯಾಮನೂರು ಶಿವಶಂಕರಪ್ಪ ನಂತರ, ಇದೀಗ ಬಿ.ಆರ್. ಪಾಟೀಲ ಮನನೊಂದು ಮಾತನಾಡಿದ್ದಾರೆ. ಪಕ್ಷದೊಳಗಿನ ಅಸಮಾಧಾನಗಳನ್ನು ಕಾಂಗ್ರೆಸ್ ಸರ್ಕಾರ ಸರಿಪಡಿಸಿಕೊಳ್ಳದೇ ಹೋದರೆ ಅದೇ ತಿರುಗುಬಾಣವಾಗಲಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಎಚ್ಚರಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ತಮ್ಮ ಪಕ್ಷದ ನಾಯಕರ ಧೋರಣೆಗೆ ಮನನೊಂದು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಒಬ್ಬ ಆಡಳಿತ ಪಕ್ಷದ ಶಾಸಕರ ಪರಿಸ್ಥಿತಿ ಹೀಗಾದರೆ ಬೇರೆಯವರ ಗತಿ ಏನು?' ಎಂದು ವ್ಯಂಗ್ಯವಾಡಿದರು.

'ಬಿಜೆಪಿ ಸರ್ಕಾರ ಸ್ಪೀಕರ್ ಅನುಮತಿ ಪಡೆಯದೆಯೇ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಅನುಮತಿ ನೀಡಿದ್ದು ಕಾನೂನುಬಾಹಿರವೆಂಬ ಕಾಂಗ್ರೆಸ್ ಸಮರ್ಥನೆ ಸರಿಯಲ್ಲ. ಅದಕ್ಕೆ ಸ್ಪೀಕರ್ ಒಪ್ಪಿಗೆ ಬೇಕಿಲ್ಲ. ಅದನ್ನು ವಿಧಾನಸಭೆಯಲ್ಲಿ ಚರ್ಚಿಸೋಣ. ಈ ಹಿಂದೆ ಪ್ರಕರಣವೊಂದರಲ್ಲಿ ತನಿಖೆಗೆ ಅನುಮತಿ ಕೋರಿ ಆರ್‌ಟಿಐ ಕಾರ್ಯಕರ್ತರೊಬ್ಬರು ಬರೆದಿದ್ದ ಪತ್ರಕ್ಕೆ ಉತ್ತರಿಸಿದ್ದ ಸ್ಪೀಕರ್ ಕಾರ್ಯಾಲಯ, ಅನುಮತಿ ಬೇಕಿಲ್ಲವೆಂದಿತ್ತು' ಎಂದರು.

'ರಾಜ್ಯ ಸರ್ಕಾರದ ಕ್ರಮ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರುವ ಮೂಲಕ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಜವಾಬ್ದಾರಿ ನಿರ್ವಹಿಸಿದ್ದಾರೆ' ಎಂದರು.

'ಕಾಂಗ್ರೆಸ್ ಸರ್ಕಾರದಲ್ಲೂ ಭ್ರಷ್ಟಾಚಾರ ನಡೆದಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರ ಆರೋಪ ನಿಜ. ಬಿಜೆಪಿಯ ಶೇ 40 ಭ್ರಷ್ಟಾಚಾರದ ಬಗ್ಗೆ ಮಾತನಾಡಿ ಅಧಿಕಾರ ಹಿಡಿದ ಬಳಿಕ ಅದನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ ಎಂದು ಕಾಂಗ್ರೆಸ್‌ನವರು ಈಗಾಗಲೇ ಸಾಬೀತು ಪಡಿಸಿದ್ದಾರೆ. ಹಿಂದಿನ ಸರ್ಕಾರದ ಹಲವು ಟೆಂಡರ್‌ಗಳನ್ನು ಈಗಿನ ಸರ್ಕಾರ ಕಮಿಷನ್ ಸಲುವಾಗಿ ತಡೆ ಹಿಡಿದಿದೆ' ಎಂದು ದೂರಿದರು.

'ಬರ ವಿಚಾರದಲ್ಲಿ ಕೇಂದ್ರ ಅನುದಾನ ನೀಡುವುದು 2ನೇ ಹಂತ. ಮೊದಲು ನೀವೇನು ಮಾಡಿದ್ದೀರಿ? ₹ 900 ಕೋಟಿ ಇಟ್ಟುಕೊಂಡು ಪೂಜೆ ಮಾಡುತ್ತೀರ? ಮೇವು, ನೀರಿಗೆ ಬಿಟ್ಟು ಬೇರೆ ಯಾವುದಕ್ಕೇ ಹಣ ನೀಡಿದ್ದೀರಿ' ಎಂದು ಪ್ರಶ್ನಿಸಿದರು.

'ದಸರಾದಲ್ಲೂ ಕಮಿಷನ್'

'ಭ್ರಷ್ಟಾಚಾರ ಸಾಬೀತುಪಡಿಸಿದರೆ ರಾಜೀನಾಮೆ ನೀಡುತ್ತೇನೆ' ಎಂಬ ಸಿದ್ದರಾಮಯ್ಯ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ಶೇ 40 ಕಮಿಷನ್ ಬಗ್ಗೆ ಒಂದು ವರ್ಷವಿಡೀ ತಮಟೆ ಹೊಡೆದ ಅವರು ಯಾವುದಾದರೂ ಒಂದು ಆರೋಪವನ್ನು ರುಜುವಾತು ಪಡಿಸಿದ್ದಾರಾ? ಹಣಕಾಸು ಅಕ್ರಮವನ್ನು ರುಜುವಾತು ಮಾಡಲು ಆಗದು. ಮೈಸೂರು ದಸರಾದಲ್ಲೇ ₹20 ಕೋಟಿ ಕಾಮಗಾರಿ ಗುತ್ತಿಗೆ ನೀಡಲು ಮೊದಲು ಒಬ್ಬರನ್ನು ಕರೆಯಿಸಿ ಶೇ 20 ಕಮಿಷನ್ ಕೇಳಿದ್ದರು. ಅವರು ಒಪ್ಪದ ಕಾರಣಕ್ಕೆ ಮತ್ತೊಬ್ಬರಿಗೆ ಗುತ್ತಿಗೆ ನೀಡಲಾಗಿದೆ. ಇದನ್ನು ರುಜುವಾತು ಮಾಡಲು ಆಗುವುದಿಲ್ಲ' ಎಂದರು.

ಜಲಚರ ಕೃಷಿ ವಲಯದ ವಿಮೆ

ಭಾರತದಲ್ಲಿ ಸಿಗಡಿ ಕೃಷಿಯನ್ನು ಕೈಗೊಳ್ಳಲು ಸರಿಸುಮಾರು ಅಂದಾಜು 11 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಿನ ಉಪ್ಪು ನೀರಿನ ಪ್ರದೇಶ ಲಭ್ಯವಿದೆ.

ಗುರುಶಂಕರ್ ಕೆ.ಪಿ

ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ ಜಲಚರ ಕೃಷಿ ವಲಯದಲ್ಲಿ ವಿಮಾ ಯೋಜನೆಯನ್ನು ಜಾರಿಗೆ ತರಲು ಮತ್ತು ಇದರಲ್ಲಿ ಒಳಗೊಂಡಿರುವ ತಾಂತ್ರಿಕ ಸವಾಲುಗಳನ್ನು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯೊಂದಿಗೆ ಚರ್ಚೆ ಪ್ರಾರಂಭಿಸಿದೆ.

- ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಸಿಗಡಿ ಬೇಸಾಯ ಮತ್ತು ಮೀನುಗಾರಿಕೆ ವಲಯವನ್ನು ತರಲು ವಿವಿಧ ಹಂತದ ಚರ್ಚೆ ಮಾಡಲಾಗಿದೆ.
- ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯು ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಈ ಸಂಸ್ಥೆಯು ಜಲಚರ ಕೃಷಿ ವಲಯಕ್ಕೆ ವಿಮಾ ಯೋಜನೆಯನ್ನು ವಿಸ್ತರಿಸಬೇಕು ಎಂಬ ಪ್ರಸ್ತಾವ ಸಲ್ಲಿಸಿತ್ತು.
- ಪ್ರಾಥಮಿಕ ಹಂತದಲ್ಲಿ ಸಿಗಡಿ ಬೇಸಾಯ ಮತ್ತು ಉಪ್ಪು ನೀರಿನ ಮೀನುಗಾರಿಕೆಗೆ ಯೋಜನೆಯನ್ನು ವಿಸ್ತರಿಸಲು ಪ್ರಸ್ತಾಪಿಸಿತ್ತು. ಆಂಧ್ರಪ್ರದೇಶ, ಬಿಹಾರ್, ಗುಜರಾತ್, ಮಧ್ಯಪ್ರದೇಶ ಮತ್ತು ಒಡಿಶಾದಲ್ಲಿ ಪ್ರಾರಂಭಿಸಬೇಕೆಂದು ಮನವಿ ಮಾಡಿದೆ.

ಜಲಚರ ಕೃಷಿ ವಲಯಕ್ಕೆ ವಿಮೆಯ ಅವಶ್ಯಕತೆ

- ಜಲಚರ ಕೃಷಿ ವಲಯದಲ್ಲಿ ಸವಾಲುಗಳು ಎದುರಾದಾಗ ಅಥವಾ ಸಮಸ್ಯೆಗಳು ಉಂಟಾದಾಗ ಅವಲಂಬಿತ ಮೀನುಗಾರರು ನಷ್ಟ ಅನುಭವಿಸುತ್ತಾರೆ. ಜಲಚರ ಕೃಷಿ ವಲಯಕ್ಕೆ ಪ್ರತ್ಯೇಕವಾಗಿ ವಿಮೆ ಕಲ್ಪಿಸಬೇಕು ಎಂಬ ಬೇಡಿಕೆ ಇತ್ತು. ಜಲಚರ ಕೃಷಿ ವಲಯ ಹವಾಮಾನ ಬದಲಾವಣೆಗಳ ಕಾರಣದಿಂದ, ನೈಸರ್ಗಿಕ ವಿಪತ್ತುಗಳ ಕಾರಣದಿಂದ ಮತ್ತು ರೋಗರುಜಿನಗಳ ಕಾರಣದಿಂದ ನಷ್ಟವನ್ನು ಅನುಭವಿಸುತ್ತವೆ. ವಿಮೆ ಇದ್ದರೆ ಹಣಕಾಸಿನ ನಷ್ಟ ಕಡಿಮೆ ಮಾಡಬಹುದು.
- ವಿಮೆ ನೀಡುವುದರಿಂದ ರೈತರ ಆತ್ಮವಿಶ್ವಾಸ ಹೆಚ್ಚುತ್ತದೆ. ಹೂಡಿಕೆದಾರರು ಆಸಕ್ತಿ ತೋರುತ್ತಾರೆ.

ಸಿಗಡಿ ಬೇಸಾಯ

- ಜಲಚರ ಕೃಷಿ ವಲಯದ ಅತ್ಯಂತ ಪ್ರಮುಖ ಭಾಗವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಮುದ್ರದಲ್ಲಿ ಅಥವಾ ಸಿಹಿನೀರಿನಲ್ಲಿ ಮನುಷ್ಯನ ಬಳಕೆಗಾಗಿ ಸಿಗಡಿ ಉತ್ಪಾದನೆಯ ಚಟುವಟಿಕೆ ಎಂದು ಪರಿಗಣಿಸಬಹುದು.
- ಭಾರತದಲ್ಲಿ ಸಿಗಡಿ ಕೃಷಿಯನ್ನು ಕೈಗೊಳ್ಳಲು ಸುಮಾರು ಅಂದಾಜು 11 ಲಕ್ಷ ಹೆಕ್ಟೇರ್ ಗಿಂತ ಹೆಚ್ಚಿನ ಉಪ್ಪು ನೀರಿನ ಪ್ರದೇಶ ಲಭ್ಯವಿದ್ದು ಪಶ್ಚಿಮ ಬಂಗಾಳ, ಒಡಿಶಾ, ಆಂಧ್ರಪ್ರದೇಶ, ಗೋವಾ, ತಮಿಳುನಾಡು, ಪುದುಚೆರಿ, ಕರ್ನಾಟಕ, ಮಹಾರಾಷ್ಟ್ರ ಮತ್ತು ಗುಜರಾತ್ ನಲ್ಲಿ ಸಿಗಡಿ ಬೇಸಾಯವನ್ನು ಮಾಡಲು ಸೂಕ್ತ ಪರಿಸರವಿದೆ. 11 ಲಕ್ಷ ಹೆಕ್ಟೇರ್ ಗಿಂತ ಹೆಚ್ಚಿನ ಸಾಮರ್ಥ್ಯವಿದ್ದರೂ ಪ್ರಸ್ತುತ 1.2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಸಿಗಡಿ ಬೇಸಾಯವನ್ನು ಮಾಡುತ್ತಿದ್ದು ಸಾಮರ್ಥ್ಯಕ್ಕೆ ಅನುಗುಣವಾಗಿ ಕಾರ್ಯನಿರ್ವಹಣೆ ಆಗುತ್ತಿಲ್ಲ.

ಸರ್ಕಾರದ ಉತ್ತೇಜನ

- ಮೀನುಗಾರಿಕೆ ಮತ್ತು ಜಲಚರ ಕೃಷಿ ಮೂಲಸೌಕರ್ಯ ಅಭಿವೃದ್ಧಿ ನಿಧಿ.
- ನೀಲಿ ಕ್ರಾಂತಿ.
- ಕಿಸಾನ್ ಕ್ರೆಡಿಟ್ ಕಾರ್ಡ್ ವಿಸ್ತರಣೆ.
- ಸಾಗರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ.





ಇತ್ತೀಚೆಗೆ ಚೆನ್ನೈನಲ್ಲಿ ನಡೆದ ಪ್ರಸಿದ್ಧ ಕಲಾ ಪ್ರದರ್ಶನದಲ್ಲಿ 350 ವರ್ಷಗಳ ಇತಿಹಾಸವಿರುವ ಪಿಚ್ವಾಯಿ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು. ಪಿಚ್ವಾಯಿ ಕಲೆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಪಿಚ್ವಾಯಿ ಕಲೆ

ಯು.ಟಿ.ಆಯಿಶಾ ಫರ್ಝಾನ

ಪಿಚ್ವಾಯಿ ಕಲಾಪ್ರಕಾರವು ರಾಜಸ್ಥಾನದ ನಾಥದ್ವಾರದಲ್ಲಿ ಪ್ರಚಲಿತದಲ್ಲಿರುವ ಒಂದು ವಿಶಿಷ್ಟ ಕಲೆಯಾಗಿದೆ. ಇದು ಧಾರ್ಮಿಕ ಪರಂಪರೆಯ ಸಾಂಪ್ರದಾಯಿಕ ಚಿತ್ರಕಲೆ.

'ಪಿಚ್ವಾಯಿ' ಎಂಬ ಪದವು ಸಂಸ್ಕೃತ ಪದಗಳಾದ 'ಪಿಚ್' (ಹಿಂಭಾಗ) ಮತ್ತು 'ವೈಸ್'(ನೇತಾಡುವಿಕೆ) ಗಳಿಂದ ಮೂಡಿದ್ದು, ಇದು ನಾಥದ್ವಾರ ದೇವಸ್ಥಾನಗಳಲ್ಲಿ ಕೃಷ್ಣನ ಶ್ರೀನಾಥಜಿ ರೂಪವನ್ನು ಅಲಂಕರಿಸುವ ಹಿನ್ನೆಲೆಯಲ್ಲಿ ಬಳಸುವ ಕಲೆಯಾಗಿದೆ.

ಸುದೀರ್ಘ ಇತಿಹಾಸವಿರುವ ಈ ಚಿತ್ರಕಲೆಯು 17ನೇ ಶತಮಾನದ್ದು. ಪುಷ್ಟಿ ಮಾರ್ಗ ಅಥವಾ ವಲ್ಲಭ ಸಂಪ್ರದಾಯ ಪಂಥದ ಭಕ್ತಿ ಆಚರಣೆಗಳ ಭಾಗವಾಗಿದೆ.

ಈ ಕಲೆಯ ಲಕ್ಷಣಗಳು

ಗಾಢ ಬಣ್ಣಗಳು: ಪಿಚ್ವಾಯಿ ಕಲಾಕೃತಿಗಳು ಗಾಢಬಣ್ಣಕ್ಕೆ ಹೆಸರುವಾಸಿಯಾಗಿವೆ. ಸಾಮಾನ್ಯವಾಗಿ ನೈಸರ್ಗಿಕವಾದ ಗಾಢ ನೀಲಿ, ಕೆಂಪು, ಕೇಸರಿ ಮತ್ತು ಹೊನ್ನಿನ ಬಣ್ಣಗಳನ್ನು ಬಳಸಲಾಗುತ್ತದೆ.

ಧಾರ್ಮಿಕ ಅನುಭೂತಿ : ಪಿಚ್ವಾಯಿ ಕಲೆಗಳಲ್ಲಿ ಪ್ರಧಾನವಾಗಿ ಶ್ರೀಕೃಷ್ಣನ ಜೀವನದ ಕಥೆಗಳನ್ನು ರೂಪಿಸಲಾಗುತ್ತದೆ. ವಿವಿಧ ರಾಸ್ ಲೀಲಾಗಳು (ದೈವಿಕ ನೃತ್ಯಗಳು) ಮತ್ತು ಬಾಲ್ಯ ಮತ್ತು ಯೌವನದ ಪ್ರಸಂಗಗಳನ್ನು ಬಣ್ಣಗಳಲ್ಲಿ ನಿರೂಪಿಸಲಾಗುತ್ತದೆ. ಹಲವು ದೇಗುಲಗಳಲ್ಲಿ ಶ್ರೀಕೃಷ್ಣ ಪರಮಾತ್ಮನ ಬದುಕನ್ನು ವಿವರಿಸುವ ಚಿತ್ರವಾಗಿಯೂ ಬಳಕೆಯಾಗುತ್ತದೆ.



ಸಂಕೀರ್ಣ ವಿವರಗಳು : ಪಿಚ್ವಾಯಿ ಚಿತ್ರಗಳಲ್ಲಿ ಸಂಕೀರ್ಣ ವಿವರಗಳಿಗೆ ಹೆಚ್ಚು ಒತ್ತು ನೀಡಲಾಗುತ್ತದೆ. ವೇಷಭೂಷಣ, ಆಭರಣಗಳು ಮತ್ತು ದೇವತಾಪುರುಷ ಹಾಗೂ ಸ್ತ್ರೀಯರ ಭಾವಾಭಿವ್ಯಕ್ತಿಯನ್ನು ಸೂಕ್ಷ್ಮವಾಗಿ ಹಿಡಿದಿಡಲಾಗುತ್ತದೆ. ಇದನ್ನು ರಚಿಸುವ ಕಲಾವಿದರು ಆಧ್ಯಾತ್ಮಿಕ ಭಾವಕ್ಕೆ ಹೆಚ್ಚು ಒತ್ತು ನೀಡುತ್ತಾರೆ.

ಬಟ್ಟೆಯ ಬಳಕೆ : ಪಿಚ್ವಾಯಿ ಕಲೆಯನ್ನು ವಿಶಿಷ್ಟವಾಗಿ ಬಟ್ಟೆಯ ಮೇಲೆ ಅದರಲ್ಲಿಯೂ ಹತ್ತಿ ಅಥವಾ ರೇಷ್ಮೆ ಬಟ್ಟೆಗಳ ಮೇಲೆ ಬಿಡಿಸಲಾಗುತ್ತದೆ. ಇಲ್ಲಿ ಬಟ್ಟೆಯೇ ಕ್ಯಾನ್ವಾಸ್. ಈ ಕಲೆಯಲ್ಲಿ ಬಳಸುವ ಬಟ್ಟೆಗಳು ಸಾಕಷ್ಟು ದೊಡ್ಡದಾಗಿದ್ದು ಇವುಗಳನ್ನು ಮುಖ್ಯ ದೇವತೆಯ ಹಿಂದೆ ದೇವಾಲಯದ ಗೋಡೆಗಳ ಮೇಲೆ ನೇತುಹಾಕುವಂತೆ ವಿನ್ಯಾಸಗೊಳಿಸಲಾಗಿರುತ್ತದೆ.

ಭಕ್ತಿ ಕಲೆ: ಪಿಚ್ವಾಯಿ ಚಿತ್ರಗಳು ಕೇವಲ ಒಂದು ಕಲಾಪ್ರಕಾರವಾಗಿರದೇ ಅವು ಪುಷ್ಟಿ ಮಾರ್ಗ ಪಂಥದ ಭಕ್ತಿ ಆಚರಣೆಗಳ ಅವಿಭಾಜ್ಯ ಅಂಗವಾಗಿದೆ. ಹಬ್ಬಗಳು, ಆಚರಣೆಗಳು ಮತ್ತು ನಿರ್ದಿಷ್ಟ ಋತುಗಳನ್ನು ಆಚರಿಸಲು ಅವುಗಳನ್ನು ಬಳಸಲಾಗುತ್ತದೆ.

ಸಂಕೇತ ಸಾರ: ಪಿಚ್ವಾಯಿ ಕಲೆಯು ಮುಖ್ಯವಾಗಿ ಹಲವು ಸಂಕೇತಗಳ ಸಾರವಾಗಿದೆ. ಬಣ್ಣಗಳಲ್ಲಿ ಸಂಕೇತವನ್ನು ಬಳಸಿ ನಿರ್ದಿಷ್ಟ ಕಥೆಯನ್ನು ನಿರೂಪಿಸುವ ಕುಸುರಿಯಾಗಿದೆ. ಕೃಷ್ಣ ಪರಮಾತ್ಮನ ಬಾಲ್ಯದ ಲೀಲಾವಳಿಗಳಿಂದ ಹಿಡಿದು ಕೃಷ್ಣ ರಾಧೆಯ ದೈವಿಕ ಪ್ರೇಮದ ಹಲವು ಪ್ರಸಂಗಗಳನ್ನು ಈ ಕಲೆಯಲ್ಲಿ ನಿರೂಪಿಸಲಾಗಿದೆ.

ಕಲಾತ್ಮಕ ಅಭಿವ್ಯಕ್ತಿಯಾಗಿರದೆ ಆರಾಧನೆಯ ಪ್ರಬಲ ಮಾಧ್ಯಮವಾಗಿಯೂ ಪಿಚ್ವಾಯಿ ಕಲೆ ಬೆಳೆದು ನಿಂತಿದೆ. ನಾಥದ್ವಾರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದಿಗೂ ಪ್ರತಿಭಾವಂತ ಕಲಾವಿದರು ಈ ಶ್ರೀಮಂತ ಕಲಾಪರಂಪರೆಯನ್ನು ಸಂರಕ್ಷಿಸಿ, ಮುನ್ನಡೆಸುತ್ತಿದ್ದಾರೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Unit-2 PROSE

There's a Girl by the Tracks!

Task 3: Prepare a questionnaire.

Imagine you are a correspondent of English daily and you have to interview the following persons on the issue 'Safety measures taken with regard to traffic and the public response'.

1.Superintendent of police
2.Traffic Inspector and
3. Local MLA

Prepare a set of questions to interview each one of the above. One example is done for you.

Note: Only questions for the interview are given, not the reply.

Ans:-

2) Traffic Inspector: *(.....Contd)*

1.It is your duty to stop a driver for a traffic offence and book him for it. While booking an offence you check for any other offence like carrying a valid license and registration papers. That's fine. But why do you spend your time in routinely checking vehicle papers, which is the job of RTO?

Sir / Madam on behalf of our media I'm highly thankful to you

3) Local MLA:

Good morning Sir / Madam. I'm Shekhar. I'm a reporter from English daily. Let me thank you for giving my media your appointment for interview from 9am to 9.45am today on the issue of 'Safety measures taken with regard to traffic and the public response'.

Let me begin with my first question.

1.More and more number of vehicles being added to city roads every day even in areas connected by Metro rail while width of the road remains small and unable to accommodate them safely. How do you wish to tackle this?

2.Why is the average speed of vehicles even on major trunk roads in eight directions of city is lowest in India? How do you propose to raise it to global standard?

3.Why are you allowing multi storey buildings and commercial establishments on roads having small width that too in spite of orders prohibiting such practice by Supreme Court of India?

4.Your government runs media campaign and put up bill boards to follow traffic lanes. To follow discipline of lane traffic we need minimum three lanes-left, straight and right. Very few major trunk roads have such three lanes. But unfortunately ill planning of metro rail has taken away one lane below their stations. How do you wish to correct it? How soon do you wish ensure three lanes on all roads?

5.Corner sites obstruct view of driver and slow traffic at junctions. Also since such sites have shops on them, leads to illegal parking which slows traffic. Can you legislate to remove corner sites as in the developed countries?

6. Do wish to increase the quantum of punishment and penalties for traffic offences to make them effective as deterrence?

Sir / Madam on behalf of our media I'm highly thankful to you.

Learn grammar through communication

Task 1: Read the following paragraph and carefully observe the words underlined. One word is struck off. Consult your teacher or a grammar book and know the reason.

Everybody ~~know~~ / knows slow and steady ~~win~~ / wins the race'. Somebody ~~try~~ / tries to move slowly but some people want / ~~wants~~ to move at a faster pace. One of the students in my class is / ~~are~~ Jairaj. He is very industrious and energetic. He feels that in India everybody ~~want~~ / wants to get success, but a few work / ~~works~~ diligently. They opine / ~~opines~~ that "Time and tide ~~wait~~ / waits for none. So everybody ~~need~~ / needs to work round the clock to make India stronger and better.

Task 2: Choose the correct verb out of the two given in brackets:

1. Neither he nor you ---------- wrong. (Is /are)
2. His father and uncle --------- their own business. (Has/ have)
3. The first innings -------- very interesting. (Was/were)
4. Either Amrutha or her friends --------taken it. (Has / have)
5. Every one of the boys -------------- sitting silent in the hall. (Was/were)
6. Every leaf -------- fallen from this tree. (Has/ have)
7. Each of the boys ------------ done his home work. (Has / ~~have~~)
8. He, as well as you, ---------- intelligent. (Is/are)
9. Bread and butter ------------- his daily diet. (Were/was)
10.Either you or he ---------- done it. (Has/have)
11.One of the boys---------- punished. (Was/were)
12.Neither the children nor their mothers --------- admitted to hospital. (Were / was).

Answer: Wrong answer is struck out in bracket.

1. Neither he nor you ---------- wrong. (~~Is~~ /are)
2.His father and uncle --------- their own business. (~~Has~~/ have)
3.The first innings -------- very interesting. (Was/~~were~~)
4.Either Amrutha or her friends --------taken it. (~~Has~~ / have)
5. Every one of the boys -------------- sitting silent in the hall. (Was/~~were~~)
6. Every leaf -------- fallen from this tree. (Has/ ~~have~~)
7. Each of the boys ------------ done his home work. (Has / ~~have~~)
8. He, as well as you, ---------- intelligent. (~~Is~~/are)
9. Bread and butter ------------- his daily diet. (~~Were~~/was)
10. Either you or he ---------- done it. (Has/~~have~~)
11. One of the boys---------- punished. (Was/~~were~~)
12. Neither the children nor their mothers --------- admitted to hospital. (Were / ~~was~~).

(Contd)

II PUC BIOLOGY

ಎಸ್ಸೆಸ್ಸೆಲ್ಸಿ- ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

REPRODUCTION
REPRODUCTIVE HEALTH

Answer the following

1) Give a brief note on the sexually transmitted diseases.

Ans:- (.........Contd)

Patients may become irritable and develop hallucinations. Motor areas of the cerebrum may be extensively damaged and hence the patient may be unable to control urine and bowel movements. The patients may develop liver and heart diseases also.

AIDS - Acquired immune deficiency syndrome, is caused by Human immuno deficiency virus (HIV). The virus enters the body through blood, semen and vaginal fluids. It destroys the antibody producing T – lymphocytes and cripples the immune system.

The following are the effects caused by this disease:- The victims are eventually killed by various diseases like - Chronic pneumonia, diarrhoea, infections which block the throat, lungs and intestine, cancer of skin and bone, swelling in the brain, destruction of brain tissue leading to loss of memory and personality changes.

Treatment for AIDS – there is no cure for AIDS, hence prevention is better than cure. Therefore awareness camps to educate people regarding the dangers of AIDS must be undertaken on a large scale by every organisation. Treatment for Gonorrhoea and Syphilis – Pencillin is the most effective drug and erythromycin, tetracycline, spiramycin etc., are other drugs.

2) Write a note on Trichomoniasis.

Ans:- Trichomoniasis – it is a sexually transmitted disease caused by tetraflagellate protozoan called *Trichomonas vaginalis.*

In females it causes foul smelling vaginitis with yellowish discharge, vulvar erythema and burning dysuria.

In males, the pathogen produces urethritis, epididymitis, prostatitis and burning dysuria.

Metronidazole is effective medicine.

3) Write a note on Chlamydia.

Ans:- Chlamydia - It is a sexually transmitted bacterial infection which also causes trachoma.

The pathogen is Chlamydia trachomatis. It is obligate intracellular parasite which passes through two stages, reticular body (for growth) and elementary body (for multiplication). The infection causes urethritis, epididymitis (with tenderness and pain), yellow mucous and pus, cervicitis, proctitis (rectal pain) and development of granulomatous masses (lymphogranuloma venereum).

Tetracycline, erythromycin, deoxycycline and azithromycin are useful drugs

4) Write a note on Genital Warts.

Ans:- Genital Warts - It is a sexually transmitted disease caused by *Human Papilloma Virus* (HPV). It produces warts over the skin, external genitalia and perianal area. They may aggregate. In women the warts may enter vagina and cervix. Podofilax (Podophyllum preparation), imiquimod and surgical removal of warts (through cauterization or cryosurgery) constitute the treatment.

5) Write a note on Genital Herpes.

Ans:- Genital Herpes - It is a sexually transmitted disease caused by Herpes Simplex virus. They cause vesiculopustular lesions and then clusters of reddish ulcers over external genitalia and perianal areas, swelling of inguinal lymph nodes, pain, vaginal and urethral discharges, dysuria, headache and malaise. Medicines are acyclovir, velacyclovir or famciclovir.

6) Write a note on Chancroid.

Ans:- Chancroid - it is a sexually transmitted infection that causes painful bleeding ulcers over the extrenal genitalia accompanied by swelling of nearby lymph nodes.

The disease is caused by bacterium Haemophilus ducreyi.

Drugs used in treatment are erythromycin, ciprofloxacin and ceftriaxone.

7) Mention some of the differences between Vasectomy and Tubectomy.

Ans:-

Sl. No	*Vasectomy*	*Tubectomy*
1.	It is a surgical sterilization technique for the males.	It is a surgical sterilization technique for the females.
2.	The two vasa deferentia are interrupted by giving cuts.	The two oviducts are interrupted by either ligation or cuts.
3.	Passage of sperms is prevented.	Passage of ova is prevented.

Fill in the blanks:-

1. India is the first country to introduce .... health care as a social goal in ....
Ans:- Reproductive, 1951

2. RCH was launched in India in ....
Ans:- 1997

3. Sex determination in amniocentesis is carried out through observation of .... chromosomes.
Ans:- Sex

4. Couple protection is presently .... in India. **Ans:-** 55%

5. Immediately after parturition, women experience .... amoenorrhoea.
Ans:- lactational

6. LNG - 20 is .... releasing IUD.
Ans:- harmone

Write short notes on:-

1] Infertility in Males.

Ans:- Infertility in Males - Semen of a fertile male is 3 - 4 ml per ejaculation with a sperm count of over 200 million, mostly motile, having proper fructose content and fluidity which is deposited high in the vagina.

Any defect in sperm count, sperm structure, sperm motility or seminal fluid leads to infertility. ***(Contd)***

ಜನಪ್ರಿಯ ಕೆಸಿಆರ್‌ಗೆ ಭರವಸೆಗಳೇ ಭಾರ




ಹೈದರಾಬಾದ್: ಕಾರು ಚಾಲಕ ಜಾವೇದ್, ನನಗೆ ಏನನ್ನೋ ತೋರಿಸುವ ತವಕದಲ್ಲಿದ್ದರು. ಅದು ಸಮೀಪಿಸುತ್ತಲೇ 'ಇದೇ ನೋಡಿ ಹೈದರಾಬಾದ್ ಔಟರ್ ರಿಂಗ್ ರೋಡ್. ಇದರ ಕೆಲಸ ಪೂರ್ಣವಾದರೆ ಟ್ರಾಫಿಕ್ ಸಮಸ್ಯೆಯೇ ಇಲ್ಲವಾಗುತ್ತದೆ' ಎಂದು ಖುಷಿಯಿಂದಲೇ ಹೇಳಿದರು.

ಕಾರು ಸಾಗುತ್ತಲೇ ಇತ್ತು, ಜಾವೇದ್ ಮಾತೂ ಕೂಡ. ಇಲ್ಲಿನ ರಸ್ತೆಯಲ್ಲಿ ಗುಂಡಿಗಳು ಏನಾದರು ಕಾಣಿಸಿತೆ? ಟ್ರಾಫಿಕ್ ಪೊಲೀಸರು ಅನಗತ್ಯವಾಗಿ ಕಿರಿಕಿರಿ ಮಾಡಿದ್ದನ್ನು ಕಂಡೀರಾ? ಅದೋ ಅಲ್ಲಿ ನೋಡಿ, ಅದು ಮಿಷನ್ ಭಗೀರಥ ವಾಟರ್ ಟ್ಯಾಂಕ್. ಈ ಯೋಜನೆಯಿಂದಾಗಿಯೇ ತೆಲಂಗಾಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ' ಎಂದು ನೇರ ವೀಕ್ಷಕ ವಿವರಣೆಯನ್ನು ಕೊಡುತ್ತಿದ್ದರು.

ಅಷ್ಟರಲ್ಲಿ ಪಟಾನ್‌ಚೆರು ಗ್ರಾಮ ಸಿಕ್ಕಿತು. ಅಲ್ಲಿನ ಹೇರ್‌ಕಟ್ ಸಲೂನ್ ಮಾಲೀಕ ಮಲ್ಲೇಶ್ ಮಾತನಾಡಲು ಉತ್ಸಾಹ ತೋರಿಸಿದರು. 'ಕೆಸಿಆರ್ ಅಂಥ ನಾಯಕನನ್ನು ಕಾಂಗ್ರೆಸ್‌ನಲ್ಲಿ ತೋರಿಸಿ, ನೋಡೋಣ' ಎಂದು ಸವಾಲು ಹಾಕಿದರು.

ತಿರುಗಾಟದ ಸಂದರ್ಭದಲ್ಲಿ ರೈತ ಬಂಧು, ದಲಿತ ಬಂಧು, ಬಿ.ಸಿ.ಬಂಧು, ಅಲ್ಪಸಂಖ್ಯಾತರ ಬಂಧು ಹೆಸರುಗಳು ಜನರಿಂದ ಹೆಚ್ಚಾಗಿ ಕೇಳಿಬರುತ್ತಿದ್ದವು. ಈ ಕುರಿತು ವಿವರವನ್ನು ಕೆದಕುತ್ತಾ ಹೋದಾಗ, ಪಹಣಿ ಹೊಂದಿರುವ ರೈತನ ಪ್ರತಿ ಎಕರೆಗೆ ಮುಂಗಾರು ಮತ್ತು ಹಿಂಗಾರು ಸೇರಿ ವರ್ಷಕ್ಕೆ ₹10 ಸಾವಿರ ಕೊಡಲಾಗುತ್ತದೆ. ದಲಿತ ಬಂಧು ಯೋಜನೆ ಅಡಿಯಲ್ಲಿ ಪ್ರತಿ ಕುಟುಂಬಕ್ಕೆ ₹ 10 ಲಕ್ಷ ಅನುದಾನ, ಅಲ್ಪಸಂಖ್ಯಾತರ ಬಂಧು ಅಡಿಯಲ್ಲಿ ಕುಟುಂಬಕ್ಕೆ ₹ 1 ಲಕ್ಷ, ಬಿ.ಸಿ. ಬಂಧುವಿನಲ್ಲಿ ಹಿಂದುಳಿದ 15 ಜಾತಿಗಳ ಕುಟುಂಬಗಳಿಗೆ ತಲಾ ₹ 1 ಲಕ್ಷ ನೀಡಲಾಗುತ್ತಿದೆ ಎನ್ನುವ ಮಾಹಿತಿ ಸಿಕ್ಕಿತು. ರೈತರಿಗೆ ದಿನಪೂರ್ತಿ ತ್ರಿಫೇಸ್ ಉಚಿತ ವಿದ್ಯುತ್, ವೃದ್ಧರಿಗೆ ₹ 2 ಸಾವಿರ, ಅಂಗವಿಕಲರಿಗೆ ₹ 4 ಸಾವಿರ ಪಿಂಚಣಿ ನೀಡುತ್ತಿರುವುದನ್ನು ಹೆಚ್ಚಿನವರು ನೆನಪಿಸಿಕೊಂಡರು. ಇವೆಲ್ಲವೂ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಜಾರಿಗೆ ತಂದ ಅತ್ಯಂತ ಜನಪ್ರಿಯ ಯೋಜನೆಗಳು.


ಕೆ. ಚಂದ್ರಶೇಖರ ರಾವ್

ಸದಾಶಿವಪೇಟ ಬಳಿ ಹತ್ತಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ವೆಂಕಟೇಶ ರೆಡ್ಡಿ, ರೈತ ಬಂಧು ಯೋಜನೆಯನ್ನು ಮೆಚ್ಚುತ್ತಲೇ ತಕರಾರು ತೆಗೆದರು. 'ರೈತ ಬಂಧು ಯೋಜನೆಯಲ್ಲಿ ಸಣ್ಣ ರೈತರಿಂದ ಹಿಡಿದು ಸಾವಿರಾರು ಎಕರೆ ಇರುವ ದೊಡ್ಡ ರೈತರಿಗೂ ಹಣ ನೀಡಲಾಗುತ್ತಿದೆ. ಇದು ಸರಿಯಲ್ಲ' ಎಂದರು. ತಾವು ಯಾವ ಪಕ್ಷಕ್ಕೂ ಸೇರಿದವರಲ್ಲ ಎಂದು ಹೇಳಿದರೂ ಅವರ ಮೊಬೈಲ್ ಹಿಂಬದಿಗೆ ಅಂಟಿಸಿದ್ದ ಸ್ಟಿಕರ್‌ನಲ್ಲಿ ಕೆಸಿಆರ್ ಚಿತ್ರವಿತ್ತು.

ಹೈದರಾಬಾದ್‌ನ ಜನರಿಗೆ ಕೆಸಿಆರ್ ಬಗೆಗೆ ಅಪಾರ ಒಲವಿದೆ. ಸಣ್ಣ ವ್ಯಾಪಾರಿಯಿಂದ ಉದ್ಯಮಿಗಳ ವರೆಗೂ ಒಳ್ಳೆಯ ಮಾತುಗಳನ್ನು ಆಡುತ್ತಾರೆ. ದಿಢೀರ್ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಕೆಸಿಆರ್ ಎತ್ತಿದ ಕೈ. ಆದ್ದರಿಂದಲೇ ಉದ್ಯಮಿಗಳು ಹೈದರಾಬಾದ್ ಕಡೆಗೆ ವಲಸೆ ಬರುತ್ತಿದ್ದಾರೆ. ಹೈಟೆಕ್ ಸಿಟಿಯಲ್ಲಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಬಾಲು ಮತ್ತು ಸಾಯಿ ಅವರು ಕೆಸಿಆರ್ ಕೆಲಸ ಮೆಚ್ಚುತ್ತಾ, ಅವರ ಪುತ್ರ ಕೆ.ಟಿ.ರಾಮರಾವ್ ಕುರಿತು 'ಅವರು ಬುದ್ಧಿವಂತರು, ದೂರದೃಷ್ಟಿ ಉಳ್ಳವರು, ಮುಖ್ಯಮಂತ್ರಿ ಆಗಲು ಅರ್ಹತೆ ಇರುವವರು' ಎಂದು ಹೊಗಳಿಕೆಯ ಮಹಾಪೂರವನ್ನೇ ಹರಿಸಿದರು.

'ಅಭಿವೃದ್ಧಿ ಆಗಿಯೇ ಇಲ್ಲ ಎನ್ನುವುದಿಲ್ಲ. ಆದರೆ, ಸರ್ಕಾರದ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ತಲುಪಿಲ್ಲ. ಪಕ್ಷದ ಮುಖಂಡರು, ಕಾರ್ಯಕರ್ತರು, ಬೆಂಬಲಿಗರಿಗೆ ಮಾತ್ರ ಸಿಕ್ಕಿವೆ' ಎಂದು ಪದವೀಧರ ಅಬ್ದುಲ್ ರಶೀದ್ ದೂರಿದರು. ಕಳೆದ ಚುನಾವಣೆಯಲ್ಲಿ ಬಿಆರ್‌ಎಸ್ ಪಕ್ಷದಲ್ಲಿದ್ದ ಇವರು, ಈಗ ಕಾಂಗ್ರೆಸ್ ಪರ ಕೆಲಸ ಮಾಡುತ್ತಿದ್ದಾರೆ.

ಜೆಡ್ಚರ್ಲ ಜಿಲ್ಲಾ ಕೇಂದ್ರದ ಎಪಿಎಂಸಿ ಆವರಣದಲ್ಲಿ ಗುಂಪಾಗಿ ಕುಳಿತಿದ್ದ ರೈತರು ರಾಜಕೀಯ ಚರ್ಚೆಯಲ್ಲಿ ಮುಳುಗಿದ್ದರು. ನಾವು ಅವರೊಂದಿಗೆ ಸೇರಿಕೊಂಡೆವು. ಅವರು ಬಿಆರ್‌ಎಸ್ ಬಗೆಗೆ ಒಳ್ಳೆಯ ಮಾತುಗಳನ್ನು ಆಡಿದರು. ಕಳೆದ ಎರಡೂ ಚುನಾವಣೆಯಲ್ಲಿ ಆ ಪಕ್ಷಕ್ಕೇ ಮತ ಹಾಕಿದ್ದರು, ಆದರೀಗ ಕಾಂಗ್ರೆಸ್‌ಗೆ ಮತ ಹಾಕುವುದಾಗಿ 'ಹಸ್ತ'ವನ್ನು ತೋರಿಸಿದರು. 'ಏಕೆ' ಎಂದು ಕೇಳಿದರೆ, 'ಕಾಂಗ್ರೆಸ್‌ಗೂ ಒಂದು ಅವಕಾಶ ಕೊಟ್ಟು ನೋಡೋಣ, ಬದಲಾವಣೆಗಾಗಿ ಬದಲಾವಣೆ' ಎಂದು ನಗುತ್ತಾ ಹೇಳಿದರು. ಎಪಿಎಂಸಿ ಹೊರಗೆ ಹತ್ತಾರು ಮಹಿಳೆಯರು ತರಕಾರಿ ಮಾರುತ್ತಾ ಕುಳಿತಿದ್ದರು. ಅವರಲ್ಲಿ ಶಾರದಾ ಹಾಗೂ ಪಾರ್ವತಿ ಮಾತನಾಡಲು ಒಪ್ಪಿದರು. 'ತೆಲಂಗಾಣ ನಮ್ಮದು ಎನ್ನುವ ಕಾರಣಕ್ಕಾಗಿ ಎರಡೂ ಬಾರಿ ಕಾರಿಗೆ (ಬಿಆರ್‌ಎಸ್ ಪಕ್ಷದ ಚಿಹ್ನೆ) ಮತ ಹಾಕಿದ್ದೆವು. ಆದರೆ, ನಮ್ಮ ಬದುಕು ಉತ್ತಮವಾಗಲಿಲ್ಲ. ಅರ್ಜಿ ಕೊಟ್ಟು, ಕೊಟ್ಟು ಸಾಕಾಯಿತು. ಈ ಬಾರಿ ಕಾಂಗ್ರೆಸ್‌ಗೆ ಮತ ಹಾಕುತ್ತೇವೆ' ಎಂದು ನೇರವಾಗಿ ಹೇಳಿದರು.

ತೆಲಂಗಾಣ ರೈತರು ದಶಕಗಳಿಂದಲೂ ಏತ ನೀರಾವರಿ ಯೋಜನೆಗಾಗಿ ಹೋರಾಟ ಮಾಡುತ್ತಲೇ ಇದ್ದರು. ಕೆಸಿಆರ್ ಅಧಿಕಾರಕ್ಕೆ ಬಂದ ಮೇಲೆ ಗೋದಾವರಿ ನದಿಗೆ 'ಕಾಳೇಶ್ವರ ಬ್ಯಾರೇಜ್' ನಿರ್ಮಿಸಿದರು. ಇದು ವಿಶ್ವದಲ್ಲೇ ಬೃಹತ್ ಏತ ನೀರಾವರಿ ಯೋಜನೆ. ಇದಕ್ಕಾಗಿ ಖರ್ಚಾಗಿದ್ದು ಸುಮಾರು ₹ 1 ಲಕ್ಷ ಕೋಟಿ. ಈ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎನ್ನುವ ಆರೋಪವನ್ನು ವಿರೋಧ ಪಕ್ಷಗಳು ಮಾಡುತ್ತಲೇ ಇದ್ದವು. ಜನರು ಇದನ್ನು 'ರಾಜಕೀಯ ಆರೋಪ' ಎಂದು ನಿರ್ಲಕ್ಷಿಸಿದ್ದರು. ಆದರೆ, ಒಂದು ತಿಂಗಳ ಹಿಂದೆ ಮೇಡಿಗಡ್ಡ ಬಳಿ ಬ್ಯಾರೇಜ್‌ನ ಮೂರು ಪಿಲ್ಲರ್‌ಗಳು ಕುಸಿದವು. ಆನಂತರ, ಈ ಯೋಜನೆಯು ಕೆಸಿಆರ್ ಕುಟುಂಬಕ್ಕೆ ಎಟಿಎಂ ಆಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾಡುತ್ತಿದ್ದ ಆರೋಪ ನಿಜ ಎನ್ನುವ ಮಾತು ಕಾಳ್ಗಿಚ್ಚಿನಂತೆ ಹಬ್ಬಿದೆ. ಇದು ಚುನಾವಣೆಯ ಪ್ರಮುಖ ವಿಷಯವಾಗಿ ಹೊರಹೊಮ್ಮಿದೆ.

ಇದು ಅವಿಭಜಿತ ಆಂಧ್ರಪ್ರದೇಶ ಅಸ್ತಿತ್ವದಲ್ಲಿದಾಗಿನ ಮಾತು. ತೆಲಂಗಾಣ ವ್ಯಾಪ್ತಿಯಲ್ಲಿದ್ದ ಹೈದರಾಬಾದ್‌ನಿಂದ ಬೊಕ್ಕಸಕ್ಕೆ ಹೆಚ್ಚು ಹಣ ಬರುತ್ತಿತ್ತು. ಆದರೆ, ಆಂಧ್ರಪ್ರದೇಶ ಸರ್ಕಾರ ಕರಾವಳಿ ಮತ್ತು ರಾಯಲುಸೀಮೆ ಪ್ರದೇಶಕ್ಕೆ ಹೆಚ್ಚು ಅನುದಾನ ಕೊಡುತ್ತಿತ್ತು. ಇದು ತೆಲಂಗಾಣ ಭಾಗದ ಜನರ ಆಕ್ರೋಶಕ್ಕೆ ಕಾರಣವಾಗಿತ್ತು, ಅಲ್ಲದೇ ತಮ್ಮ ಬೊಕ್ಕಸದ ಹಣ ನ್ಯಾಯಯುತವಾಗಿ ತಮಗೇ ಧಕ್ಕಬೇಕು ಎನ್ನುವ ಹಕ್ಕೊತ್ತಾಯವಾಗಿತ್ತು.

ಆದರೆ, ತೆಲಂಗಾಣ ರಾಜ್ಯ ರಚನೆಯ ನಂತರ 'ಬೊಕ್ಕಸದ ಹಣ ಕೆಸಿಆರ್ ಕುಟುಂಬ ಮತ್ತು ಪಕ್ಷದ ನಾಯಕರೇ ಕಬಳಿಸುತ್ತಿದ್ದಾರೆ. ಇದರಿಂದ ತಮಗೇನೂ ಅನುಕೂಲವಾಗಿಲ್ಲ' ಎನ್ನುವ ಸಿಟ್ಟು ವಿಪರೀತವಾಗಿ ಕಂಡುಬರುತ್ತಿದೆ. ಭೋಂಗಿರ್‌ನಲ್ಲಿ ಸಿಕ್ಕ ಶ್ರೀನಿವಾಸ್ 'ಬಂಧು ಯೋಜನೆಗಳಿಂದ ಶಕ್ತಿ ಬಂದಿದ್ದು, ಅಧಿಕಾರಸ್ಥರ ಬಂಧುಗಳಿಗೆ ಮಾತ್ರ' ಎಂದು ಹೇಳಿದ್ದು ಇದೇ ಕಾರಣಕ್ಕಾಗಿ.

ಕೆಸಿಆರ್, ತೆಲಂಗಾಣ ಪ್ರತ್ಯೇಕ ಹೋರಾಟ ಸಂದರ್ಭದಲ್ಲಿ ಸರ್ಕಾರದಲ್ಲಿ ಖಾಲಿ ಇರುವ ಗ್ರೂಪ್-1, ಗ್ರೂಪ್-2 ರ ಹುದ್ದೆಗಳನ್ನು ಪ್ರತಿವರ್ಷ ಭರ್ತಿ ಮಾಡುವುದಾಗಿ ವಾಗ್ದಾನ ಮಾಡಿದ್ದರು. ತೆಲಂಗಾಣ ರಾಜ್ಯ ಉದಯವಾಗಿ ಹತ್ತು ವರ್ಷಗಳಾಗಿವೆ. ಆದರೆ, ಪೂರ್ಣವಾಗಿ ತುಂಬಿಲ್ಲ. ಗ್ರೂಪ್-1 ಹುದ್ದೆಗೆ ಪರೀಕ್ಷೆ ನಡೆಸಲಾಯಿತು. ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಅದನ್ನು ರದ್ದುಪಡಿಸಲಾಯಿತು. ಆನಂತರ ನಡೆದ ಮರು ಪರೀಕ್ಷೆ ಕ್ರಮಬದ್ಧವಾಗಿಲ್ಲ ಎನ್ನುವ ಕಾರಣಕ್ಕೆ ಅದನ್ನೂ ರದ್ದುಪಡಿಸಲಾಯಿತು. 13 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಾಗಿ ಭರವಸೆ ಕೊಡಲಾಗಿತ್ತು. ಆದರೆ, 5 ಸಾವಿರ ಶಿಕ್ಷಕರ ಹುದ್ದೆಗಳಿಗೆ ಮಾತ್ರ ನೋಟಿಫಿಕೇಶ್ ಹೊರಡಿಸಲಾಯಿತು. ಇವೆಲ್ಲ ಕಾರಣಗಳಿಂದ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳು ಭ್ರಮನಿರಶನಗೊಂಡಿದ್ದಾರೆ.

ವರಂಗಲ್‌ನಲ್ಲಿ ಸಿಕ್ಕ ಸರ್ಕಾರಿ ನೌಕರರೊಬ್ಬರು 'ಮತಗಳಿಸುವ ಸಲುವಾಗಿ ಹತ್ತಾರು ಯೋಜನೆಗಳನ್ನು ಮುಖ್ಯಮಂತ್ರಿ ಘೋಷಿಸಿಬಿಟ್ಟಿದ್ದಾರೆ. ಅವುಗಳಿಗೆ ಹಣ ಹೊಂದಿಸಲು ನಮಗೆ ಸಂಬಳವನ್ನು ತಡವಾಗಿ ಕೊಡಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು. ಸಂಗಾರೆಡ್ಡಿ ನಗರದ ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಯುವತಿಯೊಬ್ಬರು, 'ಬಿ.ಇಡಿ ಮಾಡಿದ್ದೇನೆ. ಉದ್ಯೋಗ ಇಲ್ಲದೇ ಇಲ್ಲಿ ಕೆಲಸ ಮಾಡುತ್ತಿದ್ದೇನೆ' ಎಂದು ಸಿಟ್ಟಾದರು.

ದಲಿತ ಬಂಧು, ಬಿ.ಸಿ ಬಂಧು, ಅಲ್ಪಸಂಖ್ಯಾತರ ಬಂಧು, ಡಬಲ್ ಬೆಡ್‌ರೂ ಮನೆ ಹಾಗೂ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಆಯ್ಕೆ ಅಧಿಕಾರವನ್ನು ಶಾಸಕರಿಗೆ ಕೊಡಲಾಗಿದೆ. ಹಲವು ಶಾಸಕರು ಫಲಾನುಭವಿಗಳಿಂದ ಕಮಿಷನ್ ಪಡೆದು ಸವಲತ್ತು ಕೊಟ್ಟಿದ್ದಾರೆ ಎನ್ನುವ ಮಾತು ಜೋರಾಗಿ ಕೇಳಿಬರುತ್ತಿತ್ತು. ಕಮಿಷನ್ ಕಾರಣಕ್ಕಾಗಿ ಫಲಾನುಭವಿಗಳು ಸಿಟ್ಟಾಗಿದ್ದರೇ, ಅತ್ತ ಯೋಜನೆಯಿಂದ ವಂಚಿತರಾದ ಲಕ್ಷಾಂತರ ಮಂದಿ ಬೆಂಕಿ ಉಗುಳುತ್ತಿದ್ದಾರೆ. ಕನಿಷ್ಠ 30 ಕ್ಕೂ ಹೆಚ್ಚು ಶಾಸಕರ ವಿರುದ್ಧ ಆಕ್ರೋಶವಿದೆ. ಆದರೆ, ಅನುಭವಿ ರಾಜಕಾರಣಿ ಇದನ್ನು ಗ್ರಹಿಸುವಲ್ಲಿ ಸೋತು, ಅವರಿಗೇ ಟಿಕೆಟ್ ಕೊಟ್ಟಿದ್ದಾರೆ ಎಂಬ ಆಪಾದನೆ ಕೂಡ ಸುಲಭದಲ್ಲಿ ಕೇಳಿಬರುತ್ತಿತ್ತು.

'ಕೆಸಿಆರ್, ಸಿದ್ದಿಪೇಟ್‌ನಲ್ಲಿರುವ ತಮ್ಮ ತೋಟದಮನೆಯಿಂದಲೇ ಕೆಲಸ ಮಾಡುತ್ತಾರೆ. ಅವರದು ಒಂದು ರೀತಿ ವರ್ಕ್ ಫ್ರಂ ಹೋಮ್' ಎಂದು ವ್ಯಂಗ್ಯದ ಧಾಟಿಯಲ್ಲಿ ಪ್ರಸನ್ನ ಹೇಳಿದರು. ಇದಕ್ಕೆ ಕಾರಣವಿದೆ. ಕೆಸಿಆರ್ ಗೃಹ ಕಚೇರಿ, ಸಚಿವಾಲಯದಲ್ಲಿ ಕುಳಿತು ಕೆಲಸ ಮಾಡಿದ್ದೇ ಕಡಿಮೆ. ಹೀಗಾಗಿ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಪ್ರಚಾರ ಸಭೆಯಲ್ಲಿ ಕೆಸಿಆರ್ ಅವರನ್ನು ಶಾಶ್ವತವಾಗಿ ತೋಟದಮನೆಯಲ್ಲಿ ವಿಶ್ರಾಂತಿ ಪಡೆಯುವಂತೆ ಮಾಡಿ ಎಂದು ಜನರಿಗೆ ಕರೆ ನೀಡಿದ್ದಾರೆ.

'ನನ್ನ ಹೃದಯದ ಮಿಡಿತ, ರಕ್ತ ತೆಲಂಗಾಣಕ್ಕಾಗಿ ಮೀಸಲು' ಎಂದು ಕೆಸಿಆರ್ ಘೋಷಿಸಿದ್ದಾರೆ. ಆದರೆ, ಮತದಾರರು....?

ಕೆಸಿಆರ್, ಯೋಜನೆಗಳ ಮೇಲೆ ಯೋಜನೆಗಳನ್ನು ಘೋಷಿಸುತ್ತಾ ಹೋದರು. ಅನುಷ್ಠಾನದಲ್ಲಿ ಎಡವಿದರು. ಸರ್ಕಾರ ತಮಗೆ ಕೊಟ್ಟ ಮಾತು ಉಳಿಸಿಕೊಳ್ಳಲಿಲ್ಲ ಎನ್ನುವ ಭಾವನೆ ಜನರಲ್ಲಿ ಗಟ್ಟಿಯಾಗಿಬಿಟ್ಟಿದೆ. ❖


ಕೆ.ಟಿ. ರಾಮರಾವ್

ಕೇರಳ: ವಯನಾಡ್‌ನಿಂದ ರಾಹುಲ್ ಮತ್ತೆ ಅಖಾಡಕ್ಕೆ?

ಪ್ರಜಾವಾಣಿ ವಾರ್ತೆ


ರಾಹುಲ್ ಗಾಂಧಿ

ತಿರುವನಂತಪುರ: ಕೇರಳದ ಆಡಳಿತಾರೂಢ ಸಿಪಿಎಂ ಮತ್ತು ಇತರ ಎಡಪಕ್ಷಗಳು ವ್ಯಕ್ತಪಡಿಸಿರುವ ಕಳವಳದ ಹೊರತಾಗಿಯೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 2024ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ವಯನಾಡ್ ಕ್ಷೇತ್ರದಿಂದ ಸ್ಪರ್ಧಿಸಲು ತಯಾರಿ ನಡೆಸುತ್ತಿದ್ದಾರೆ.

'ವಯನಾಡ್ ನನಗೆ ಮನೆ ಇದ್ದಂತೆ' ಎಂದು ರಾಹುಲ್ ಬುಧವಾರವಷ್ಟೇ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಅಲ್ಲಿಯೇ ಸ್ಪರ್ಧಿಸುವ ಅವರ ಇಂಗಿತವು ಈ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ.

'ವಯನಾಡ್ ಕ್ಷೇತ್ರದ ಜೊತೆ ರಾಹುಲ್ ಗಾಢ ಸಂಬಂಧ ಹೊಂದಿದ್ದಾರೆ. ಕ್ಷೇತ್ರದಿಂದ ಹೊರನಡೆಯಲು ಅವರಿಗೆ ಯಾವುದೇ ಕಾರಣವೂ ಇಲ್ಲ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ತಾರಿಖ್ ಅನ್ವರ್ ಅವರು ಈಚೆಗಷ್ಟೇ ಹೇಳಿದ್ದರು.

ಆದರೆ, ಕೇರಳದಲ್ಲಿ ಕಾಂಗ್ರೆಸ್ ಮತ್ತು ಸಿಪಿಎಂ ನಡುವೆ ನೇರ ಹಣಾಹಣಿ ಇದೆ. ಅಲ್ಲದೇ ಈ ಎರಡೂ ಪಕ್ಷಗಳು ವಿರೋಧ ಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ'ದ ಸದಸ್ಯ ಪಕ್ಷಗಳಾಗಿವೆ. ಕೇರಳದಿಂದ ಅವರು ಸ್ಪರ್ಧಿಸುವುದರಿಂದ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಲಾಭವಾಗಬಹುದು. ಆದರೆ, ಬೇರೆ ರಾಜ್ಯಗಳಲ್ಲಿ 'ಇಂಡಿಯಾ' ಪಕ್ಷಗಳು ಬಿಜೆಪಿ ವಿರುದ್ಧ ಹೋರಾಡಲು ಅವರ ಸ್ಪರ್ಧೆಯಿಂದ ಹಿನ್ನಡೆಯಾಗಲಿದೆ ಎನ್ನಲಾಗಿದೆ.

ಕೇರಳದಲ್ಲಿ ಹೆಚ್ಚು ಸ್ಥಾನಗಳನ್ನು ಜಯಿಸುವ ಮೂಲಕ ರಾಷ್ಟ್ರ ರಾಜಕಾರಣದಲ್ಲಿ ಪ್ರಸ್ತುತತೆ ಕಾಪಾಡಿಕೊಳ್ಳಬೇಕು ಎಂಬುದು ಸಿಪಿಎಂ ಲೆಕ್ಕಾಚಾರವಾಗಿದೆ.

2019ರ ಲೋಕಸಭೆ ಚುನಾವಣೆಯಲ್ಲಿ ಅವರು ವಯನಾಡ್ ಕ್ಷೇತ್ರದಿಂದ ಸ್ಪರ್ಧಿಸುವುದನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸೇರಿ ಹಲವು ನಾಯಕರು ಕಟುವಾಗಿ ವಿರೋಧಿಸಿದ್ದರು.

ವಯನಾಡ್‌ನಲ್ಲಿ ಸ್ಪರ್ಧಿಸುವ ಕುರಿತು ರಾಹುಲ್ ನಿರ್ಧಾರ ಏನಾಗಿರುತ್ತದೆ ಎಂದು ಬಿಜೆಪಿ ಕೂಡ ಕಾತುರದಿಂದ ಕಾಯುತ್ತಿದೆ. ಒಂದು ವೇಳೆ ರಾಹುಲ್ ಅದೇ ಕ್ಷೇತ್ರದಿಂದ ಕಣಕ್ಕಿಳಿದರೆ, ಪ್ರಬಲ ಅಭ್ಯರ್ಥಿಯನ್ನು ಅವರೆದುರು ಕಣಕ್ಕಿಳಿಸಲು ಬಿಜೆಪಿ ಚಿಂತನೆ ನಡೆಸಿದೆ. ಅದಕ್ಕೆ ಪೀಠಿಕೆಯಾಗಿ ಕೇಂದ್ರ ಸಚಿವರು ಮತ್ತು ಬಿಜೆಪಿಯ ಹಿರಿಯ ನಾಯಕರು ಆಗಾಗ ವಯನಾಡ್‌ಗೆ ತೆರಳಿ ಕೇಂದ್ರದ ಯೋಜನೆಗಳಿಗೆ ಪ್ರಚಾರ ನೀಡುತ್ತಿದ್ದಾರೆ.

'ಕೇರಳಕ್ಕೆ ಬರುವುದು ನನಗೆ ಕೆಲಸದಂತೆ ಎನಿಸುವುದಿಲ್ಲ. ನನ್ನ ಕುಟುಂಬದವರನ್ನು ಮತ್ತು ಸ್ನೇಹಿತರನ್ನು ಭೇಟಿಯಾಗಲು ಮನೆಗೆ ಮರಳಿದಂತೆ ಎಂದು ಪರಿಗಣಿಸುತ್ತೇನೆ' ಎಂದು ರಾಹುಲ್ ಕೋಯಿಕ್ಕೋಡ್‌ನಲ್ಲಿ ಹೇಳಿದರು. ಮುಸ್ಲಿಂ ಲೀಗ್ ನಾಯಕ ದಿವಂಗತ ಪಿ. ಸೀದಿ ಹಾಜಿ ಅವರ ಪುಸ್ತಕ ಬಿಡುಗಡೆ ಬಳಿಕ ಅವರು ಮಾತನಾಡಿದರು.

ತೆಲಂಗಾಣ: ಇಂದು ಮತದಾನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಗುರುವಾರ ನಡೆಯಲಿರುವ ವಿಧಾನಸಭೆ ಚುನಾವಣೆಗೆ ತೆಲಂಗಾಣ ಸಜ್ಜಾಗಿದೆ. ಆಡಳಿತಾರೂಢ ಬಿಆರ್‌ಎಸ್, ಕಾಂಗ್ರೆಸ್ ಮತ್ತು ಬಿಜೆಪಿ ಕಣದಲ್ಲಿರುವ ಪ್ರಮುಖ ಪಕ್ಷಗಳು. ಹೈದರಾಬಾದ್‌ನ ಕೆಲವೆಡೆ ಎಐಎಂಐಎಂ ಕೂಡ ಸ್ಪರ್ಧಿಸಿದೆ.

ಒಟ್ಟು 119 ಸ್ಥಾನಗಳಿಗೆ ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ನಡೆಯಲಿದ್ದು 3.26 ಕೋಟಿ ಮತದಾರರು ಮತ ಹಾಕಲಿದ್ದಾರೆ. ರಾಜ್ಯದಾದ್ಯಂತ 35,655 ಮತಗಟ್ಟೆಗಳನ್ನು ನಿರ್ಮಿಸಲಾಗಿದೆ. 2.8 ಲಕ್ಷ ಸಿಬ್ಬಂದಿ ಚುನಾವಣಾ ಕರ್ತವ್ಯ ನಿರ್ವಹಿಸಲಿದ್ದಾರೆ. 12,000 ಮತಗಟ್ಟೆಗಳು ಸೂಕ್ಷ್ಮ ಮತಗಟ್ಟೆಗಳೆಂದು ಗುರುತಿಸಲಾಗಿದ್ದು ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಡಿಸೆಂಬರ್ 3ರಂದು ಮತ ಎಣಿಕೆ ನಡೆಯಲಿದೆ.

ಕುಕಿ–ಜೋ ಪ್ರತಿಭಟನಾ ರ‍್ಯಾಲಿ

ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯ

ಇಂಫಾಲ್/ ಚುರಚಾಂದಪುರ (ಪಿಟಿಐ): ಕುಕಿ–ಜೋ ಬುಡಕಟ್ಟು ಜನರಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸಬೇಕೆಂದು ಆಗ್ರಹಿಸಿ ಮಣಿಪುರದ ಹಲವು ಜಿಲ್ಲೆಗಳಲ್ಲಿ ಬುಧವಾರ ಈ ಸಮುದಾಯಗಳಿಂದ ಪ್ರತಿಭಟನಾ ರ‍್ಯಾಲಿ ನಡೆಯಿತು.

ಚುರಚಾಂದಪುರದ ಲಮ್ಕಾ ಪಬ್ಲಿಕ್ ಶಾಲಾ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಇರುವ ಸ್ಮರಣಾ ಗೋಡೆಯವರೆಗಿನ ಮೂರು ಕಿ.ಮೀ. ವರೆಗೂ ಪ್ರತಿಭಟನಕಾರರು ರ‍್ಯಾಲಿ ನಡೆಸಿದರು.

ಕಣಿವೆ ರಾಜ್ಯದಲ್ಲಿ ಕುಕಿ ಮತ್ತು ಜೋ ಸಮುದಾಯದವರು ಹೆಚ್ಚಿರುವ ಪ್ರದೇಶದಲ್ಲಿ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸಲು ಕೇಂದ್ರ ಸರ್ಕಾರ ತ್ವರಿತವಾಗಿ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧಿಕಾರಿ ಮೂಲಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಜೋ ಸಮುದಾಯ ಒಕ್ಕೂಟದ ಸಂಚಾಲಕ ಆಲ್ಬರ್ಟ್ ರೆಂಥ್ಲೀ ಮಾತನಾಡಿ, 'ಕೇಂದ್ರಕ್ಕೆ ಈ ಹಿಂದೆಯೂ ಮನವಿ ಸಲ್ಲಿಸಲಾಗಿತ್ತು. ಆದರೆ, ಯಾವುದೇ ಪ್ರತಿಕ್ರಿಯೆ ನೀಡಿಲ್ಲ' ಎಂದು ದೂರಿದರು.

ಕಾಂಗ್ಪೋಕ್ಪಿ, ಫರ್ಜಾಲ್, ತೆಂಗನೂಪಾಲ್, ಸಾಯಿಕುಲ್, ಜಂಪ್ಯುಟ್ಲಾಂಗ್‌ನಲ್ಲಿ ಬೃಹತ್ ರ‍್ಯಾಲಿ ನಡೆಯಿತು.

ಚುರಚಾಂದಪುರ, ಬಿಷ್ಣುಪುರ, ಕಾಂಗ್ಪೋಕ್ಪಿ ಹಾಗೂ ಇಂಫಾಲ್ ಪೂರ್ವ ಜಿಲ್ಲೆಯ ಅಂತರ ಜಿಲ್ಲಾ ಗಡಿ ಪ್ರದೇಶ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಘಟನೆ ಜರುಗದಂತೆ ಮುಂಜಾಗ್ರತೆಯಾಗಿ ಪೊಲೀಸ್ ಬಿಗಿಭದ್ರತೆ ಕೈಗೊಳ್ಳಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರ: ಶಾಂತಿ ಒಪ್ಪಂದಕ್ಕೆ ಸಹಿ

ನವದೆಹಲಿ(ಪಿಟಿಐ): ಮಹತ್ವದ ಬೆಳವಣಿಗೆಯೊಂದರಲ್ಲಿ, ಮಣಿಪುರದ ಬಂಡುಕೋರರ ಗುಂಪು 'ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್' (ಯುಎನ್‌ಎಲ್‌ಎಫ್) ಸರ್ಕಾರದೊಂದಿಗೆ ಶಾಂತಿ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದೆ.

'ಮಣಿಪುರದಲ್ಲಿ ಬಹುಹಿಂದಿನಿಂದಲೂ ಸಕ್ರಿಯವಾಗಿರುವ ಯುಎನ್‌ಎಲ್‌ಎಫ್, ಹಿಂಸಾಚಾರ ತ್ಯಜಿಸುವುದಾಗಿ ಹೇಳಿದೆ. ನವದೆಹಲಿಯಲ್ಲಿ ಇಂದು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಇದೊಂದು ಐತಿಹಾಸಿಕ ಮೈಲಿಗಲ್ಲು. ಈಶಾನ್ಯ ಭಾಗದಲ್ಲಿ ಶಾಶ್ವತವಾಗಿ ಶಾಂತಿ ನೆಲೆಸಬೇಕು ಎಂಬ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನಿರಂತರ ಪ್ರಯತ್ನದ ಫಲವಾಗಿ ಈ ಒಪ್ಪಂದ ಏರ್ಪಟ್ಟಿದೆ' ಎಂದೂ ಅವರು ಹೇಳಿದ್ದಾರೆ.

'ಕೇಂದ್ರ ಹಾಗೂ ಮಣಿಪುರ ರಾಜ್ಯ ಸರ್ಕಾರದೊಂದಿಗೆ ಯುಎನ್‌ಎಲ್‌ಎಫ್ ಮಾಡಿಕೊಂಡಿರುವ ಈ ಶಾಂತಿ ಒಪ್ಪಂದವು ಕಣಿವೆ ರಾಜ್ಯದಲ್ಲಿನ ಆರು ದಶಕಗಳ ಸಶಸ್ತ್ರ ಹೋರಾಟವನ್ನು ಕೊನೆಗಾಣಿಸಲಿದೆ' ಎಂದು ಅವರು ಹೇಳಿದ್ದಾರೆ.

ಸಿಎಎ ಜಾರಿ ತಡೆಯಲು ಯಾರಿಂದಲೂ ಸಾಧ್ಯವಿಲ್ಲ: ಅಮಿತ್ ಶಾ ಘೋಷಣೆ

ಕೋಲ್ಕತ್ತ (ಪಿಟಿಐ): ಕೇಂದ್ರ ಸರ್ಕಾರವು ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ಜಾರಿಗೆ ತರುತ್ತದೆ. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಬುಧವಾರ ಹೇಳಿದರು.


ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾತನಾಡಿದರು —ಎಎಫ್‌ಪಿ ಚಿತ್ರ

2024ರ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಪ್ರಚಾರಾಂದೋಲನಕ್ಕೆ ಚಾಲನೆ ನೀಡುವ ಸಲುವಾಗಿ ಬಿಜೆಪಿಯು ಕೋಲ್ಕತ್ತದಲ್ಲಿ ಬೃಹತ್ ರ‍್ಯಾಲಿ ಏರ್ಪಡಿಸಿತ್ತು. ಅಮಿತ್ ಶಾ ಅವರು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು. ಓಲೈಕೆ ರಾಜಕಾರಣ, ಒಳನುಸುಳುವಿಕೆ, ಭ್ರಷ್ಟಾಚಾರ ಮತ್ತು ರಾಜಕೀಯ ಪ್ರೇರಿತ ಹಿಂಸಾಚಾರದಂತಹ ಸಮಸ್ಯೆಗಳಿಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಗುರಿಯಾಗಿಸಿ ವಾಗ್ದಾಳಿ ನಡೆಸಿದರು.

ಮಮತಾ ಅವರು ಗಡಿಯಲ್ಲಿ ಒಳನುಸುಳುವಿಕೆಯನ್ನು ಉತ್ತೇಜಿಸುತ್ತಿದ್ದಾರೆ. ಅದಕ್ಕಾಗಿ ಅವರು ಸಿಎಎಯನ್ನು ವಿರೋಧಿಸುತ್ತಾರೆ ಎಂದರು.

2026ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಆರಿಸುವ ಮೂಲಕ ಮಮತಾ ಬ್ಯಾನರ್ಜಿ ಅವರ ಸರ್ಕಾರವನ್ನು ಕಿತ್ತೆಸೆಯಿರಿ. ಅದಕ್ಕೆ ಮುನ್ನುಡಿಯನ್ನು 2024ರ ಲೋಕಸಭೆ ಚುನಾವಣೆಯಲ್ಲೇ ಬರೆಯಿರಿ ಎಂದು ಅಮಿತ್ ಶಾ ಕರೆ ನೀಡಿದರು.

2019ರಲ್ಲಿ ಲೋಕಸಭೆಯಲ್ಲಿ ಅಂಗೀಕಾರವಾಗಿದ್ದ ಸಿಎಎ ಕುರಿತು ಮಾತನಾಡಿದ ಅವರು, ವಿರೋಧಪಕ್ಷಗಳ ಪ್ರಬಲ ವಿರೋಧದ ನಡುವೆಯೂ ಕೇಂದ್ರ ಸರ್ಕಾರ ಸಿಎಎ ಅಡಿ ನಿಯಮಗಳನ್ನು ರೂಪಿಸಲಿದೆ ಎಂದು ಹೇಳಿದರು.

ಅಮಿತ್ ಶಾ ಅವರಿಗೆ ತಿರುಗೇಟು ನೀಡಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ರಾಜ್ಯಸಭಾ ಸದಸ್ಯ ಡೆರಿಕ್ ಒಬ್ರಿಯಾನ್, ಯುವಕರಿಗಾಗಿ ಉದ್ಯೋಗ ಸೃಷ್ಟಿಸುವ ಬಗ್ಗೆ, ಬೆಲೆ ಏರಿಕೆ, ಪಶ್ಚಿಮ ಬಂಗಾಳಕ್ಕೆ ಕೇಂದ್ರ ಬಾಕಿ ನೀಡಬೇಕಿರುವ ನರೇಗಾ ನಿಧಿ ಕುರಿತು ಅಮಿತ್ ಶಾ ಒಂದು ಪದವನ್ನೂ ಮಾತನಾಡಲಿಲ್ಲ ಎಂದು ತಿಳಿಸಿದರು.

ಪಶ್ಚಿಮ ಬಂಗಾಳ: ಶಾಸಕರು, ಸಚಿವರ ಸಂಬಳ ಹೆಚ್ಚಳ


ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ವಿಧಾನಸಭೆಯಲ್ಲಿ ಬುಧವಾರ ನಡೆದ ಕಲಾಪದಲ್ಲಿ ಶಾಸಕರು ಹಾಗೂ ಸಚಿವರ ಮಾಸಿಕ ವೇತನವನ್ನು ₹40 ಸಾವಿರಕ್ಕೆ ಹೆಚ್ಚಿಸುವ ಮಸೂದೆಗೆ ಅಂಗೀಕಾರ ನೀಡಲಾಗಿದೆ.

ಮಸೂದೆ ಕುರಿತು ಮಾತನಾಡಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಶಾಸಕರು ಮತ್ತು ಸಚಿವರ ವೇತನ ಹೆಚ್ಚಳದ ನಿರ್ಧಾರ ಸರಿಯಾಗಿದೆ. ಮತ್ತೆ ಅವಕಾಶ ಸಿಕ್ಕಿದರೆ ಮತ್ತಷ್ಟು ಹೆಚ್ಚಳಕ್ಕೆ ಕ್ರಮಕೈಗೊಳ್ಳುತ್ತೇನೆ' ಎಂದರು.


ಭಾರತೀಯನ ವಿರುದ್ಧ ದೋಷಾರೋಪ

ನ್ಯೂಯಾರ್ಕ್ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ಹತ್ಯೆಗೆ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ಪ್ರಜೆ ನಿಖಿಲ್ ಗುಪ್ತಾ (52) ವಿರುದ್ಧ ನ್ಯೂಯಾರ್ಕ್‌ನ ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಗುಪ್ತಾ ವಿರುದ್ಧ ಆರೋಪಗಳು ಸಾಬೀತಾದರೆ, ಕೊಲೆ ಯತ್ನ ಮತ್ತು ಕೊಲೆಗೆ ಸಂಚು ರೂಪಿಸಿದ್ದಕ್ಕಾಗಿ ತಲಾ 10 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಲಿದ್ದಾರೆ ಎಂದು ಅಮೆರಿಕದ ವಕೀಲ ಮ್ಯಾಥ್ಯೂ ಜಿ. ಒಲೆನ್ಸ್ ಹೇಳಿದ್ದಾರೆ.

ಗುಪ್ತಾ ಅವರು ಹಂತಕನಿಗೆ ₹83.34 ಲಕ್ಷ ಪಾವತಿಸಲು ಒಪ್ಪಿಕೊಂಡಿದ್ದರು. ಅಲ್ಲದೆ ಹತ್ಯೆಗಾಗಿ ಹಂತಕನಿಗೆ ₹ 12.50 ಲಕ್ಷ ನಗದನ್ನು ಮುಂಗಡವಾಗಿ ಪಾವತಿಸಲು ವ್ಯವಸ್ಥೆ ಮಾಡಿದ್ದರು ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಅಮೆರಿಕದ ಅಧಿಕಾರಿಗಳು ಹೇಳಿದ್ದಾರೆ.

ಪನ್ನೂ ಹತ್ಯೆ ಯತ್ನ: ತನಿಖೆಗೆ ಸಮಿತಿ ರಚನೆ


ಗುರುಪತ್ವಂತ್ ಸಿಂಗ್ ಪನ್ನೂ

ನವದೆಹಲಿ(ಪಿಟಿಐ): ಅಮೆರಿಕದಲ್ಲಿ ಖಾಲಿಸ್ತಾನಿ ಉಗ್ರ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ಯತ್ನಿಸಲಾಗಿತ್ತು ಎಂಬ ಆರೋಪ ಕುರಿತು ತನಿಖೆ ನಡೆಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಅರಿಂದಮ್ ಬಾಗ್ಚಿ ಬುಧವಾರ ಹೇಳಿದ್ದಾರೆ.

'ಈ ಆರೋಪಗಳ ಕುರಿತು ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸುವುದಕ್ಕಾಗಿ ನ.18ರಂದು ಸಮಿತಿ ರಚಿಸಲಾಗಿದೆ. ಸಮಿತಿ ನೀಡುವ ವರದಿ ಆಧಾರದ ಮೇಲೆ ಭಾರತ ಅಗತ್ಯ ಕ್ರಮ ಕೈಗೊಳ್ಳಲಿದೆ' ಎಂದಿದ್ದಾರೆ.

'ಭದ್ರತೆ ಕುರಿತಾಗಿ ನಡೆದ ದ್ವಿಪಕ್ಷೀಯ ಮಾತುಕತೆ ವೇಳೆ, ಸಂಘಟಿತ ಅಪರಾಧಿಗಳು, ಶಸ್ತ್ರಾಸ್ತ್ರಗಳ ಮಾರಾಟಗಾರರು ಹಾಗೂ ಉಗ್ರರ ನಡುವಿನ ನಂಟಿನ ಕುರಿತು ಅಮೆರಿಕ ಕೆಲ ಮಾಹಿತಿಗಳನ್ನು ಹಂಚಿಕೊಂಡಿತ್ತು. ಇಂತಹ ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸುವುದಾಗಿ ಭಾರತ ಆಗ ಸ್ಪಷ್ಟಪಡಿಸಿತ್ತು' ಎಂದು ಹೇಳಿದ್ದಾರೆ. ಖಾಲಿಸ್ತಾನಿ ಉಗ್ರ ಪನ್ನೂ ಹತ್ಯೆಗೆ ನಡೆದಿದ್ದ ಯತ್ನವನ್ನು ಅಮೆರಿಕ ಅಧಿಕಾರಿಗಳು ವಿಫಲಗೊಳಿಸಿದ್ದರು. ಈ ವಿಚಾರವಾಗಿ ಭಾರತಕ್ಕೆ ಅಮೆರಿಕ ಎಚ್ಚರಿಕೆಯನ್ನೂ ನೀಡಿತ್ತು ಎಂಬುದಾಗಿ ಕೆಲವು ಮೂಲಗಳನ್ನು ಉಲ್ಲೇಖಿಸಿ ಬ್ರಿಟನ್‌ನ ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆ ಇತ್ತೀಚೆಗೆ ವರದಿ ಮಾಡಿತ್ತು.

ದ್ವೇಷ ಭಾಷಣ ತಡೆಗೆ ಕ್ರಮ: ಸುಪ್ರೀಂ ಕೋರ್ಟ್ ಸೂಚನೆ

ಆಡಳಿತಾತ್ಮಕ ಕಾರ್ಯವಿಧಾನ ಸ್ಥಾಪನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ದೇಶದಾದ್ಯಂತ ದ್ವೇಷ ಭಾಷಣಗಳ ಕುರಿತು ಕ್ರಮ ಕೈಗೊಳ್ಳುವುದಕ್ಕಾಗಿ ಆಡಳಿತಾತ್ಮಕ ಕಾರ್ಯವಿಧಾನ ಸ್ಥಾಪಿಸುವ ಆಲೋಚನೆ ಇದೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ದ್ವೇಷ ಭಾಷಣಕ್ಕೆ ಸಂಬಂಧಿಸಿ ನಿರ್ದಿಷ್ಟ ಪ್ರಕರಣ ಕುರಿತು ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಈ ಸಂಬಂಧ ಒಂದು ಆಡಳಿತಾತ್ಮಕ ಕಾರ್ಯವಿಧಾನ ರೂಪಿಸುವ ಚಿಂತನೆ ಇದೆ ಎಂದು ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ.ಎನ್. ಭಟ್ಟಿ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ವೇಳೆ ಈ ಮಾತು ಹೇಳಿದೆ.

'ಯಾವುದು ದ್ವೇಷ ಭಾಷಣ ಎಂಬುದನ್ನು ಈಗಾಗಲೇ ನ್ಯಾಯಾಲಯ ವ್ಯಾಖ್ಯಾನಿಸಿದೆ. ಈಗ, ಅದರ ಅನುಷ್ಠಾನ ಮತ್ತು ಹೇಗೆ ಅನ್ವಯಿಸಬೇಕು ಎಂಬುದನ್ನು ಅರಿಯುವುದೇ ನಮ್ಮ ಮುಂದಿರುವ ಪ್ರಶ್ನೆ' ಎಂದು ನ್ಯಾಯಪೀಠ ಹೇಳಿದೆ.

'ಒಂದರ ನಂತರ ಒಂದು ಪ್ರಕರಣಗಳ ವಿಚಾರಣೆ ಸಾಧ್ಯವಿಲ್ಲ. ಈ ರೀತಿ ಮಾಡಿದಲ್ಲಿ ಪ್ರಕರಣಗಳ ರಾಶಿಯೇ ನಮ್ಮ ಮುಂದೆ ಬೀಳುತ್ತದೆ. ಹೀಗಾಗಿ, ಈ ವಿಷಯಕ್ಕೆ ಸಂಬಂಧಿಸಿ ಸೂಕ್ತ ಮೂಲಸೌಕರ್ಯ ಇಲ್ಲವೇ ಆಡಳಿತಾತ್ಮಕ ಕಾರ್ಯವಿಧಾನ ಜಾರಿಯಾಗಬೇಕು ಎಂಬುದು ನಮ್ಮ ಬಯಕೆ. ಇಂತಹ ಕಾರ್ಯವಿಧಾನದಲ್ಲಿಯೂ ನ್ಯೂನತೆ ಕಂಡುಬಂದಲ್ಲಿ ಸಂಬಂಧಿಸಿದ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು' ಎಂದು ನ್ಯಾಯಪೀಠ ಹೇಳಿತು.

ಅಲ್ಲದೇ, ಈ ವಿಷಯವಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡದಿರುವುದಕ್ಕಾಗಿ ತಮಿಳುನಾಡು, ಕೇರಳ, ನಾಗಾಲ್ಯಾಂಡ್ ಹಾಗೂ ಗುಜರಾತ್ ಸರ್ಕಾರಗಳಿಗೆ ನ್ಯಾಯಪೀಠ ನೋಟಿಸ್ ಜಾರಿ ಮಾಡಿತು.

'ಎಲ್ಲ ಪ್ರಕರಣಗಳಲ್ಲೂ ಕ್ರಮ ತೆಗೆದುಕೊಳ್ಳಿ': ಯಾರೇ ಮಾಡಿದ್ದರೂ ಹಾಗೂ ಎಲ್ಲ ರೀತಿಯ ದ್ವೇಷ ಭಾಷಣಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿರುವ ಸುಪ್ರಿಂ ಕೋರ್ಟ್, ಸನಾತನ ಧರ್ಮ ಕುರಿತು ಹೇಳಿಕೆಗಳನ್ನು ನೀಡಿದ್ದ ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ವಿರುದ್ಧದ ನ್ಯಾಯಾಂಗ ನಿಂದನೆ ಸೇರಿದಂತೆ ನಿರ್ದಿಷ್ಟ ಪ್ರಕರಣಗಳ ಕುರಿತು ಆದೇಶ ಹೊರಡಿಸಲು ನಿರಾಕರಿಸಿತು.

ರಾಜೀವ್ ವಿರುದ್ಧ ಬಲವಂತದ ಕ್ರಮ ಬೇಡ: ಕೇರಳ ಹೈಕೋರ್ಟ್

ಕೊಚ್ಚಿ (ಪಿಟಿಐ): ಸಮುದಾಯಗಳ ನಡುವೆ ದ್ವೇಷ ಉತ್ತೇಜಿಸುವ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿರುವ ಪ್ರಕರಣವು ಸೇರಿದಂತೆ ಎರಡು ಪ್ರಕರಣಗಳಲ್ಲಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ವಿರುದ್ಧ ಡಿಸೆಂಬರ್ 14ರವರೆಗೆ ಯಾವುದೇ ಬಲವಂತದ ಕ್ರಮಕೈಗೊಳ್ಳಬಾರದು ಎಂದು ಕೇರಳ ಹೈಕೋರ್ಟ್ ಬುಧವಾರ ಪೊಲೀಸರಿಗೆ ನಿರ್ದೇಶನ ನೀಡಿದೆ.

ಕೊಚ್ಚಿಯಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ದ್ವೇಷ ಹರಡುವ ಪೋಸ್ಟ್ ಮಾಡಿದ್ದಾರೆ ಎಂಬ ಆರೋಪದಲ್ಲಿ ಸಚಿವರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕೆಂದು ಕೋರಿ ರಾಜೀವ್ ಚಂದ್ರಶೇಖರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಿ.ಎಸ್. ಡಯಾಸ್ ಅವರು, ಈ ಬಗ್ಗೆ ನಿಲುವು ಪ್ರಕಟಿಸುವಂತೆ ಸರ್ಕಾರಕ್ಕೆ ನೋಟಿಸ್ ನೀಡಿದ್ದಾರೆ.

ದೂರುದಾರರಾದ ಕೆಪಿಸಿಸಿ ಡಿಜಿಟಲ್ ಮಾಧ್ಯಮ ಸಂಚಾಲಕ ಪಿ. ಸರಿನ್ ಅವರಿಗೂ ನಿಲುವು ಪ್ರಕಟಿಸುವಂತೆ ನ್ಯಾಯಾಲಯವು ನೋಟಿಸ್ ನೀಡಿದೆ.

'ಕಾಂಗ್ರೆಸ್ ಮತ್ತು ಸಿಪಿಎಂನ ಓಲೈಕೆಯ ರಾಜಕಾರಣದಿಂದಾಗಿ ವಿಧ್ವಂಸಕ ಕೃತ್ಯಗಳು ನಡೆಯುತ್ತವೆ ಮತ್ತು ಅದಕ್ಕೆ ಮುಗ್ಧ ಜನರು ಬೆಲೆ ತೆರಬೇಕಾಗುತ್ತದೆ' ಎಂದು ರಾಜೀವ್ ಚಂದ್ರಶೇಖರ್ ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿದ್ದರು.

ದೆಹಲಿ: ಮುಖ್ಯ ಕಾರ್ಯದರ್ಶಿ ಅವಧಿ ವಿಸ್ತರಣೆಗೆ 'ಸುಪ್ರೀಂ' ಅನುಮತಿ

ನವದೆಹಲಿ: ದೆಹಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ನರೇಶ್ ಕುಮಾರ್ ಅವರ ಅವಧಿಯನ್ನು ಆರು ತಿಂಗಳು ವಿಸ್ತರಣೆ ಮಾಡಲು ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಅನುಮತಿ ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ-ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ, ಸದ್ಯ ಜಾರಿಯಲ್ಲಿರುವ ರಾಷ್ಟ್ರ ರಾಜಧಾನಿ ದೆಹಲಿ ಸರ್ಕಾರ (ತಿದ್ದುಪಡಿ) ಕಾಯ್ದೆ–2023, ದೆಹಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ನೇಮಕ ಮಾಡುವ ಅಧಿಕಾರವನ್ನು ಕೇಂದ್ರ ಸರ್ಕಾರ ನೀಡುತ್ತದೆ ಎಂದು ಹೇಳಿದೆ.

ದೆಹಲಿ ಸರ್ಕಾರ ಪರ ಹಾಜರಿದ್ದ ಹಿರಿಯ ವಕೀಲ ಎ.ಎಂ.ಸಿಂಘ್ವಿ, 'ಮುಖ್ಯ-ಕಾರ್ಯದರ್ಶಿ ಅವಧಿಯನ್ನು ವಿಸ್ತರಿಸುವ ನಿರ್ಧಾರ ಏಕಪಕ್ಷೀಯ ಹಾಗೂ ಸ್ಥಾಪಿತ ಪ್ರಕ್ರಿಯೆಗಳ ಉಲ್ಲಂಘನೆಯೂ ಆಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಮಂತ್ರಿ ಪರಿಷತ್ತು ಕೈಗೊಳ್ಳುವ ನಿರ್ಧಾರಕ್ಕೆ ಲೆಫ್ಟಿನೆಂಟ್ ಗವರ್ನರ್ ಬದ್ಧರಾಗಿರಬೇಕು ಎಂಬುದಾಗಿ ಈ ಹಿಂದೆ ಹಲವು ಸಂದರ್ಭಗಳಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ ಎಂದೂ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ರಾಷ್ಟ್ರ ರಾಜಧಾನಿ ದೆಹಲಿ ಸರ್ಕಾರ (ತಿದ್ದುಪಡಿ) ಕಾಯ್ದೆ–2023 ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿದ್ದರೂ, ಸುಪ್ರೀಂ ಕೋರ್ಟ್ ತಡೆ ನೀಡಿಲ್ಲ ಎಂದು ಹೇಳಿತು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ವಿವಿಧ ರಾಜ್ಯದ ಮುಖ್ಯ ಕಾರ್ಯದರ್ಶಿಗಳ ಸೇವಾವಧಿ ವಿಸ್ತರಣೆ ಮಾಡಿದ 57 ನಿದರ್ಶನಗಳಿವೆ ಎಂದರು.

ಮಸೂದೆಗೆ ರಾಷ್ಟ್ರಪತಿ ಅಂಕಿತ ಮಾರ್ಗಸೂಚಿ ಸಾಧ್ಯತೆ

ಒಂದನೇ ಪುಟದಿಂದ

'ರಾಜ್ಯಪಾಲರು ಮಸೂದೆಗಳನ್ನು ಎರಡು ವರ್ಷ ಇಟ್ಟುಕೊಂಡು ಏನು ಮಾಡುತ್ತಿದ್ದರು' ಎಂದು ನ್ಯಾಯಪೀಠ ಪ್ರಶ್ನಿಸಿತು.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿ ಇದ್ದಾರೆ.

ಮಸೂದೆಗಳಿಗೆ ಸಂಬಂಧಿಸಿದಂತೆ 'ರಾಜ್ಯಪಾಲರು ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಸಚಿವರ ಜೊತೆ ಚರ್ಚಿಸುವರು ಎಂಬುದನ್ನು ನಾವು ದಾಖಲಿಸಿಕೊಳ್ಳುತ್ತೇವೆ... ರಾಜ್ಯದಲ್ಲಿ ರಾಜಕೀಯ ವಿವೇಕವೊಂದು ರೂಪಪಡೆಯುತ್ತದೆ ಎಂದು ನಾವು ಆಶಿಸುತ್ತೇವೆ. ಅದಾಗದಿದ್ದರೆ ಕಾನೂನು ರೂಪಿಸಲು ಹಾಗೂ ಸಂವಿಧಾನದತ್ತವಾದ ಕರ್ತವ್ಯವನ್ನು ನಿರ್ವಹಿಸಲು ನಾವಿದ್ದೇವೆ' ಎಂದು ಪೀಠವು ನೆನಪಿಸಿಕೊಟ್ಟಿದೆ.

ವಿಧಾನಸಭೆಯು ಅಂಗೀಕಾರ ನೀಡಿರುವ ಹಲವು ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕುತ್ತಿಲ್ಲ ಎಂದು ದೂರಿ ಕೇರಳ ಸರ್ಕಾರವು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಈ ಪೀಠ ನಡೆಸುತ್ತಿದೆ.

ಅರ್ಜಿಯ ವಿಚಾರಣೆ ಶುರುವಾಗುತ್ತಿದ್ದಂತೆ ಕೇರಳ ಸರ್ಕಾರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಕೆ.ಕೆ. ವೇಣುಗೋಪಾಲ್ ಅವರು, 'ಮಸೂದೆಗಳನ್ನು ರಾಷ್ಟ್ರಪತಿಯವರ ಅಂಕಿತಕ್ಕಾಗಿ ಯಾವ ಸಂದರ್ಭಗಳಲ್ಲಿ ರವಾನಿಸಬಹುದು ಎಂಬ ವಿಚಾರವಾಗಿ ಮಾರ್ಗಸೂಚಿ ರೂಪಿಸಲು ಕೋರ್ಟ್‌ಗೆ ಇದು ಸರಿಯಾದ ಕಾಲ' ಎಂದರು. ಮಸೂದೆಗಳ ವಿಚಾರವಾಗಿ ರಾಜ್ಯಪಾಲರು ತೀರ್ಮಾನವನ್ನೇ ತೆಗೆದುಕೊಳ್ಳದೆ ಇರುವುದಕ್ಕೆ ಅವಕಾಶ ಮಾಡಿಕೊಡಬಾರದು, ಅಂತಹ ಅವಕಾಶ ಮಾಡಿಕೊಟ್ಟಲ್ಲಿ ಆಡಳಿತದ ಕೆಲಸಗಳು ಸ್ಥಗಿತವಾಗಿಬಿಡುತ್ತವೆ ಎಂದರು.

ವಿಧಾನಸಭೆಯ ಜೊತೆಗೂಡಿ ಕೆಲಸ ಮಾಡುವ ಬದಲು ರಾಜ್ಯಪಾಲರು, ಎದುರಾಳಿಯಂತೆ ಕೆಲಸ ಮಾಡುತ್ತಿದ್ದಾರೆ ಎಂದು ವೇಣುಗೋಪಾಲ್ ಆರೋಪಿಸಿದರು. ಮಸೂದೆಗಳ ವಿಚಾರವಾಗಿ ರಾಜ್ಯಪಾಲರು ಕೆಲವು ತೀರ್ಮಾನಗಳನ್ನು ಕೈಗೊಂಡಿರುವ ಕಾರಣ ಕೇರಳ ಸರ್ಕಾರದ ಅರ್ಜಿಯನ್ನು ಇತ್ಯರ್ಥಪಡಿಸಬಹುದು ಎಂಬ ಇರಾದೆಯನ್ನು ಪೀಠವು ಆರಂಭದಲ್ಲಿ ವ್ಯಕ್ತಪಡಿಸಿತ್ತು. ಆದರೆ, ಈ ವಿಚಾರವಾಗಿ ಮಾರ್ಗಸೂಚಿ ರೂಪಿಸುವ ಬಗ್ಗೆ ತಾನು ಪರಿಗಣಿಸಬಹುದು ಎಂದು ಹೇಳಿದ ಪೀಠವು, ಅರ್ಜಿಯನ್ನು ವಿಚಾರಣೆಗೆ ಬಾಕಿ ಉಳಿಸಿಕೊಂಡಿತು.

ಹಿಂದಿನ ವಿಚಾರಣೆ ಸಂದರ್ಭದಲ್ಲಿ ನ್ಯಾಯಪೀಠವು, ತಾನು ಪಂಜಾಬ್ ಪ್ರಕರಣದಲ್ಲಿ ನೀಡಿದ ತೀರ್ಪನ್ನು ಪರಿಶೀಲಿಸುವಂತೆ ಕೇರಳ ರಾಜ್ಯಪಾಲರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಿತ್ತು. ಶಾಸನ ರೂಪಿಸುವ ಸಹಜ ಪ್ರಕ್ರಿಯೆಗೆ ರಾಜ್ಯಪಾಲರು ಅಡ್ಡಿಯಾಗುವಂತಿಲ್ಲ ಎಂದು ಕೋರ್ಟ್ ಆ ತೀರ್ಪಿನಲ್ಲಿ ಹೇಳಿದೆ.

ಮೊದಲ 9 ತಿಂಗಳು ಹವಾಮಾನದಲ್ಲಿ ಅಧಿಕ ಏರಿಳಿತ

ನವದೆಹಲಿ(ಪಿಟಿಐ): ಭಾರತವು ಈ ವರ್ಷದ ಮೊದಲ 9 ತಿಂಗಳು ಹವಾಮಾನಕ್ಕೆ ಸಂಬಂಧಿಸಿ ವಿಪರೀತ ಏರಿಳಿತಗಳಿಗೆ ಸಾಕ್ಷಿಯಾಗಿತ್ತು. ಹವಾಮಾನದಲ್ಲಿನ ಇಂಥ ವಿದ್ಯಮಾನವು ಕನಿಷ್ಠ 3 ಸಾವಿರ ಜನರ ಸಾವಿಗೆ ಕಾರಣವಾಗಿದೆ ಎಂದು ಬುಧವಾರ ಬಿಡುಗಡೆಯಾಗಿರುವ ವರದಿಯೊಂದು ಹೇಳಿದೆ.

'ಸೆಂಟರ್ ಫಾರ್ ಸೈನ್ಸ್ ಆ್ಯಂಡ್ ಎನ್ವಿರಾನ್‌ಮೆಂಟ್' (ಸಿಎಸ್‌ಇ) ಎಂಬ ಸ್ವಯಂ ಸೇವಾ ಸಂಸ್ಥೆಯು ಈ ವರದಿಯನ್ನು ಬಿಡುಗಡೆ ಮಾಡಿದೆ.


ಈ ವರ್ಷದ ಜನವರಿಯಿಂದ ಸೆಪ್ಟೆಂಬರ್ ವರೆಗಿನ ಅವಧಿಯಲ್ಲಿ ಶೇ 86ರಷ್ಟು ದಿನಗಳಂದು ಹವಾಮಾನದಲ್ಲಿ ವಿಪರೀತ ಏರಿಳಿತ ಕಂಡುಬಂದಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

'ಹವಾಮಾನ ವೈಪರೀತ್ಯದಿಂದಾಗಿ 2,923 ಜನರು ಮೃತಪಟ್ಟಿದ್ದಾರೆ. 20 ಲಕ್ಷ ಹೆಕ್ಟೇರ್‌ನಷ್ಟು ಪ್ರದೇಶದಲ್ಲಿನ ಬೆಳೆ ಹಾನಿಯಾಗಿದ್ದರೆ, 80 ಸಾವಿರ ಮನೆಗಳು ನಾಶವಾಗಿದ್ದವು. 92 ಸಾವಿರಕ್ಕೂ ಅಧಿಕ ಪ್ರಾಣಿಗಳು ಮೃತಪಟ್ಟಿವೆ'.

'ಈ ವಿಚಾರಕ್ಕೆ ಸಂಬಂಧಿಸಿದ ಎಲ್ಲ ದತ್ತಾಂಶಗಳನ್ನು ಸಂಗ್ರಹಿಸಿಲ್ಲ. ಹೀಗಾಗಿ, ಜೀವ ಮತ್ತು ಸ್ವತ್ತುಗಳ ಹಾನಿಯ ಪ್ರಮಾಣ ಇನ್ನೂ ಹೆಚ್ಚು ಇರುವ ಸಾಧ್ಯತೆ ಇದೆ' ಎಂದು ಸಿಎಸ್‌ಇ ನಿರ್ದೇಶಕಿ ಸುನಿತಾ ನಾರಾಯಣ ಹೇಳುತ್ತಾರೆ.

ಪ್ರದೇಶವಾರು ಅವಲೋಕಿಸಿದಾಗ, ದಕ್ಷಿಣ ರಾಜ್ಯಗಳ ಪೈಕಿ ಕೇರಳದಲ್ಲಿ 67 ದಿನಗಳ ಕಾಲ ವಿಪರೀತ ಹವಾಮಾನ ಏರಿಳಿತ ಕಂಡುಬಂದಿದೆ. ಈ ಅವಧಿಯಲ್ಲಿ 60 ಜನರು ಮೃತಪಟ್ಟಿದ್ದಾರೆ.

ಅಭಿಮತ



ಸುಭಾಷಿತ

ಮಹಾನ್ ಕನಸುಗಾರರ ಕನಸುಗಳು ಯಾವಾಗಲೂ ನನಸಾಗುತ್ತವೆ.

–ಎ.ಪಿ.ಜೆ. ಅಬ್ದುಲ್ ಕಲಾಂ

ಸುರಂಗದಿಂದ ಕಾರ್ಮಿಕರಿಗೆ ಮರುಜೀವ ಮಾನವೀಯ ಪ್ರಯತ್ನಕ್ಕೆ ಸಂದ ಗೆಲುವು

ಉತ್ತರಾಖಂಡದ ಸಿಲ್ಕ್ಯಾರಾ–ಬಡಕೋಟ್ ಸುರಂಗದಲ್ಲಿ ಸಿಲುಕಿದ್ದ ಎಲ್ಲ 41 ಕಾರ್ಮಿಕರನ್ನೂ ಹೊರಗೆ ಕರೆತಂದ ಕ್ಷಣವನ್ನು ಇಡೀ ದೇಶ ಸಂಭ್ರಮಿಸಿದೆ. ಅವರನ್ನು ಸುರಕ್ಷಿತವಾಗಿ ಕರೆತರಲು ಎರಡು ವಾರಗಳಿಂದ ನಡೆಯುತ್ತಿದ್ದ ಪರ್ವತಸದೃಶ ಕಾರ್ಯಾಚರಣೆ ಸಂಪೂರ್ಣ ಯಶ ಕಂಡಿದೆ. ರಕ್ಷಣಾ ಕಾರ್ಯದಲ್ಲಿ ಪದೇಪದೇ ಅಡ್ಡಿಗಳು ಎದುರಾಗಿದ್ದವು. ಸುರಂಗ ಕುಸಿದ ಭಾಗದಲ್ಲಿ ರಕ್ಷಣೆಗೆ ಕೊಳವೆ ಮಾರ್ಗ ನಿರ್ಮಿಸುವ ಕಾರ್ಯಕ್ಕೆ ಬಳಸಲಾದ ಅಮೆರಿಕದ ಅತ್ಯಾಧುನಿಕ ಯಂತ್ರ ಮುನ್ನುಗ್ಗಿದಂತೆಲ್ಲ ಭರವಸೆ ಚಿಗುರುತ್ತಿದ್ದರೆ, ಅವಶೇಷದ ಮಧ್ಯೆ ಆ ಯಂತ್ರ ಸಿಲುಕಿಕೊಂಡಾಗ ನಿರಾಸೆ ಕವಿಯುತ್ತಿತ್ತು. ಭರವಸೆ ಮತ್ತು ನಿರಾಸೆಯ ಹೊಯ್ದಾಟದಲ್ಲಿ ಕೊನೆಗೂ ಭರವಸೆಯೇ ಗೆದ್ದಿದೆ. ಪರ್ವತದ ಎದುರಿನ ಮಾನವ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿದೆ. ನಮ್ಮ ದೇಶದಲ್ಲಿ ಹಿಂದೆಂದೂ ಇಂತಹ ವಿದ್ಯಮಾನ ನಡೆದಿರಲಿಲ್ಲ. ಹಗಲು–ರಾತ್ರಿ ಎನ್ನದೆ ಸತತವಾಗಿ ಕೆಲಸ ಮಾಡಿ, ಅಪಾಯದಲ್ಲಿ ಸಿಲುಕಿದವರಿಗೆ ಮರುಜೀವ ನೀಡಿ, ಅವರನ್ನು ಹೊರ ಕರೆತಂದಿರುವುದೊಂದು ಅತ್ಯಪೂರ್ವ ಘಟನೆಯಾಗಿದೆ. ಅಂತರರಾಷ್ಟ್ರೀಯ ಸುರಂಗ ತಜ್ಞರಿಂದ ಹಿಡಿದು ಇಲಿ ಬಿಲ ತಂತ್ರದಲ್ಲಿ ಸುರಂಗ ಕೊರೆಯುವ ಸ್ಥಳೀಯ ನಿಪುಣರವರೆಗೆ ಎಲ್ಲರ ಶ್ರಮವೂ ಈ ಯಶಸ್ಸಿನ ಹಿಂದಿದೆ. ಭಾರತೀಯ ಸೇನೆಯ ಜೊತೆಗೆ ಡಜನ್‌ಗಟ್ಟಲೆ ಏಜೆನ್ಸಿಗಳು ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದವು. ಎಲ್ಲ ಏಜೆನ್ಸಿಗಳ ಪರಿಣತಿಯೂ ಇಲ್ಲಿ ಕೆಲಸ ಮಾಡಿದೆ. ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಎಲ್ಲರ ಜೊತೆಗೂ ಸಮನ್ವಯ ಸಾಧಿಸಿ, ಕಾರ್ಯಾಚರಣೆಗೆ ಬೇಕಾದ ಸಕಲ ವ್ಯವಸ್ಥೆಯನ್ನೂ ಮಾಡಿದ ಉತ್ತರಾಖಂಡ ರಾಜ್ಯ ಸರ್ಕಾರದ ಕೆಲಸ ಸ್ತುತ್ಯರ್ಹ. ಕೇಂದ್ರ ಸರ್ಕಾರ ಕೂಡ ಈ ಕಾರ್ಯಾಚರಣೆಗೆ ಬೆಂಬಲವಾಗಿ ನಿಂತಿತ್ತು ಎನ್ನುವುದನ್ನು ಮರೆಯುವಂತಿಲ್ಲ. ಸುರಂಗ ಕುಸಿತದ ಆರಂಭದಿಂದಲೂ ಈ ಘಟನೆಯನ್ನು ತಾಳ್ಮೆಯಿಂದ, ಅಷ್ಟೇ ಜಾಣ್ಮೆಯಿಂದ ನಿರ್ವಹಿಸುತ್ತಾ ಬರಲಾಗಿತ್ತು. ಸುರಂಗದೊಳಗೆ ಕಾರ್ಮಿಕರು ಸಿಲುಕಿರುವುದು ಗೊತ್ತಾಗುತ್ತಿದ್ದಂತೆ ಆಮ್ಲಜನಕ ಪೂರೈಕೆಗೆ ಮೊದಲು ಪುಟ್ಟದೊಂದು ಕೊಳವೆಮಾರ್ಗ ಅಳವಡಿಸಲಾಯಿತು. ಆ ಮಾರ್ಗದ ಮೂಲಕವೇ ಜೀವರಕ್ಷಕ ಔಷಧಿಗಳನ್ನೂ ಪೂರೈಸಲಾಯಿತು. 'ನಿಮ್ಮನ್ನು ಸಂರಕ್ಷಿಸುವ ಕಾರ್ಯ ನಡೆದಿದೆ, ತಾಳ್ಮೆಯಿಂದಿರಿ' ಎಂಬ ಸಂದೇಶವನ್ನು ಕಾರ್ಮಿಕರಿಗೆ ತಲುಪಿಸಲಾಯಿತು. ಆಹಾರ ಪೂರೈಕೆಗೆ ಮತ್ತೊಂದು ತುಸು ದೊಡ್ಡ ಮಾರ್ಗವನ್ನೂ ಅಳವಡಿಸಲಾಯಿತು. ಸುರಂಗದ ಒಳಗಡೆ ಪುಟ್ಟ ಕ್ಯಾಮೆರಾ ಕಳುಹಿಸಿ, ಕಾರ್ಮಿಕರೆಲ್ಲ ಸುರಕ್ಷಿತವಾಗಿ ಇರುವುದನ್ನು ಹೊರಜಗತ್ತಿಗೆ ಖಚಿತಪಡಿಸಲಾಯಿತು. ಒಂದು ರಕ್ಷಣಾ ಕಾರ್ಯಾಚರಣೆ ಹೇಗೆ ನಡೆಯಬೇಕು ಎನ್ನುವುದಕ್ಕೆ ಇಲ್ಲಿನ ಚಟುವಟಿಕೆಗಳು ಮಾದರಿಯಾಗಿದ್ದವು. ಪರ್ವತವು ಮೇಲಿಂದ ಮೇಲೆ ಒಡ್ಡುತ್ತಾ ಬಂದ ಸವಾಲುಗಳನ್ನು ಸಾವಧಾನದಿಂದ ಎದುರಿಸುತ್ತಾ, ಪರಿಹಾರ ಕಂಡುಕೊಳ್ಳುತ್ತಾ ಮುನ್ನುಗ್ಗಲಾಯಿತು. ಈಗ ಕುಟುಂಬದವರ ಜೊತೆ ಕುಳಿತು ಕಾರ್ಮಿಕರು ಬೀರುತ್ತಿರುವ ಮಂದಹಾಸದಲ್ಲಿ ಇಡೀ ಕಾರ್ಯಾಚರಣೆಯ ಸಾರ್ಥಕ್ಯ ಎದ್ದು ಕಾಣುತ್ತಿದೆ.



ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರು ಯಾವುದೇ ಅಪಾಯವಿಲ್ಲದೆ ಪಾರಾಗಿರುವುದು ನಿಜವಾದರೂ ಈ ಪ್ರಕರಣ ಕೆಲವು ಪಾಠಗಳನ್ನೂ ನಮಗೆ ಕಲಿಸಿದೆ

ಉತ್ತರಾಖಂಡದ ಚಾರ್‌ಧಾಮ್ ಧಾರ್ಮಿಕ ಕ್ಷೇತ್ರಗಳನ್ನು ಸಂಪರ್ಕಿಸುವ 890 ಕಿ.ಮೀ. ಉದ್ದದ ಹೆದ್ದಾರಿ ಜಾಲ ನಿರ್ಮಿಸುವ ಭಾಗವಾಗಿ ಸಿಲ್ಕ್ಯಾರಾ–ಬಡಕೋಟ್ ಸುರಂಗದ ನಿರ್ಮಾಣ ಕಾರ್ಯ ನಡೆದಿತ್ತು. ಹೇಳಿಕೇಳಿ, ಉತ್ತರಾಖಂಡವು ಹಿಮಾಲಯದ ಬೀಡು. ಜಗತ್ತಿನ ಇತರ ಪರ್ವತ ಪ್ರದೇಶಗಳಿಗೆ ಹೋಲಿಸಿದರೆ ಹಿಮಾಲಯ ಪರ್ವತ ಶ್ರೇಣಿ ಇನ್ನೂ ತರುಣವಾಗಿದೆ, ಅದು ಈಗಲೂ ಗಟ್ಟಿಯಾಗಿ ನೆಲೆಗೊಳ್ಳುವ ಪ್ರಕ್ರಿಯೆಯಲ್ಲಿದೆ ಎನ್ನುವುದು ತಜ್ಞರ ಅಭಿಮತ. ಹೀಗಾಗಿಯೇ ಅದರ ಮಣ್ಣು ಸಡಿಲವಾಗಿದೆ. ಅಲ್ಲದೆ, ಆಗಾಗ ಇಲ್ಲಿ ಸಣ್ಣ ಭೂಕಂಪನಗಳೂ ಸಂಭವಿಸುತ್ತವೆ. ಹಿಮಾಲಯದ ಭೂಗುಣವನ್ನು ಸರಿಯಾಗಿ ಗ್ರಹಿಸದೆ ಆ ಪ್ರದೇಶದಲ್ಲಿ ಇಷ್ಟೊಂದು ಬೃಹತ್ ಪ್ರಮಾಣದ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸುವುದು ತರವೇ ಎನ್ನುವ ಪ್ರಶ್ನೆ ಬಲವಾಗಿ ಕೇಳಿಬರುತ್ತಿದೆ. ಇದೇ ವರ್ಷ, ನೂರಾರು ಕಡೆಗಳಲ್ಲಿ ಭೂಕುಸಿತಕ್ಕೂ ಉತ್ತರಾಖಂಡ ಸಾಕ್ಷಿಯಾಗಿದೆ. ಅಲ್ಲಿ, ಜಲವಿದ್ಯುತ್ ಯೋಜನೆಗಳಿಗೆ, ರೈಲು ಮಾರ್ಗಗಳಿಗೆ ಎಗ್ಗಿಲ್ಲದೆ ಪರ್ವತಗಳ ಒಡಲು ಬಗೆಯಲಾಗಿದೆ. ಇಂತಹ ಅಭಿವೃದ್ಧಿ ಯೋಜನೆಗಳು ನಮ್ಮನ್ನು ಎಲ್ಲಿಗೆ ಹೋಗಿ ಮುಟ್ಟಿಸಲಿವೆ? ಸರ್ಕಾರಗಳು ಗಂಭೀರವಾಗಿ ಯೋಚಿಸಬೇಕಾದ ಪ್ರಶ್ನೆ ಇದು. 'ಪರ್ವತಗಳು ನಮ್ಮನ್ನು ವಿನೀತರನ್ನಾಗಿ ಯೋಚಿಸುವಂತೆ ಮಾಡಿವೆ' ಎಂಬ ಅಂತರರಾಷ್ಟ್ರೀಯ ಸುರಂಗತಜ್ಞ ಅರ್ನಾಲ್ಡ್ ಡಿಕ್ಸ್ ಅವರ ಮಾತು ತುಂಬಾ ಅರ್ಥಪೂರ್ಣ. ನಾವು ಇಂತಹ ಪ್ರದೇಶಗಳಲ್ಲಿ ಯೋಜನೆ ರೂಪಿಸುವಾಗ ಇನ್ನಷ್ಟು ವಿನೀತರಾಗಿ ಆಲೋಚಿಸಬೇಕು. ಘಟನೆಯಲ್ಲಿ ಕಾರ್ಮಿಕರು ಯಾವುದೇ ಅಪಾಯವಿಲ್ಲದೆ ಪಾರಾಗಿರುವುದು ನಿಜವಾದರೂ ಯಾವುದೇ ಕಾಮಗಾರಿ ಕೈಗೊಳ್ಳುವಾಗ ಅವರ ಸುರಕ್ಷತೆಗೆ ಗರಿಷ್ಠ ಆದ್ಯತೆ ನೀಡಬೇಕು. ಪ್ರತಿಕೂಲ ಸನ್ನಿವೇಶಗಳು ಎದುರಾದಾಗ ಪರ್ಯಾಯ ಮಾರ್ಗಗಳ ಕುರಿತು ಮುಂಚಿತವಾಗಿಯೇ ಮಾಹಿತಿ ಹೊಂದಿರಬೇಕು. ಇದು, ಸುರಂಗ ಕುಸಿತ ಪ್ರಕರಣ ನಮಗೆ ಕಲಿಸಿರುವ ಪಾಠ. ಯಂತ್ರವೂ ಸೋತು ನಿಂತಾಗ ಕಡೆಯ ಕ್ಷಣದ ಅಡೆತಡೆ ನಿವಾರಿಸಿದ ಇಲಿ ಬಿಲ ತಂತ್ರದಲ್ಲಿ ಸುರಂಗ ಕೊರೆಯುವ ನಿಪುಣರು ಮಾನವೀಯ ಪ್ರಯತ್ನದ ಹಿರಿಮೆಯನ್ನು ಹೊಸದೊಂದು ಎತ್ತರಕ್ಕೆ ಒಯ್ದಿದ್ದಾರೆ. ಮಾಡಿದ ಕೆಲಸಕ್ಕಾಗಿ ಸರ್ಕಾರ ಸಂಭಾವನೆ ಕೊಡಲು ಹೋದರೆ, 'ಕಾರ್ಮಿಕರು ಸುರಕ್ಷಿತವಾಗಿ ಬಂದಿದ್ದೇ ನಮಗೆ ಸಿಕ್ಕ ಸಂಭಾವನೆ' ಎಂದಿದ್ದಾರೆ. 17 ದಿನಗಳ ಕತ್ತಲವಾಸ ಕೊನೆಗೊಳಿಸುವಲ್ಲಿ ಮಾತ್ರವಲ್ಲ, ಮಾನವೀಯತೆಯನ್ನು ಗೆಲ್ಲಿಸುವಲ್ಲಿಯೂ ಈ ಕಾರ್ಯಾಚರಣೆ ಯಶಸ್ವಿಯಾಗಿದೆ.

ದಿನದ ಟ್ವೀಟ್


ನೈಪುಣ್ಯಕ್ಕೆ ಸಿಗಲಿ ಮನ್ನಣೆ



ಸುರಂಗದಲ್ಲಿನ ಯಶಸ್ವಿ ಕಾರ್ಯಾಚರಣೆಯು ನವೀನ ತಂತ್ರಜ್ಞಾನ ಮತ್ತು ಅಸಾಂಪ್ರದಾಯಿಕವಾದ ರ್‍ಯಾಟ್- ಹೋಲ್ ಮೈನಿಂಗ್ ತಂತ್ರ ನಿಪುಣರನ್ನು ಒಳಗೊಳ್ಳುವಂತಹ ಭಿನ್ನವಾದ ಆಲೋಚನೆಯ ಸಮ್ಮಿಶ್ರಣವಾಗಿದೆ. ಫಲಿತಾಂಶವು ಶ್ಲಾಘನೀಯವಾಗಿದೆ. ರ್‍ಯಾಟ್-ಹೋಲ್ ಮೈನಿಂಗ್ ತಂತ್ರ ನಿಪುಣರನ್ನು ರಕ್ಷಣಾ ಕಾರ್ಯಾಚರಣೆ ಹಾಗೂ ರಾಷ್ಟ್ರ ಸೇವೆಯಂತಹ ಕಾನೂನುಬದ್ಧ ಕಾರ್ಯಗಳಲ್ಲಿ ತೊಡಗಿಸಬೇಕಾದ ಸಮಯ ಇದಾಗಿದೆ.

ಸಿದ್ಧಾರ್ಥ್ ಲೂತ್ರ, ಸುಪ್ರೀಂ ಕೋರ್ಟ್ ವಕೀಲ

ಕಿಡಿನುಡಿ



ಮೈಸೂರು ಸುತ್ತಮುತ್ತ ಹೆಣ್ಣು ಭ್ರೂಣಹತ್ಯೆ ವ್ಯಾಪಕವಾಗಿದ್ದರೂ ತಡವಾಗಿ ಬೆಳಕಿಗೆ ಬಂದಿರುವುದಕ್ಕೆ ಅಧಿಕಾರಿಗಳ ಲೋಪವೇ ಕಾರಣ. ಯಾರೇ ಭಾಗಿಯಾಗಿದ್ದರೂ ಕ್ರಮ ಜರುಗಿಸಬೇಕು. ಪೋಷಕರು ಭ್ರೂಣ ಹತ್ಯೆಯಂತಹ ಪಾಪದ ಕಾರ್ಯದಲ್ಲಿ ಭಾಗಿಯಾಗಬಾರದು. ತಂದೆ-ತಾಯಂದಿರ ರಕ್ಷಣೆಯಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಹತ್ತು ಪಟ್ಟು ಮುಂದಿದ್ದಾರೆ ಎಂಬುದನ್ನು ಮರೆಯಬಾರದು.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ — ಸೋಮವಾರ, 30-11-1998

• ಮೂರು ರಾಜ್ಯಗಳಲ್ಲಿ ಸರ್ಕಾರ ರಚಿಸಲು ಕಾಂಗ್ರೆಸ್ ಸಿದ್ಧತೆ

ನವದೆಹಲಿ, ನ. 29– ಬಿಜೆಪಿ ವಿರೋಧಿ ಅಲೆಯಿಂದಾಗಿ ರಾಜಸ್ಥಾನ, ದೆಹಲಿ ಮತ್ತು ಮಧ್ಯಪ್ರದೇಶದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷ, ಈ ರಾಜ್ಯಗಳಲ್ಲಿ ಸರ್ಕಾರ ರಚಿಸಲು ಸಿದ್ಧವಾಗಿದೆ.

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ, ಕಾಂಗ್ರೆಸ್ ಶಾಸಕರು ಡಿ. 1ರಂದು ಸಭೆ ಸೇರುವರು ಎಂದು ಪಕ್ಷದ ವಕ್ತಾರರು ತಿಳಿಸಿದ್ದಾರೆ.

• ಸುಂದರ ಕನ್ನಡ ಭವನ ನಾಡಿಗೆ ಸಮರ್ಪಣೆ

ಬೆಂಗಳೂರು, ನ. 29– ಹಿತವಾದ ಚಳಿಯ ಎಳೆ ಬಿಸಿಲಿನ ಹಗಲಲ್ಲಿ, ಪ್ರಖ್ಯಾತ ಗಾಯಕ-ಗಾಯಕಿಯರಿಂದ ಹರಿದ ಗಾನ ಲಹರಿ ಹಿನ್ನೆಲೆಯ ಆಹ್ಲಾದ ವಾತಾವರಣದಲ್ಲಿ ಸಾಂಸ್ಕೃತಿಕ ಸೌಧ 'ಕನ್ನಡ ಭವನ' ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರಿಂದ ಇಂದು ಇಲ್ಲಿ ನಾಡಿಗೆ ಸಮರ್ಪಿತವಾಯಿತು.

50 ವರ್ಷಗಳ ಹಿಂದೆ — ಶುಕ್ರವಾರ, 30-11-1973

• ಮಂಡ್ಯದಲ್ಲಿ ಬೃಹತ್ ವಿದ್ಯಾರ್ಥಿ ಪ್ರದರ್ಶನ, ಪ್ರತಿಕೃತಿ ದಹನ

ಮಂಡ್ಯ, ನ. 29– ಪೌರಾಡಳಿತ ಸಚಿವ ಬಸವಲಿಂಗಪ್ಪ ಅವರು ಕನ್ನಡದ ಬಗ್ಗೆ 'ಅಪಹಾಸ್ಯಕರ'ವಾಗಿ ಮಾತನಾಡಿದ ಬಗ್ಗೆ ಪ್ರತಿಭಟಿಸಲು ಮಂಡ್ಯ ಕಾಲೇಜು ವಿದ್ಯಾರ್ಥಿಗಳು ಇಂದು ತರಗತಿಗಳಿಗೆ ಹಾಜರಾಗದೆ ಮುಷ್ಕರ ಹೂಡಿದರು. ಸಿಲ್ವರ್ ಜ್ಯುಬಿಲಿ ಪಾರ್ಕ್ ದ್ವಾರದ ಬಳಿ ಸಚಿವರ ಪ್ರತಿಕೃತಿಯನ್ನು ದಹನ ಮಾಡಿದರು.

ಈ ಸಚಿವರಿಗೆ ಮಂಡ್ಯ ಪ್ರವೇಶಿಸಲು ಅವಕಾಶ ಕೊಡಬಾರದು ಎಂದು ವಿದ್ಯಾರ್ಥಿಗಳು ಪ್ರತಿಜ್ಞೆ ಸ್ವೀಕರಿಸಿದರು.

• ಬಂಗಾರಕ್ಕೆ ಬೆಲೆ ಪುಟಿತ

ಮುಂಬೈ, ನ. 29– ಈಚೆಗೆ ಇಳಿಮುಖವಾಗಿದ್ದ ಚಿನ್ನದ ಬೆಲೆ ಇಂದು ಇಲ್ಲಿನ ಪೇಟೆಯಲ್ಲಿ 10 ಗ್ರಾಂಗೆ ಸುಮಾರು 13 ರೂ.ಗಳಷ್ಟು ಏರಿತು. ಅಪರಂಜಿ ರೂ.322ರಿಂದ 335ಕ್ಕೂ, ಸ್ಟ್ಯಾಂಡರ್ಡ್ ಚಿನ್ನ ರೂ.334.50ರಿಂದ 342ಕ್ಕೂ ಏರಿದವು. ಹತ್ತು ತೊಲದ ವಿದೇಶಿ ಚಿನ್ನದ ಬಿಸ್ಕತ್ತು 3,760 ರೂ. ನಿಂದ 3,900 ರೂ. ಗೆ ಪುಟಿಯಿತು.

ಜೀವನ, ಸಂತೋಷದ ನಡುವಿನ ಸಂಬಂಧವನ್ನು ಕೆಲಸದ ಪರಿಕಲ್ಪನೆ ತುಂಡರಿಸಿದೆ

ಕಾಯಕವಾದೀತೆ ಕಲೆಯ ನೆಲೆ?



ಅನುತ್ತರ

ಎಸ್.ಸೂರ್ಯಪ್ರಕಾಶ ಪಂಡಿತ್

'ದೇಶದ ಅಭಿವೃದ್ಧಿಗಾಗಿ ಯುವಕರು ವಾರಕ್ಕೆ 70 ಗಂಟೆಗಳಷ್ಟು ಕೆಲಸವನ್ನು ಮಾಡಬೇಕು'– ಉದ್ಯಮಿ ಎನ್.ಆರ್.ನಾರಾಯಣಮೂರ್ತಿ ಅವರ ಈ ಹೇಳಿಕೆಯ ಬಗ್ಗೆ ಪರ, ವಿರೋಧದ ಚರ್ಚೆಗಳು ನಡೆದವು. ಈ ಬರಹದ ಗುರಿ, ಈ ಹೇಳಿಕೆಯನ್ನು ಸಮರ್ಥಿಸುವುದೋ ಖಂಡಿಸುವುದೋ ಅಲ್ಲ. ಇದು, 'ಕೆಲಸ'ದ ಪರಿಕಲ್ಪನೆಯ ಅವಲೋಕನದ ಪ್ರಯತ್ನವಷ್ಟೆ.

ಪ್ರಸ್ತುತ 'ವರ್ಕ್', 'ಜಾಬ್' ಮತ್ತು 'ಲೇಬರ್'ಗಳು ಮುಪ್ಪುರಿಗೊಂಡ ಪದವಾಗಿ 'ವರ್ಕ್' ಎಂಬುದನ್ನು ಸ್ವೀಕರಿಸಲಾಗಿದೆ. 'ಕೆಲಸ', 'ಕ್ರಿಯೆ', 'ಕಾರ್ಯ', 'ಕರ್ಮ', 'ಉದ್ಯಮ', 'ನೌಕರಿ', 'ಜೀವನೋಪಾಯ', 'ಆದಾಯವನ್ನು ಗಳಿಸಲು ಅವಲಂಬಿಸಿದ ಕೆಲಸ', 'ದುಡಿತ', 'ದುಡಿಮೆ', 'ಕಾಯಕ', 'ದೈಹಿಕ–ಮಾನಸಿಕ ಶ್ರಮ' ಎಂಬೆಲ್ಲ ಅರ್ಥಗಳ ಛಾಯೆಯನ್ನು ಈ ಪದಸಮೂಹದಲ್ಲಿ ಒಪ್ಪಿಕೊಳ್ಳಲಾಗಿದೆ.

ಎಲ್ಲ ಸಂಸ್ಕೃತಿಗಳಲ್ಲೂ ಕೆಲಸದ (ಕರ್ಮ) ಪರಿಕಲ್ಪನೆ ಇದ್ದೇ ಇದೆ. ನಮ್ಮ ಸಂಸ್ಕೃತಿಯಲ್ಲಿ ಇಡಿಯ ಸೃಷ್ಟಿಯನ್ನೇ ಒಂದು ಕರ್ಮವನ್ನಾಗಿ ನೋಡಲಾಗಿದೆ. ವಿಶ್ವವನ್ನೂ ವಿಶ್ವಕ್ಕೆ ಬೇಕಾದುವನ್ನೂ ಸೃಷ್ಟಿಸುವವನೇ 'ವಿಶ್ವಕರ್ಮ'. ಆದರೆ ಅವನ ಈ ಸೃಷ್ಟಿ ಕ್ರಿಯೆಗೆ ಭಿತ್ತಿಯಾಗಿರುವುದು ಕೆಲಸವಲ್ಲ, ಲೀಲೆ; ಯಾಂತ್ರಿಕತೆಯಲ್ಲ, ಕುಶಲತೆ; ಆಯಾಸವಲ್ಲ, ಆನಂದ. ಆದರೆ ಇಂದು ಜಗತ್ತನ್ನೇ ಆಳುತ್ತಿರುವ 'ವರ್ಕ್'ನ ವ್ಯಾಪ್ತಿಯಲ್ಲಿ ದೂರವಾಗಿರುವ ವಿವರಗಳು: ಲೀಲೆ (= ಕ್ರೀಡೆ), ಕುಶಲತೆ, ಆನಂದ.

ನಮ್ಮ ಜೀವನದ ಗೊತ್ತು ಗುರಿಗಳಲ್ಲೂ 'ಪ್ರಗತಿ'ಯಲ್ಲಿಯೂ 'ವರ್ಕ್'ನ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಇದು ಇಂದು ಜಗತ್ತನ್ನು ಏಕಧಾರೆಯಲ್ಲಿ ಬಂಧಿಸಿರುವ ಜೀವನಸೂತ್ರವೇ ಆಗಿದೆಯೆನ್ನಿ!

'ಮನುಷ್ಯನು ನೂರು ವರ್ಷಗಳು ಕರ್ಮಗಳನ್ನು ಮಾಡುತ್ತಲೇ ಬದುಕಲು ಇಚ್ಛಿಸಬೇಕು' ಎಂಬ ಒಕ್ಕಣೆ ಪ್ರಾಚೀನ ಭಾರತದಲ್ಲಿತ್ತು. 'ನೂರು ವರ್ಷಗಳು' ಎನ್ನುವುದು ಪೂರ್ಣಾಯುಷ್ಯಕ್ಕೂ ಸಂತಸದ ಬದುಕಿಗೂ ಸಂಕೇತ. 'ಕರ್ಮ' ಎನ್ನುವುದು ಜೀವನಕ್ಕೆ ಅತ್ಯಂತ ಆವಶ್ಯಕವಾದ ಎಲ್ಲ ಬಗೆಯ ಕ್ರಿಯೆಗಳನ್ನೂ ಎತ್ತಿಹಿಡಿಯುತ್ತದೆ. 'ಜೀವನಕ್ಕೆ ಆವಶ್ಯಕವಾದುದೇ ಕೆಲಸ' ಎಂಬುದು ಪ್ರಾಚೀನ ಸಂಸ್ಕೃತಿಗಳ ಒಪ್ಪಿತ ಸೂತ್ರವಾಗಿತ್ತು. ವಿಜ್ಞಾನ–ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಹುಟ್ಟಿಕೊಂಡ ಕೈಗಾರಿಕಾ ಕ್ರಾಂತಿಯು ಕರ್ಮ, ಎಂದರೆ ದುಡಿಮೆಯ ಈ ಪರಿಭಾಷೆಯನ್ನೇ ಬದಲಾಯಿಸಿತು. ಪ್ರಾಚೀನ ಕಾಲದಲ್ಲಿ, ಜೀವನಕ್ಕೆ ಆವಶ್ಯಕವಾದ ಸಾಧನ, ಸಲಕರಣೆಗಳನ್ನು ಪೂರೈಸುತ್ತಿದ್ದ ವೃತ್ತಿ, ಎಂದರೆ ಕೆಲಸಗಳನ್ನು 'ಕಲೆ' ಎಂದೂ, ಹಾಗೆ ಸಿದ್ಧಮಾಡಿಕೊಡುತ್ತಿದ್ದವನನ್ನು 'ಶಿಲ್ಪಿ' ಎಂದೂ ಪರಿಗಣಿಸಲಾಗುತ್ತಿತ್ತು. ಈ ಸಲಕರಣೆಗಳ ಆವಶ್ಯಕತೆಯಿದ್ದವನು 'ಪೋಷಕ'. ಆಧುನಿಕ ಕೈಗಾರಿಕೆಗಳು ಮಾಡಿದ ಮೊದಲ 'ಕ್ರಾಂತಿ' ಎಂದರೆ ಈ ಕಲೆ, ಶಿಲ್ಪಿ ಮತ್ತು ಪೋಷಕ ಎಂಬ ಕೂಡುಕುಟುಂಬವನ್ನು ಒಡೆದುಹಾಕಿದ್ದು! 'ಪ್ರಾಡಕ್ಟ್', 'ಲೇಬರ್' ಮತ್ತು 'ಓನರ್'ಗಳ ಸೃಷ್ಟಿಯೊಂದಿಗೆ ಜನಪದಗಳು ಮರೆಯಾದವು, ಮಾರುಕಟ್ಟೆಗಳು ತಲೆಯೆತ್ತಿದವು. ಪ್ರಾಚೀನ ಜನಜೀವನವನ್ನು ಧರ್ಮ ಮತ್ತು ಧಾರ್ಮಿಕ ನಂಬಿಕೆ, ಸಿದ್ಧಾಂತಗಳು ನಿರ್ದೇಶಿಸುತ್ತಿದ್ದವು. ಆಧುನಿಕ ಜೀವನವಿಧಾನದಲ್ಲಿ 'ವರ್ಕ್' ಎಂಬುದೇ 'ಧರ್ಮ'ವಾಯಿತು. ಹೀಗಾಗಿ, ಈ ನೂತನ ಧರ್ಮದ ಕಟ್ಟುಪಾಡುಗಳನ್ನು ರೂಪಿಸಲು, ಸ್ಥಾಪಿಸಲು ನೂತನ ಸಿದ್ಧಾಂತಗಳು ಹುಟ್ಟಿಕೊಳ್ಳುವುದು ಅನಿವಾರ್ಯವಾಯಿತು.

ನೂತನ 'ಸಂಸ್ಕೃತಿ'ಯಾಗಿ ರೂಪುಗೊಂಡ 'ವರ್ಕ್ ಕಲ್ಚರ್'ನ ಪ್ರಧಾನ 'ಕೊಡುಗೆ' ಎಂದರೆ ಜೀವನಕ್ಕೂ ದುಡಿಮೆಗೂ ಇದ್ದ ನೇರನಂಟನ್ನು ಕತ್ತರಿಸಿದ್ದು. ಇದರ ತಾತ್ತ್ವಿಕ ವ್ಯಾಖ್ಯಾನ ಎಂದರೆ, 'ಸ್ವಧರ್ಮ'ಕ್ಕೂ (= Vocation) ಜೀವನಧರ್ಮಕ್ಕೂ ಇದ್ದ ಸಂಬಂಧದ ನಾಶ, ಕಲೆಗೂ ವೃತ್ತಿಗೂ ಇದ್ದ ರಕ್ತಸಂಬಂಧದ ವಿಚ್ಛೇದ, ಇದರ ಸರಳಾರ್ಥ: ವಾರದ ಆರು ದಿನಗಳನ್ನು ಒಂದು ಗುಂಪಿಗೂ ಭಾನುವಾರವನ್ನು ಇನ್ನೊಂದು ಗುಂಪಿಗೂ ಸೇರಿಸಿದ್ದು. ವಾರದಲ್ಲಿ ಐದಾರು ದಿನಗಳು ದುಡಿಮೆ ದುಡಿಮೆ ದುಡಿಮೆ. ವಾರಪೂರ್ತಿ ದೈಹಿಕ–ಮಾನಸಿಕ ಸಜಾ. ಬಳಿಕ ಒಂದೆರಡು ದಿನಗಳ ವಿರಾಮ, ಆರಾಮ. ವಾರಾಂತ್ಯದಲ್ಲಿ ಮಜಾ!

25–30 ವರ್ಷಗಳ ಹಿಂದೆ ನಗರಗಳಲ್ಲಿ ಭಾನುವಾರಗಳಂದು ರಸ್ತೆಗಳು ಖಾಲಿಯಾಗಿರುತ್ತಿದ್ದವು, ಬಹುಪಾಲು ವ್ಯಾಪಾರಕೇಂದ್ರಗಳು ಮುಚ್ಚಿರುತ್ತಿದ್ದವು. ಆದರೆ ಇಂದಿನ ಭಾನುವಾರಗಳಂದು ಹೋಟೆಲ್‌ಗಳು, ಮಾಲ್‌ಗಳು, 'ಎಂ.ಜಿ. ರೋಡ್', 'ಬ್ರಿಗೇಡ್ ರೋಡ್'ಗಳು ಹೇಗಿರುತ್ತವೆ? ಹೌದು, ಕೈಗಾರಿಕೆಗಳು ನಗರಗಳನ್ನು ಸೃಷ್ಟಿಸಿದವು, ಜೊತೆಗೆ 'ಸ್ಲಂ'ಗಳನ್ನೂ ಸೃಷ್ಟಿಸಿದವು, ಸ್ಥಳೀಯ ಸಂಸ್ಕೃತಿಗಳ ಆತ್ಮಹತ್ಯೆಗಳನ್ನೂ ಪ್ರೋತ್ಸಾಹಿಸಿದವು, 'ಗ್ಲೋಬಲ್ ವಿಲೇಜ್'ನ ಘೋಷಣೆಯಲ್ಲಿ ಅಕ್ಕಪಕ್ಕದವರನ್ನೇ ಅಪರಿಚಿತರನ್ನಾಗಿಸಿದವು.

'ಇಂಡಸ್ಟ್ರಿ ವಿಥೌಟ್ ಆರ್ಟ್ ಈಸ್ ಬ್ರೂಟ್ಯಾಲಿಟಿ' ಎಂಬ ಮಾತಿನಲ್ಲಿ ಈ ವಿಚ್ಛೇದನದ ಎಲ್ಲ ಆಯಾಮಗಳೂ ಅಡಕವಾಗಿವೆ. ಮನುಷ್ಯ ಒಂದು ಕ್ಷಣವೂ ಕರ್ಮ ಮಾಡದಿರಲು ಸಾಧ್ಯವೇ ಇಲ್ಲ. ಆದರೆ ಆಧುನಿಕ 'ಕರ್ಮಸಿದ್ಧಾಂತ' ಪ್ರತಿಪಾದಿಸುವ ಕ್ರಿಯಾಶೀಲತೆ ಎಂದರೆ 'ಕೆಲಸ ಕೆಲಸ ಕೆಲಸ'. ಹೀಗಾಗಿಯೇ, ನಾವು ತಿನ್ನುವ ಅನ್ನ, ಕಲಿಯುವ ಅಕ್ಷರ, ಪಡೆಯುವ ಆಶ್ರಯ, ಪಡೆಯಲು ಬಯಸುವ ಆನಂದ ಎಲ್ಲವೂ 'ವರ್ಕ್' ವ್ಯೂಹದ ಸುತ್ತಲೇ ಸುತ್ತುತ್ತಿರುವುದು. ಸಾವಿರಾರು ವರ್ಷಗಳ ಜೀವನಸೌಂದರ್ಯವನ್ನೂ ಸಂಸ್ಕೃತಿಯನ್ನೂ ಉಧ್ವಸ್ತಗೊಳಿಸಿ ತಲೆಯೆತ್ತಿರುವ 'ಮಾರುಕಟ್ಟೆ'ಗಳ ಕೂಗಾಟಗಳಲ್ಲಿ ನಮ್ಮ ದನಿಯನ್ನೂ ಕೇಳಿಸಿಕೊಳ್ಳದಷ್ಟು ಸೂಕ್ಷ್ಮತೆಯನ್ನು ಕಳೆದುಕೊಂಡಿದ್ದೇವೆ. ಹೀಗಿರುವಾಗ, ನಾವು ಯಾರಿಗಾಗಿ ದುಡಿಯುತ್ತಿದ್ದೇವೆ, ಯಾವುದಕ್ಕಾಗಿ ದುಡಿಯುತ್ತಿದ್ದೇವೆ, ಹೇಗೆ ದುಡಿಯುತ್ತಿದ್ದೇವೆ ಎಂಬ ಮನನಕ್ಕೆ ಅವಕಾಶವಾದರೂ ಎಲ್ಲಿದ್ದೀತು?



ತಂತ್ರಜ್ಞಾನದ ಸೃಷ್ಟಿಯೇ ಆದ ಇಂದಿನ 'ವರ್ಕ್ ವರ್ಲ್ಡ್'ನಲ್ಲಿ ತಂತ್ರಜ್ಞಾನದ ಇನ್ನೊಂದು ಸೃಷ್ಟಿಯೇ ಆದ ಯಂತ್ರಗಳು ಮಾನವನ ಸ್ಥಾನವನ್ನು ಆಕ್ರಮಿಸುತ್ತಿವೆ ಎಂಬ ಆತಂಕವೂ ಇದೀಗ ಎದುರಾಗುತ್ತಿದೆ. ಮನುಷ್ಯನನ್ನು ಯಂತ್ರಗಳು ಎತ್ತಂಗಡಿ ಮಾಡಬಲ್ಲವು ಎಂದರೆ, ಮನುಷ್ಯನು ಯಂತ್ರದಂತೆಯೇ ಇದ್ದಾನೆಂದು ಅರ್ಥವಲ್ಲವೆ?!

ಇಂದಿನ 'ವರ್ಕ್ ಕಲ್ಚರ್'ನ ಕಬಂಧಬಾಹುಗಳು ನಮ್ಮ ಜೀವನಕ್ಕೂ ಕಲೆಗೂ ಸಂತೋಷಕ್ಕೂ ಇರುವ ಸಾವಯವ ಸಂಬಂಧವನ್ನು ತುಂಡರಿಸುವ ಮೂಲಕ ಮೂಡಿಸಿರುವ ಬಿರುಕಿನ ಬಗ್ಗೆ ಆನಂದ ಕುಮಾರಸ್ವಾಮಿ ಹೀಗೆಂದಿದ್ದಾರೆ: 'ಕಲೆಯಲ್ಲದ 'ಕೆಲಸ'ದಲ್ಲಿ ತೊಡಗಿದಮೇಲೆ ದೊರಕುವ ಬಿಡುವಿನ ವೇಳೆಯಲ್ಲಿ ಸಂತೋಷಪಡುವ ಜೀವನದ ಶ್ರೇಷ್ಠ ಸಂಗತಿಯೇ 'ಕಲೆ' ಎನ್ನುವುದು ಇತ್ತೀಚೆಗೆ ನಾವು ಒಪ್ಪಿರುವ ಕಲಾಸಿದ್ಧಾಂತವಾಗಿದೆ. ಕ್ಯಾನ್ವಾಸ್‌ನ ಮೇಲೆ ಚಿತ್ರ ಬರೆಯುವವರನ್ನೂ ಗೋಡೆಗೆ ಬಣ್ಣ ಬಳಿಯುವವರನ್ನೂ ಲೇಖನಿ ಬಳಸುವವರನ್ನೂ ಸುತ್ತಿಗೆ ಬಳಸುವವರನ್ನೂ 'ಕಲಾವಿದರು' ಮತ್ತು 'ಕೆಲಸಗಾರರು' ಎಂದು ಪ್ರತ್ಯೇಕವಾಗಿಸುವುದು ನಮ್ಮ ಸಂಸ್ಕೃತಿಯ ಭಾಗವಾಗಿದೆ. ನಮ್ಮ ನಾಗರಿಕತೆಯು ಧ್ಯಾನಶೀಲ ಜೀವನವನ್ನು ನಿತ್ಯ ಜೀವನದಿಂದ ಬೇರ್ಪಡಿಸಿರುವುದಂತೂ ದಿಟ. ಈ ಧ್ಯಾನಶೀಲತೆಯನ್ನು ಕಲಾಸಮಯದೊಂದಿಗೆ ಗಂಟುಹಾಕಿ, ಅದನ್ನು 'ಮನೋರಂಜನೆ' ಎನ್ನುತ್ತಿದ್ದೇವೆ. ಒಂದಂತೂ ದಿಟ, ಕಲೆ ಮತ್ತು ಕೆಲಸ– ಇವೆರಡು ಪರಸ್ಪರ ಹೊಂದಿಕೆಯಾಗದಂಥವು, ಪ್ರತ್ಯೇಕವಾಗಿರುವಂಥವು ಎಂದು ತೀರ್ಮಾನಿಸಿದ್ದೇವೆ. ಹೀಗಾಗಿಯೇ ಕಲೆಗೆ ನೆಲೆಯನ್ನು ಒದಗಿಸದ ಕಾರ್ಖಾನೆಗಳನ್ನು ಇತಿಹಾಸದಲ್ಲಿ ಮೊದಲ ಬಾರಿಗೆ ನಾವು ಸೃಷ್ಟಿಸಿದ್ದೇವೆ.'

'ಇಂದು ನಾವು ಮ್ಯೂಸಿಯಂಗಳಲ್ಲಿ ನಮ್ಮ ಪೂರ್ವಜರ ಕಾಲದ ವಸ್ತುಗಳನ್ನು ಪ್ರದರ್ಶನಕ್ಕಿಟ್ಟಿದ್ದೇವೆ. ಇವನ್ನು ಅವರು ತಮ್ಮ ನೇರ ಬಳಕೆಗಾಗಿ ತಯಾರಿಸಿಕೊಂಡಿದ್ದರೇ ವಿನಾ, ಮುಂದೆ ಎಂದೋ ನಾವು ಮ್ಯೂಸಿಯಂಗಳಲ್ಲಿ ಪ್ರದರ್ಶನಕ್ಕಿಡುತ್ತೇವೆ ಎಂದೇನಲ್ಲ' ಎಂಬ ಕುಮಾರಸ್ವಾಮಿಯವರ ಮಾತು, ನಮ್ಮ ಪೂರ್ವಜರು ಸಾಧಿಸಿದ್ದ ಕಲೆ ಮತ್ತು ಕಾಯಕಗಳ ಏಕತೆಗೆ ಸೂಚಕ. ಆದರೆ ಇಂದು ನಮ್ಮ ಕೆಲಸದ ದಿನಗಳು ಮತ್ತು ಸಂತೋಷದ ದಿನಗಳು ಬೇರೆ ಬೇರೆಯಾಗಿವೆ, ನಮ್ಮ ಮನೆಗಳಲ್ಲಿನ 'ಶೋಕೇಸ್'ಗಳಲ್ಲಿಡುವ ವಸ್ತುಗಳು ಮತ್ತು ಮನೆಯಲ್ಲಿ ದಿನವೂ ಬಳಸುವ ವಸ್ತುಗಳು ಬೇರೆ ಬೇರೆಯಾಗಿವೆ! ಎಂದರೆ, ಒಂದು ಕಾಲದ ಕಾಯಕಸಂಸ್ಕೃತಿಯು ನಮ್ಮ ಜೀವನವನ್ನೇ ಕಲೆಯನ್ನಾಗಿಸುತ್ತಿತ್ತು. ಆದರೆ ಇಂದಿನ ನಮ್ಮ ದುಡಿಮೆ ನಮಗೆ ಎಂಥ ಜೀವನವನ್ನು ಕೊಡುತ್ತಿದೆ?

'ಎಷ್ಟು ಗಂಟೆಗಳ ಕೆಲಸದಿಂದ ಅಭಿವೃದ್ಧಿ' ಎನ್ನುವುದಕ್ಕೂ ಮೊದಲು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ: 'ನಾವು ಮಾಡುತ್ತಿರುವ ಕೆಲಸಕ್ಕೂ ನಮ್ಮ ಜೀವನಕ್ಕೂ ಆನಂದಕ್ಕೂ ಕುಶಲತೆಗೂ ಇರುವ ನಂಟು ಎಂಥದ್ದು?'

ಚುರುಮುರಿ



ಹರಾಜು ಶುರು!

• ಗುರು ಪಿ.ಎಸ್.

'ಇದೇನ್ರೀ, ಮನುಷ್ಯರನ್ನೇ ಹರಾಜು ಹಾಕ್ತಾರಲ್ರೀ...' ಮತ್ತೆ ಶುರುವಾಗ್ತಿರೋ ಐಪಿಎಲ್‌ಗೆ ಕ್ರಿಕೆಟ್ ಆಟಗಾರರ ಹರಾಜು ಸುದ್ದಿ ಓದುತ್ತಾ ಹೇಳಿದಳು ಹೆಂಡತಿ.

'ಅದನ್ನ ಹರಾಜು ಅನ್ನೋದಕ್ಕಿಂತ ಇಂಗ್ಲಿಷ್‌ನಲ್ಲಿ ಆಕ್ಷನ್ ಅನ್ನು, ಹಿತವಾಗಿ ಕೇಳುತ್ತೆ' ಸಲಹೆ ನೀಡಿದೆ.

'ಆಕ್ಷನ್ನೋ ಹರಾಜೋ, ಒಟ್ನಾರೆ ದುಡ್ಡಿಗೆ ಮಾರಾಟ ಆಗ್ತಿರೋದಂತೂ ನಿಜ ಅಲ್ವಾ?'

'ಟ್ಯಾಲೆಂಟ್ ಇದ್ದವರನ್ನ ಮಾತ್ರ ಹರಾಜಾಕೋದು ಕಣೆ, ಈಗ ನನ್ನನ್ನ, ನಿನ್ನನ್ನ ಹರಾಜು ಹಾಕಿದ್ರೆ ಯಾರಾದರೂ ತಗೊಳ್ತಾರ?'

ಯಾವುದೇ ಪ್ರತಿಕ್ರಿಯೆ ಕೊಡದೆ, ಏನೋ ಯೋಚಿಸತೊಡಗಿದಳು ಮಡದಿ.

'ಯಾಕ್ ಮೇಡಂ, ಮೌನಕ್ಕೆ ಶರಣಾದ್ರಿ?'

'ಏನಿಲ್ಲ ರೀ, ನನಗೊಂದು ಐಡಿಯಾ ಬಂತು. ಕ್ರಿಕೆಟ್ ಆಟಗಾರರನ್ನ ಹರಾಜು ಹಾಕಿದಂಗೆ ರಾಜಕಾರಣಿಗಳನ್ನೂ ಹರಾಜು ಹಾಕಿ, ನಮ್ ನಮಗೆ ಬೇಕಾದ ಪಿಎಂ, ಸಿಎಂ, ಮಿನಿಸ್ಟರ್, ಎಮ್ಮೆಲ್ಲೆನ ಕೊಂಡುಕೊಂಡರೆ ಹೇಗಿರುತ್ತೆ?'

'ಅಷ್ಟೊಂದು ದುಡ್ಡು ಎಲ್ಲಿಂದ ತರ್ತೀಯ?'

'ನಮ್ ನಮ್ ರಾಜ್ಯದ ತೆರಿಗೆ ಹಣ ಕೊಟ್ಟು ಪರ್ಚೇಸ್ ಮಾಡೋಣ'.

'ಇನ್‌ಡೈರೆಕ್ಟ್ ಆಗಿ ಈಗ ಅದನ್ನೇ ಮಾಡ್ತಿಲ್ವ?' ನಾನು ನಕ್ಕೆ.

'ಲೀಡರ್ಸ್ ಆಯ್ತು, ಈ ಆಫೀಸರ್ಸ್‌ನ ಹೇಗೆ ಸೆಲೆಕ್ಟ್ ಮಾಡಿಕೊಳ್ಳೋದು ಗೊತ್ತಾಗ್ತಿಲ್ಲ. ಇದಕ್ಕೆ ನೀವು ಐಡಿಯಾ ಕೊಡಿ'.

'ಅವರನ್ನೂ ಹರಾಜಿನಲ್ಲೇ. ಆದರೆ, ಇದು ಉಲ್ಟಾ ಪ್ರಕ್ರಿಯೆ'.

'ಅಂದ್ರೆ?'

'ಅಂದ್ರೆ, ಐಪಿಎಲ್‌ನಲ್ಲಿ ಬೇಕಾದ ಪ್ಲೇಯರನ್ನ ಆ ಫ್ರ್ಯಾಂಚೈಸಿ ಮಾಲೀಕರೇ ದುಡ್ಡು ಕೊಟ್ಟು ಖರೀದಿಸ್ತಾರಲ್ವ. ಆದರೆ, ಇಲ್ಲಿ ತನಗೆ ಬೇಕಾದ ಪ್ಲೇಸ್‌ಗೆ ಹೋಗಬೇಕೆಂದರೆ ಆ ಆಟಗಾರನೇ 'ಓನರ್'ಗೆ ದುಡ್ಡು ಕೊಡಬೇಕಾಗುತ್ತೆ, ಅಷ್ಟೇ'.

'ಹೌದಾ! ಚೆನ್ನಾಗಿದೆಯಲ್ರೀ, ಏನ್ರೀ ಈ ಆಟದ ಹೆಸರು?'

'ವರ್ಗಾವಣೆ'.

ಸಂಗತ

ಜಂಗಲ್‌ಜಿಮ್ ನಿರ್ವಹಣೆ ಎಲ್ಲರ ಹೊಣೆ

ಉದ್ಯಾನಗಳಲ್ಲಿ ವ್ಯಾಯಾಮ ಮಾಡಲು ಅಳವಡಿಸಿರುವ ಸಾಧನಗಳು ಜನರಿಗೆ ಅನುಕೂಲಕರವಾಗಿದ್ದರೂ ಸೂಕ್ತ ನಿರ್ವಹಣೆ ಇಲ್ಲದೆ ಬಹುತೇಕ ದುಃಸ್ಥಿತಿಯಲ್ಲಿ ಇವೆ

• ಡಾ. ಕೆ.ಎಸ್.ಚೈತ್ರಾ

ಆರೋಗ್ಯ ಕಾಯ್ದುಕೊಳ್ಳುವಲ್ಲಿ ನಮ್ಮ ಜೀವನಶೈಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬ ಬಗ್ಗೆ ಈಗ ಜನಜಾಗೃತಿ ಮೂಡಿದೆ. ಪರಿಣಾಮವಾಗಿ, ಪ್ರತಿಯೊಬ್ಬರೂ ಆಹಾರದ ಬಗೆಗಷ್ಟೇ ಅಲ್ಲ ವ್ಯಾಯಾಮದ ಕುರಿತೂ ಗಮನ ನೀಡುತ್ತಿದ್ದಾರೆ.

ಆರಂಭದಲ್ಲಿ ನಡಿಗೆಗಷ್ಟೇ ಸೀಮಿತವಾಗಿದ್ದ ವ್ಯಾಯಾಮ, ಜಿಮ್‌ಗಳ ಸ್ಥಾಪನೆಯ ನಂತರ ಹೊಸದೊಂದು ಆಯಾಮವನ್ನು ಪಡೆಯಿತು. ಆದರೆ ತಿಂಗಳಿಗೆ ಇಂತಿಷ್ಟು ಹಣ ನೀಡಿ, ಒಂದಿಷ್ಟು ಸಮಯವನ್ನು ಮೀಸಲಿಟ್ಟು ಜಿಮ್‌ಗಳಿಗೆ ಹೋಗಲು ಎಲ್ಲರಿಗೂ ಸಾಧ್ಯವಿಲ್ಲ. ಈ ದಿಸೆಯಲ್ಲಿ ಸಾರ್ವಜನಿಕರು ಉದ್ಯಾನಗಳಲ್ಲಿ ವಾಕಿಂಗ್‌ನ ಜೊತೆ ಉಚಿತವಾಗಿ ವ್ಯಾಯಾಮ ಮಾಡಲು ಅವಕಾಶ ಒದಗಿಸುವ ಸ್ಥಳೀಯ ಸಂಸ್ಥೆಗಳ 'ಜಂಗಲ್ ಜಿಮ್' ಪರಿಕಲ್ಪನೆ ಯಶಸ್ವಿಯಾಯಿತು.

'ಉದ್ಯಾನ ನಗರಿ' ಎಂದೇ ಪ್ರಸಿದ್ಧವಾದ ಬೆಂಗಳೂರಿನಲ್ಲಿ ಬೆಳಿಗ್ಗೆ, ಸಂಜೆ ವಾಕಿಂಗ್ ಮಾಡುವವರು ಬಹಳಷ್ಟು ಜನ. ಅದೇ ಸಮಯದಲ್ಲಿ ಉದ್ಯಾನದಲ್ಲಿ ಒಂದಷ್ಟು ಹೊತ್ತು ಈ ರೀತಿಯ ಸಾಧನಗಳನ್ನು ಬಳಸುವುದು ಸುಲಭ ಮತ್ತು ಅನುಕೂಲಕರ. ವಿಶೇಷವಾಗಿ ಹಿರಿಯ ನಾಗರಿಕರಿಗೆ ತಮ್ಮ ಸಾಮರ್ಥ್ಯಕ್ಕೆ ತಕ್ಕಷ್ಟೇ ಸುಲಭವಾಗಿ ಮಾಡಬಹುದಾದ ಮತ್ತು ಮಹಿಳೆಯರಿಗೆ ಮಕ್ಕಳನ್ನು ಕಣ್ಗಾವಲಿನಲ್ಲೇ ಆಟವಾಡಲು ಬಿಟ್ಟು ತಾವೂ ವ್ಯಾಯಾಮ ಮಾಡಬಹುದಾದ ಉತ್ತಮ ಮಾರ್ಗವಿದು.

ಆರೇಳು ವರ್ಷಗಳ ಹಿಂದೆ ಬೆಂಗಳೂರಿನ ಉದ್ಯಾನಗಳಲ್ಲಿ ಸ್ಥಾಪನೆಯಾದ ಇಂತಹ ಜಿಮ್‌ಗಳು ಕ್ರಮೇಣ ಶಿವಮೊಗ್ಗ, ಮೈಸೂರು, ತುಮಕೂರಿನಂತಹ ನಗರಗಳಲ್ಲೂ ಬಳಕೆಗೆ ಬಂದವು. ತಜ್ಞರ ಸಲಹೆ ಪಡೆದು ಹಾಕಿದ ಸಾಧನಗಳು ಉತ್ತಮ ಗುಣಮಟ್ಟದವಾಗಿದ್ದರೂ ಜನರ ಬಳಕೆ ಹೆಚ್ಚಿದಂತೆಲ್ಲ ಸವೆತ, ಮುರಿತ ಸಹಜವೇ. ಜೊತೆಗೆ ತೆರೆದ ವಾತಾವರಣದಲ್ಲಿ ಇರುವುದರಿಂದ ಅವುಗಳಿಗೆ ತುಕ್ಕು ಹಿಡಿಯುವುದು ನಿರೀಕ್ಷಿತ. ಹೀಗಾಗಿ, ಅವುಗಳಿಗೆ ಆಗಾಗ ಆಯಿಲ್ ಹಾಕುವುದು, ಸಡಿಲವಾದ ನಟ್, ಬೋಲ್ಟ್ ಬಿಗಿ ಮಾಡುವುದು, ಹಾಳಾದ ಭಾಗ ತೆಗೆದು ಹೊಸದನ್ನು ಅಳವಡಿಸುವಂತಹ ನಿರ್ವಹಣೆ ಅಗತ್ಯ.

ಬೇಸರದ ಸಂಗತಿಯೆಂದರೆ, ಸ್ಥಾಪನೆಯಾದ ನಂತರ ಇವುಗಳ ಬಗ್ಗೆ ಗಮನಹರಿಸುವವರೇ ಇಲ್ಲದಂತೆ ಆಗಿರುವುದು. ಹೀಗಾಗಿ, ಹೆಚ್ಚಿನ ಉದ್ಯಾನಗಳಲ್ಲಿ ಈ ಸಾಧನಗಳನ್ನು ಬಳಸುವಾಗ ಸೀಮಿತವಾದ ಚಲನೆ, ಕರ್ಕಶ ಸದ್ದು ಸಾಮಾನ್ಯ. ಜತೆಗೆ ಅರ್ಧಂಬರ್ಧ ಮುರಿದ ಸಾಧನಗಳು ಗುಜರಿ ಅಂಗಡಿಯನ್ನು ಸೇರಲು ಸಿದ್ಧವಾಗಿರುತ್ತವೆ. ಹೆಚ್ಚಿನವರು ಹೇಗೋ ಇರುವುದರಲ್ಲೇ ಹೊಂದಾಣಿಕೆ ಮಾಡಿಕೊಂಡು ವ್ಯಾಯಾಮವನ್ನು ಮುಗಿಸುತ್ತಾರೆ. ಒಂದಷ್ಟು ಜನ ತಾವೇ ಒಟ್ಟಾಗಿ ಆಗಾಗ್ಗೆ ಇವುಗಳಿಗೆ ಆಯಿಲ್ ಹಾಕುತ್ತಾರೆ. ಹಾಳಾಗಿರುವ ಸಾಧನಗಳ ಕುರಿತು ಉದ್ಯಾನದಲ್ಲಿನ ಸಿಬ್ಬಂದಿಯ ಗಮನ ಸೆಳೆದರೆ, 'ಗಿಡಮರಗಳ ನಿರ್ವಹಣೆಯಷ್ಟೇ ನಮ್ಮದು. ಇವುಗಳ ಬಗ್ಗೆ ನಮಗೇನೂ ಗೊತ್ತಿಲ್ಲ, ನಗರಪಾಲಿಕೆಯಲ್ಲಿ ವಿಚಾರಿಸಿ' ಎಂಬ ಉತ್ತರ ಅವರಿಂದ ಬರುತ್ತದೆ.

ಪಾಲಿಕೆಯ ಸಿಬ್ಬಂದಿ, 'ಅವನ್ನು ಹಾಕಿದವರು ಇಂಜಿನಿಯರ್‌ಗಳು. ತಾಂತ್ರಿಕ ಮಾಹಿತಿ ನಮಗಿಲ್ಲದ ಕಾರಣ ಅವರನ್ನು ವಿಚಾರಿಸಿಯೇ ಸರಿ ಮಾಡಬೇಕು. ಸಣ್ಣಪುಟ್ಟ ರಿಪೇರಿ ಇದ್ದರೆ ಮಾಡಬಹುದು. ಆದರೆ ಸಾಧನಗಳ ಭಾಗವೇನಾದರೂ ತುಂಡಾಗಿದ್ದರೆ ಆ ಬಗ್ಗೆ ತಯಾರಿಕಾ ಸಂಸ್ಥೆಗೆ ದೂರು ಕೊಟ್ಟು, ಅವರು ಪರಿಶೀಲಿಸಿ ಬೇರೆಯದನ್ನು ಹಾಕಬೇಕು. ತತ್‌ಕ್ಷಣ ಆಗುವ ಕೆಲಸವಲ್ಲ ಅದು. ಇದಕ್ಕೆಲ್ಲಾ ಸರಿಯಾದ ಮಾರ್ಗಸೂಚಿ ಇಲ್ಲ ಮತ್ತು ನಿರ್ವಹಣೆಗೆ ಮೊತ್ತ ನಿಗದಿಯಾಗಿಲ್ಲ. ಹಾಗಾಗಿ ಈ ರೀತಿಯ ಸಮಸ್ಯೆ ಆಗುತ್ತಿದೆ' ಎನ್ನುತ್ತಾರೆ.



'ಅದರೊಂದಿಗೆ ಜನರು ಸರಿಯಾದ ರೀತಿಯಲ್ಲಿ ಈ ಸಾಧನಗಳನ್ನು ಬಳಸುತ್ತಿಲ್ಲ. ವ್ಯಾಯಾಮ ಮಾಡಲು ಇಟ್ಟಿರುವ ಸಾಧನವನ್ನು ಉಯ್ಯಾಲೆಯಂತೆ ಶಕ್ತಿಮೀರಿ ಜೀಕುತ್ತಾರೆ. ಕೆಲವರಂತೂ ನಾಯಿಗಳನ್ನು ಕರೆತಂದು ಅವಕ್ಕೂ ವ್ಯಾಯಾಮ ಮಾಡಿಸುತ್ತಾರೆ. ಎಷ್ಟು ಭಾರ ತಡೆಯುತ್ತದೆ ಎಂದು ಪರೀಕ್ಷಿಸಲು ಎಳೆದಾಡುತ್ತಾರೆ. ಹೀಗೆ ಎಲ್ಲರೂ ಮನಸ್ಸಿಗೆ ಬಂದ ಹಾಗೆ ಬೇಕಾಬಿಟ್ಟಿ ಉಪಯೋಗಿಸಿದರೆ ಈ ಸಾಧನಗಳು ಬಾಳಿಕೆ ಬರುವುದಾದರೂ ಹೇಗೆ? ಕೆಲವರು ಇವುಗಳ ಭಾಗಗಳನ್ನು ಕಿತ್ತುಕೊಂಡು ಹೋಗಿ ಮಾರಾಟವನ್ನೂ ಮಾಡಿದ್ದಾರೆ! ನಾವು ಇಡೀ ದಿನ ಪಾರ್ಕಿನಲ್ಲಿ ಕುಳಿತು ಕಾವಲು ಕಾಯಲು ಸಾಧ್ಯವಿಲ್ಲ' ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಹೆಚ್ಚಿನ ಉದ್ಯಾನಗಳಲ್ಲಿ ಈ ಸಾಧನಗಳು ದುಃಸ್ಥಿತಿಯಲ್ಲಿ ಇವೆ. ತರಬೇತುದಾರರ ಮೇಲ್ವಿಚಾರಣೆ ಇಲ್ಲದ ಕಾರಣ, ವ್ಯಾಯಾಮ ಮಾಡುವ ಭರದಲ್ಲಿ ಅನಗತ್ಯ ಶಕ್ತಿ ಹಾಕಿ ಜನರಿಗೆ ಸ್ನಾಯು ಸೆಳೆತ, ಉಳುಕು ಉಂಟಾಗುವ, ಬಿದ್ದು ಗಾಯಗೊಳ್ಳುವ ಸಾಧ್ಯತೆ ಹೆಚ್ಚು.

ಉದ್ಯಾನಗಳಲ್ಲಿ ಇರುವ ಜಿಮ್‌ಗಳು ವ್ಯಾಯಾಮದ ಶಿಸ್ತನ್ನು ರೂಢಿಸಿಕೊಳ್ಳಲು, ಗಾಳಿ, ಬೆಳಕು, ಹಸಿರಿನ ನಡುವೆ ದೇಹದ ಜತೆ ಮನಸ್ಸನ್ನು ಉಲ್ಲಸಿತಗೊಳಿಸಲು, ಗೆಳೆಯರ ಗುಂಪಿನೊಂದಿಗೆ ಒಟ್ಟಾಗಿ ವ್ಯಾಯಾಮವನ್ನು ಆನಂದಿಸಲು ಅತ್ಯುತ್ತಮ ಮಾರ್ಗವೇ ಸರಿ. ಆದರೆ ಇವುಗಳನ್ನು ಉಪಯೋಗಿಸುವುದರಲ್ಲಿ ಶುಚಿತ್ವ ಕಾಯ್ದುಕೊಳ್ಳುವುದು, ಸೋಂಕಿನ ಬಗ್ಗೆ ಎಚ್ಚರಿಕೆ ವಹಿಸುವುದು, ಸಾಧನಗಳನ್ನು ಬಳಸುವ ಬಗ್ಗೆ ಜನರಿಗೆ ಮಾಹಿತಿ ಇರಬೇಕು. ಆದ್ದರಿಂದ ಈ ಜಂಗಲ್ ಜಿಮ್ ನಿರ್ವಹಣೆ ಮತ್ತು ಬಳಕೆಯ ಕ್ರಮಗಳ ಕುರಿತು ಸೂಚನಾಫಲಕ ಹಾಕುವ ಬಗ್ಗೆ ಸ್ಥಳೀಯ ಆಡಳಿತಗಳು ಗಮನಹರಿಸಬೇಕು. ಹಾಗೆಯೇ ಅವುಗಳನ್ನು ಜವಾಬ್ದಾರಿಯಿಂದ ಬಳಸುವ ಹೊಣೆ ಸಾರ್ವಜನಿಕರಾದ ನಮ್ಮದು.

ವಾಚಕರ ವಾಣಿ

ಕಾರ್ಮಿಕರ ಬವಣೆ ತೆರೆದಿಟ್ಟ ಪ್ರಕರಣ

ಉತ್ತರಾಖಂಡದ ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರು ಸುರಕ್ಷಿತವಾಗಿ ಹೊರಬಂದ ಸುದ್ದಿ ತಿಳಿದು ಕೋಟ್ಯಂತರ ಭಾರತೀಯರು ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ. ಈ ಕಾರ್ಮಿಕರು 17 ದಿನಗಳ ಕತ್ತಲವಾಸದಲ್ಲಿ ಜೀವನ್ಮರಣದ ನಡುವೆ ಹೋರಾಡಿದ್ದನ್ನು ನೋಡಿದರೆ, ಗಣಿ ಹಾಗೂ ಸುರಂಗಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ತುತ್ತಿನ ಚೀಲ ತುಂಬಿಸುವ ಸಲುವಾಗಿ ಎಂತಹ ಅಪಾಯಕಾರಿ ಸ್ಥಳ ಹಾಗೂ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಸಾರ್ವಜನಿಕ ನೆನಪು ಕ್ಷಣಿಕ ಎಂಬ ಮಾತಿನಂತೆ, ಈ ಪ್ರಕರಣ ಕೆಲವೇ ದಿನಗಳಲ್ಲಿ ಜನರ ನೆನಪಿನಿಂದ ಮರೆಯಾಗಬಹುದು. ಆದರೆ ಈ ಕಾರ್ಮಿಕರು ಹಾಗೂ ಅವರ ಕುಟುಂಬದವರಿಗೆ ಅದು ಜೀವನಪರ್ಯಂತ ದುಃಸ್ವಪ್ನವಾಗಿ ಕಾಡುವುದಂತೂ ನಿಜ.

ಉತ್ತರಾಖಂಡವೂ ಸೇರಿದಂತೆ ಹಿಮಾಲಯದ ಬಹುತೇಕ ಕಡೆಗಳಲ್ಲಿ ಕಲ್ಲಿನ ರಚನೆಯು ಬಹಳ ಶಿಥಿಲವಾದ ಸ್ಥಿತಿಯಲ್ಲಿದೆ. ಅಲ್ಲಿ ನಮ್ಮ ಮಧುಗಿರಿ ಹಾಗೂ ಚಾಮುಂಡಿ ಬೆಟ್ಟದಲ್ಲಿ ರಚನೆಯಾಗಿರುವ ಶಿಲೆಗಳಂತೆ ಬಲವಾದ ಶಿಲಾರಚನೆ ಇಲ್ಲ. ಹಳೆಯ ಮನೆಯನ್ನು ಕೆಡವಿ ಗುಡ್ಡೆ ಹಾಕಿದ ಕಲ್ಲಿನ ರಾಶಿಯಂತಹ ವಾತಾವರಣ ಬಹುತೇಕ ಕಡೆ ಕಂಡುಬರುತ್ತದೆ. ಬಹುಶಃ ಕೇದಾರನಾಥ ಮತ್ತು ಬದರೀನಾಥ ದೇವಾಲಯಗಳಿಗೆ ಭೇಟಿ ನೀಡಿದವರು, ಶಿಥಿಲಾವಸ್ಥೆಯಲ್ಲಿ ಕಂಡುಬರುವ ಅಲ್ಲಿನ ಶಿಲಾರಚನೆಯನ್ನು ನೋಡಿಯೇ ಇರುತ್ತಾರೆ. ಆ ಬಗೆಯ ಶಿಲಾರಚನೆಯ ಕಾರಣದಿಂದ ಅಲ್ಲಿ ಗುಡ್ಡ, ಬೆಟ್ಟ ಕುಸಿತ ಸಾಮಾನ್ಯ ಸಂಗತಿಯಾಗಿರುತ್ತದೆ. ಹಾಗೆ ಕುಸಿದ ಗುಡ್ಡದ ಮಣ್ಣು, ಕಲ್ಲನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಲೇ ಇರುತ್ತದೆ. 2022ರ ಅಕ್ಟೋಬರ್‌ನಲ್ಲಿ ನಾನು ಉತ್ತರಾಖಂಡದ ಧಾರ್ಮಿಕ ಸ್ಥಳಗಳಿಗೆ ಪ್ರವಾಸ ಹೋಗಿದ್ದ ಸಂದರ್ಭದಲ್ಲಿ, ನೂರಾರು ಕಡೆ ಗುಡ್ಡ, ಬೆಟ್ಟ ಕುಸಿತ ಹಾಗೂ ತೆರವು ಕಾರ್ಯಾಚರಣೆ ನಡೆಯುತ್ತಿದ್ದುದನ್ನು ಗಮನಿಸಿದ್ದೆ. ಇದೆಲ್ಲದರ ಆಚೆಗೆ, ತಂತ್ರಜ್ಞಾನ ಎಷ್ಟೇ ಬೆಳೆದಿದ್ದರೂ ಪ್ರಕೃತಿಯ ಮುಂದೆ ಮನುಷ್ಯ ಎಷ್ಟು ಚಿಕ್ಕವ ಎಂಬುದನ್ನು ಆಗಾಗ ಸಂಭವಿಸುವ ನೆರೆ, ಬರ, ಸುನಾಮಿ, ಭೂಕಂಪ, ಬೆಟ್ಟ, ಗುಡ್ಡ ಕುಸಿತದಂತಹ ಪ್ರಕರಣಗಳು ಸಾಬೀತು ಮಾಡುತ್ತಾ ನಮ್ಮನ್ನು ಎಚ್ಚರಿಸುತ್ತಲೇ ಇರುತ್ತವೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಎಚ್ಚರಿಕೆಯಷ್ಟೇ ಸಾಲದು...

'ಸ್ಥಳೀಯ ಮಟ್ಟದಲ್ಲಿ ಬಗೆಹರಿಯಬೇಕಾದ ಸಮಸ್ಯೆಗಳು ಬೆಂಗಳೂರಿನವರೆಗೂ ಬರಬಾರದು. ಬಂದರೆ ಅದು ನಿಮ್ಮ ವೈಫಲ್ಯ. ಇದನ್ನು ಸಹಿಸುವುದಿಲ್ಲ' ಎಂಬ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎಚ್ಚರಿಕೆಯ (ಪ್ರ.ವಾ., ನ. 28) ತೀವ್ರತೆಯು ಇನ್ನು ಮುಂದೆ ಅಧಿಕಾರಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ನೆರವಾಗುವುದೇ ಅಥವಾ ಇದೂ ಇಂತಹ ಹಲವಾರು ಎಚ್ಚರಿಕೆಗಳಲ್ಲಿ ಒಂದಷ್ಟೇ ಎನ್ನುವ ಭಾವನೆಗೆ ಸೀಮಿತಗೊಳ್ಳುವುದೇ? ಈ ರೀತಿಯ ಅನುಮಾನ ಹಾಗೂ ಹತಾಶೆ ಜನಸಾಮಾನ್ಯರಲ್ಲಿ ಮೂಡುವುದು ಸಹಜ. ಏಕೆಂದರೆ, ಅಧಿಕಾರಿಗಳಿಗೆ ಚಾಟಿ ಬೀಸಿದ ಜನಪ್ರತಿನಿಧಿಗಳಲ್ಲಿ ಸಿದ್ದರಾಮಯ್ಯ ಮೊದಲಿಗರೇನಲ್ಲ. ಸ್ಥಳೀಯ ಜನಪ್ರತಿನಿಧಿಗಳಿಂದ ಆರಂಭವಾಗಿ ಶಾಸಕರು, ಮಂತ್ರಿಗಳು, ಮುಖ್ಯಮಂತ್ರಿ ಹೀಗೆ ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಅಧಿಕಾರಿಗಳ ಕಾರ್ಯನಿರ್ವಹಣೆಯ ವೈಫಲ್ಯವನ್ನು ಪ್ರಶ್ನಿಸಿ ಚಾಟಿ ಬೀಸುವುದನ್ನು ಕೇಳುತ್ತಲೇ ಇರುತ್ತೇವೆ. ಆದರೂ ಜನರ ಸಮಸ್ಯೆಗಳು ಬಗೆಹರಿಯದಿರುವುದು ವಿಷಾದದ ಸಂಗತಿ. ಆದ್ದರಿಂದ, ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ಚಾಟಿ ಬೀಸಿದ ನಂತರವೂ ಜನರ ಸಮಸ್ಯೆಗಳು ಬೆಳೆಯುತ್ತಲೇ ಇದ್ದರೆ ಅದನ್ನು ಜನಪ್ರತಿನಿಧಿಗಳ ವೈಫಲ್ಯ ಎಂದೇ ತಿಳಿಯಬೇಕಾಗುತ್ತದೆ.

ಜಿ.ಬೈರೇಗೌಡ, ಬೆಂಗಳೂರು

ಭ್ರೂಣಹತ್ಯೆ: ಕಠಿಣ ಶಿಕ್ಷೆಯಾಗಲಿ

ರಾಜ್ಯದಲ್ಲಿ ಭ್ರೂಣಲಿಂಗ ಪತ್ತೆ ಹಾಗೂ ಗರ್ಭಪಾತದ ಪ್ರಕರಣಗಳು ಕಂಡುಬಂದಿರುವುದು ಅತ್ಯಂತ ಆತಂಕದ ವಿಚಾರ. ಕೆಲವರು ಎಷ್ಟೇ ಸುಶಿಕ್ಷಿತರಾಗಿದ್ದರೂ ಭ್ರೂಣಲಿಂಗ ಪತ್ತೆ ಮಾಡಿ, ಹೆಣ್ಣಾಗಿದ್ದರೆ ಅದನ್ನು ಭ್ರೂಣಾವಸ್ಥೆಯಲ್ಲಿಯೇ ಹತ್ಯೆ ಮಾಡುವಂತಹ ಅಜ್ಞಾನದಿಂದ ಇನ್ನೂ ಹೊರ ಬಾರದಿರುವುದು ಖೇದಕರ. ಜನರ ಮೌಢ್ಯವನ್ನೇ ಬಂಡವಾಳವಾಗಿಸಿಕೊಂಡು ಅದನ್ನೇ ದಂಧೆಯಾಗಿಸಿ, ಸಮಾಜಬಾಹಿರ ಕೃತ್ಯಗಳನ್ನು ನಡೆಸುತ್ತಿರುವವರು ಪರೋಕ್ಷವಾಗಿ ನೈಸರ್ಗಿಕ ಅಸಮತೋಲನಕ್ಕೆ ಕಾರಣರಾಗುತ್ತಿದ್ದಾರೆ. ಇಂತಹವರ ವಿರುದ್ಧ ಗಂಭೀರವಾದ ತನಿಖೆ ನಡೆಯಬೇಕು.

ನಾಗರಿಕ ಸಮಾಜದ ಆರ್ಥಿಕ ಪ್ರಗತಿ, ಸಾಮಾಜಿಕ ಸ್ವಾಸ್ಥ್ಯ ಹಾಗೂ ನೈತಿಕ ವ್ಯವಸ್ಥೆಯ ಮೇಲೂ ಈ ಬಗೆಯ ಅನಾಗರಿಕ ಕೃತ್ಯಗಳು ದುಷ್ಪರಿಣಾಮ ಬೀರುವ ಅಪಾಯವನ್ನು ನಾವು ಅರಿಯಬೇಕಾಗಿದೆ. ಆರೋಪ ಸಾಬೀತಾದಲ್ಲಿ ಕಠಿಣ ಶಿಕ್ಷೆಯಾಗುವಂತೆ, ಯಾವುದೇ ಕಾರಣಕ್ಕೂ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳದಂತೆ ಸರ್ಕಾರ ಎಚ್ಚರ ವಹಿಸಬೇಕು.

ದಿನಮಣಿ ಬಿ.ಎಸ್., ಮೈಸೂರು

ಶುದ್ಧೀಕರಣ: ನಡೆಯಲಿ ಆತ್ಮವಿಮರ್ಶೆ

ಉತ್ತರಪ್ರದೇಶದ ಸಿದ್ಧಾರ್ಥನಗರ ಜಿಲ್ಲೆಯ ದೇವಸ್ಥಾನವೊಂದಕ್ಕೆ ಮುಸ್ಲಿಂ ಶಾಸಕಿಯೊಬ್ಬರು ಭೇಟಿ ನೀಡಿದ್ದರಿಂದ ಅದು ಅಪವಿತ್ರವಾಯಿತು ಎಂದು ಆರೋಪಿಸಿ, ಬಿಜೆಪಿ ಹಾಗೂ ಹಿಂದೂ ಯುವ ವಾಹಿನಿಗೆ ಸೇರಿದ ಕಾರ್ಯಕರ್ತರು ದೇವಸ್ಥಾನದಲ್ಲಿ ಶುದ್ಧೀಕರಣ ಕಾರ್ಯ ಕೈಗೊಂಡಿದ್ದು ಖಂಡನೀಯ. ಸ್ಥಳೀಯರ ಆಹ್ವಾನದ ಮೇರೆಗೆ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಶಾಸಕಿಯನ್ನು, ಬಳಿಕ ಶುದ್ಧೀಕರಣದ ಹೆಸರಿನಲ್ಲಿ ಅವಮಾನಿಸಿರುವುದು ಎಷ್ಟು ಸರಿ? ಈ ಬಗ್ಗೆ ಸಂಬಂಧಪಟ್ಟವರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಹಿಂದೆ ಉಪಪ್ರಧಾನಿಯಾಗಿದ್ದ, ಪರಿಶಿಷ್ಟ ಜಾತಿಗೆ ಸೇರಿದ ಬಾಬು ಜಗಜೀವನರಾಮ್ ಅವರ ಒಡಿಶಾದ ಪುರಿ ಜಗನ್ನಾಥ ದೇವಾಲಯ ಭೇಟಿಯೂ ಇದೇ ರೀತಿ ವಿವಾದಕ್ಕೆ ಒಳಗಾಗಿತ್ತು. ಅಂತರಾತ್ಮದ ಶುದ್ಧಿಯ ಅಗತ್ಯ ಆಗಲೂ ಇತ್ತು ಈಗಲೂ ಅದು ಬೇಕಾಗಿದೆ ಎಂಬುದನ್ನು ಈ ಪ್ರಕರಣ ಎತ್ತಿ ತೋರಿಸುತ್ತದೆ.

ಶಾಂತಕುಮಾರ್, ಸರ್ಜಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಲಿಂಗಾನುಪಾತದಲ್ಲಿ ಸಮತೋಲನ ಸಾಧಿಸುವುದೇ ಭ್ರೂಣ ಲಿಂಗ ಪತ್ತೆ ತಡೆ ಕಾಯ್ದೆಯ ಮೂಲ ಉದ್ದೇಶ. ಈ ಕಾಯ್ದೆಯು ಭ್ರೂಣದ ಲಿಂಗವನ್ನು ಪತ್ತೆ ಮಾಡುವುದು ಮತ್ತು ಆ ಮೂಲಕ ಹೆಣ್ಣು ಭ್ರೂಣವನ್ನು ಹತ್ಯೆ ಮಾಡುವಂತಹ ಅಪರಾಧಗಳನ್ನು ತಡೆಯುವ ಉದ್ದೇಶದ್ದಾಗಿದೆ. ಇಂತಹ ಅಪರಾಧಗಳಿಗೆ ಕಠಿಣ ಶಿಕ್ಷೆಯೂ ಇದೆ. ಆದರೂ ರಾಜ್ಯದ ಹಲವು ಜಿಲ್ಲೆಗಳಲ್ಲಿ ಐದು ವರ್ಷಗಳ ಅವಧಿಯಲ್ಲಿ ಜನಿಸಿದವರ ಲಿಂಗಾನುಪಾತವು ಅಪಾಯಕಾರಿ ಮಟ್ಟಕ್ಕೆ ಕುಸಿದಿದೆ. ಉತ್ತರ ಕನ್ನಡ ಜಿಲ್ಲೆಯೊಂದರಲ್ಲಿ ಈ ಸ್ವರೂಪದ ಲಿಂಗಾನುಪಾತವು 1000 ಗಂಡುಮಕ್ಕಳಿಗೆ 724 ಹೆಣ್ಣುಮಕ್ಕಳಷ್ಟಿದೆ. ಮಂಡ್ಯದ ಆಲೆಮನೆಯಲ್ಲಿ ಭ್ರೂಣಲಿಂಗ ಪತ್ತೆ ಪರೀಕ್ಷೆ ನಡೆಸುತ್ತಿದ್ದ ಕೃತ್ಯವು ಬೆಳಕಿಗೆ ಬಂದ ಮೇಲೆ, ಈ ಅಂಕಿ ಅಂಶಗಳು ಬೇರೆಯದೇ ಕತೆ ಹೇಳುತ್ತವೆ

ಸಮತೋಲನಕ್ಕೆ ಬಾರದ ಲಿಂಗಾನುಪಾತ

• ಸುಕೃತ ಎಸ್.

‘ಹೆಣ್ಣು ಮಗು ಬೇಡ’ ಎಂದು ನಿರ್ಧಾರಕ್ಕೆ ಬರುವ ಪೋಷಕರು ಹೆಣ್ಣು ಭ್ರೂಣವನ್ನು ಹತ್ಯೆಗೈಯುವ ಕೃತ್ಯ ಎಸಗುತ್ತಿದ್ದಾರೆ. ಇದು ಕಾನೂನುಬಾಹಿರ ಎನ್ನುವ ‘ಪ್ರಜ್ಞೆ’ ಇದ್ದಾಗ್ಯೂ ಇಂತಹದ್ದೊಂದು ನಿರ್ಧಾರಕ್ಕೆ ಪೋಷಕರು ಬರುತ್ತಿದ್ದಾರೆ. 2019–20ರಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿ ಲಿಂಗಾನುಪಾತದ ಕುರಿತು ಇರುವ ಅಂಕಿ–ಅಂಶಗಳು ಕೆಲವು ಗಂಭೀರವಾದ ವಿಷಯಗಳನ್ನು ಮುಂದಿಡುತ್ತದೆ. 2015–16ರಲ್ಲಿ ಬಂದ ಇದೇ ವರದಿಯಲ್ಲಿ ಇದ್ದ ಅಂಕಿ–ಅಂಶಗಳಿಗೆ ಸೋಲಿಸಿಕೊಂಡರೆ, ಕರ್ನಾಟಕದ 16 ಜಿಲ್ಲೆಗಳಲ್ಲಿ ಲಿಂಗಾನುಪಾತದ ಅಂಕಿಗಳು ತೀರಾ ಕಳವಳಕಾರಿಯಾಗಿದೆ. ದಾವಣಗೆರೆ ಅಂಥ ಜಿಲ್ಲೆಯಲ್ಲಿ ಐದು ವರ್ಷಗಳಲ್ಲಿ ಜನಿಸಿದವರ ಲಿಂಗಾನುಪಾತವು 2015–16ರ ವರದಿಯಲ್ಲಿ 1000ಕ್ಕೆ 1,029 ಇತ್ತು. ಇದೇ ಅನುಪಾತವು 2019–20 ವರದಿ ಬರುವ ಹೊತ್ತಿಗೆ 797ಕ್ಕೆ ಇಳಿದಿದೆ.

ಹೆಣ್ಣು ಭ್ರೂಣ ಹತ್ಯೆಯ ಕುರಿತ ರಾಜ್ಯದ ಜಿಲ್ಲೆಗಳ ವರದಿಗಳನ್ನು ಗಮನಿಸಿದಾಗ ಕೆಲವು ಪ್ರಮುಖ ಪ್ರಶ್ನೆಗಳು ಮೂಡುತ್ತವೆ. ನವಯುಗದ ಪೋಷಕರಲ್ಲೂ ‘ಹೆಣ್ಣು ಮಗು ಬೇಡ’ ಎನ್ನುವ ಮನಃಸ್ಥಿತಿ ಹೆಚ್ಚಾಗಿರುವುದು ಈ ಕೆಲವು ಪ್ರಶ್ನೆಗಳಲ್ಲಿ ಪ್ರಮುಖವಾದುದು. ಆಧುನಿಕ ಜಗತ್ತಿಗೆ ತೆರೆದುಕೊಂಡವರು, ಕೈಯಲ್ಲಿ ಮೊಬೈಲ್ ಇರುವವರು, ಸರ್ಕಾರದ ಯೋಜನೆಗಳ ಬಗ್ಗೆ ಹೆಚ್ಚು ತಿಳಿದವರು, ಪೇಪರುಗಳಲ್ಲಿ ಸರ್ಕಾರ ಜಾಹೀರಾತು ನೋಡುವವರು, ಇರುವ ಕಾನೂನುಗಳ ಬಗ್ಗೆ ತಿಳಿದವರು... ಈ ಕಾಲಘಟ್ಟದಲ್ಲೂ ‘ಹೆಣ್ಣು ಮಗು ಬೇಡ’ ಎನ್ನುವ ನಿರ್ಧಾರಕ್ಕೆ ಬರುತ್ತಿದ್ದಾರೆ ಎನ್ನುವುದು ಬಹಳ ಗಂಭೀರವಾಗಿ ಯೋಚಿಸಬೇಕಾದ ವಿಷಯವಾಗಿದೆ. ಇಂಥದ್ದೇ ವಿಚಾರಗಳನ್ನು ಇಟ್ಟುಕೊಂಡು ವಿಶ್ವ ಸಂಸ್ಥೆ ಕೂಡ ವರದಿಯೊಂದನ್ನು 2014ರಲ್ಲಿ ಪ್ರಕಟಿಸಿತ್ತು.

‘ಗಂಡು ಬೇಕು ಎನ್ನುವ ಮನಃಸ್ಥಿತಿ ಈ ಹಿಂದಿಗಿಂತ ಭಾರತದಲ್ಲಿ ಈಗ ಕಡಿಮೆಯಾಗಿದೆ. ಆಧುನಿಕತೆ ಬಂದ ಕಾರಣದಿಂದಾಗಿ ಜನರು ಬದಲಾಗಿದ್ದಾರೆ. ಹೆಣ್ಣು–ಗಂಡು ಮಧ್ಯೆ ಇರಬೇಕಾದ ಸಮಾನತೆ ಕುರಿತು ಜನರು ಹೆಚ್ಚು ಎಚ್ಚರಗೊಂಡಿದ್ದಾರೆ ಎಂದೆಲ್ಲಾ ಸಮೀಕ್ಷೆಯ ಸಮಯದಲ್ಲಿ ಜನರು ಮಾತನಾಡಿದರು. ಆದರೆ, ಸಮೀಕ್ಷೆಯ ಅಂಕಿ–ಸಂಕಿಗಳು ಹೇಳುವ ಮಾತೇ ಬೇರೆ. ಈ ಎಲ್ಲಾ ‘ಮನಃಸ್ಥಿತಿ’ಯ ಸ್ಥಿತಿಯನ್ನು ಅಂಕಿಗಳು ವಿವರಿಸಿದ್ದವು’ ಎಂದು ವಿಶ್ವಸಂಸ್ಥೆ ತಮ್ಮ ವರದಿಯಲ್ಲಿ ಹೇಳಿತ್ತು.

‘ಇದೇ ವರದಿಯಲ್ಲಿ ಚರ್ಚಿಸಲಾದ ಮತ್ತೊಂದು ಅಂಶವೂ ತೀರ ಗಂಭೀರವಾದುದು. ಸಾಮಾಜಿಕ ಕಾರಣಗಳು ಜನರ ‘ಮನಃಸ್ಥಿತಿ’ಯ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ. ಹೆಣ್ಣಿನ ಮೇಲಾಗುವ ದೌರ್ಜನ್ಯ, ಲೈಂಗಿಕ ಕಿರುಕುಳ, ಅತ್ಯಾಚಾರಗಳು ಕೂಡ ‘ಹೆಣ್ಣು ಮಗು ಬೇಡ’ ಎನ್ನುವ ನಿರ್ಧಾರ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. 70ರ ದಶಕದಲ್ಲಿ ದೇಶದಾದ್ಯಂತ ವರದಕ್ಷಿಣೆ ವಿರೋಧಿ ಚಳವಳಿಗಳು ಹುಟ್ಟಿಕೊಂಡವು. ಗಂಡನ ಮನೆಗಳಲ್ಲಿ ಸೊಸೆಯಂದಿರಿಗೆ ನೀಡಿದ ಕಿರುಕುಳದ ಸ್ವರೂಪವು ಪೋಷಕರನ್ನು ಆತಂಕಕ್ಕೆ ದೂಡಿತ್ತು. ‘ಹೆಣ್ಣು ಮಗು ಬೇಡವೇ ಬೇಡ’ ಎನ್ನುವ ಮಟ್ಟಕ್ಕೆ ಜನರು ಕಂಗೆಟ್ಟರು’ ಎನ್ನುತ್ತದೆ ಆ ವರದಿ.

‘ಇದೇ ಸ್ಥಿತಿ ಈಗಲೂ ಇದೆ’ ಎನ್ನುತ್ತಾರೆ ಜ್ಯೋತಿ ಹಿಟ್ನಾಳ್. ಸದಾ ಜನಸಮುದಾಯದೊಂದಿಗೆ ಇರುವ ಇವರು, ಮಟ್ಟು, ಬಾಲ್ಯ ವಿವಾಹದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ, ಅಧ್ಯಯನ ನಡೆಸುವ ಕೆಲಸ ಮಾಡುತ್ತಿದ್ದಾರೆ.

‘ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಮನೆಪಾಠಕ್ಕೆ ಕಳುಹಿಸಿದ ಹೆಣ್ಣು ಮಗುವಿನ ಮೇಲೆ ನಡೆದ ಅತ್ಯಾಚಾರದ ಘಟನೆಯು ಜನರ ಮನಸಿನ ಮೇಲೆ ಗಾಢ ಪರಿಣಾಮ ಬೀರಿದೆ. ಅಲ್ಲಿ ಎಂದಲ್ಲ, ಎಲ್ಲ ಕಡೆಯೂ ಇಂತಹದ್ದೊಂದು ಆಲೋಚನೆ ನವಯುಗದ ಪೋಷಕರನ್ನು ಕಾಡುತ್ತಿದೆ. ದಿನೇ ದಿನೇ ಶೋಷಣೆಯ, ಅತ್ಯಾಚಾರದ ಸುದ್ದಿಗಳನ್ನು ಜನರು ಓದುತ್ತಿದ್ದಾರೆ. ಹೆಣ್ಣು ಮಗುವಿನ ಜವಾಬ್ದಾರಿಯನ್ನು ಹೊರಲು ಯಾರೂ ಸಿದ್ಧರಿಲ್ಲ. ಇದು ನಿಜಕ್ಕೂ ಗಂಭೀರವಾದ ಸಮಸ್ಯೆ. ಈ ರೀತಿ ಯೋಜನೆ ಮಾಡುತ್ತಾರೆ ಎನ್ನುವುದೇ ಸಮಾಜಕ್ಕೆ ಅಪಾಯಕಾರಿಯಾದುದು’ ಎನ್ನುವ ಅಭಿಪ್ರಾಯ ಅವರದು.

‘ತನಗೆ ಯಾವ ಮಗು ಬೇಕು ಎನ್ನುವುದನ್ನು ನಿರ್ಧಾರ ಮಾಡುವುದು ಹೆಣ್ಣು ಅಲ್ಲ. ಬದಲಿಗೆ ಕುಟುಂಬ, ಗಂಡ. ಯುವಕರೂ ಇದನ್ನೇ ಹೇಳುತ್ತಾರೆ. ಮನೆಯನ್ನು ನಿಭಾಯಿಸುವುದು ನಾವು. ಅಂದಮೇಲೆ ಈ ನಿರ್ಧಾರವೂ ನಮ್ಮದೇ ಎನ್ನುತ್ತಾರೆ ಯುವಕರು. ಪದವಿ ಓದುವ ಯುವಕರೂ ಇದ್ದನ್ನೇ ಹೇಳುತ್ತಾರೆ. ಪೋಷಕರು ನವಯುಗದವರು ಸರಿ. ಆದರೆ, ಯಾವ ಮಗು ಬೇಕು ಎನ್ನುವ ನಿರ್ಧಾರವನ್ನು ಈಗಲೂ ಮನೆಯ ಹಿರಿಯರೇ ತೆಗೆದು- ಕೊಳ್ಳುತ್ತಾರೆ. ನಗರ ಪ್ರದೇಶದ ಸ್ಥಿತಿ ಸ್ವಲ್ಪ ಬದಲಾಗಿರಬಹುದು. ಆದರೆ, ಗ್ರಾಮೀಣ ಭಾಗದ ಸ್ಥಿತಿ ಬದಲಾಗಿಲ್ಲ’ ಎನ್ನುತ್ತಾರೆ ಅವರು.

‘ಮೋಕ್ಷದ ಪರಿಕಲ್ಪನೆ ಬದಲಾಗಬೇಕು’

‘ನಾವೀಗ ಸಮಾಜದಲ್ಲಿ ಬಿತ್ತುತ್ತಿರುವುದು ಜನವಿರೋಧಿ, ಸ್ತ್ರೀ ವಿರೋಧ ಮೌಲ್ಯಗಳನ್ನು. ಅದರ ಬದಲು ಮನುಷ್ಯಪರ, ಸ್ತ್ರೀ ಪರ ಮೌಲ್ಯಗಳನ್ನು ಬಿತ್ತಬೇಕಿತ್ತು. ಇಂದು ಹೀಗಾಗುತ್ತಿಲ್ಲ. ಹೆಣ್ಣು ಬೇಡ ಎನ್ನುವುದಕ್ಕೆ ಹಲವು ಸ್ತರದ ಕಾರಣಗಳಿವೆ. ‘ಬೇಟಿ ಬಚಾವೊ ಬೇಟಿ ಪಡಾವೊ’ ಎಂದು ಹೇಳಿದರೆ ಸಾಲದು. ಅದರ ಜಾರಿ ಯಾವ ರೀತಿಯಲ್ಲಿದೆ ಎನ್ನುವುದೂ ಮುಖ್ಯವಾಗುತ್ತದೆ. ಎರಡನೆಯದು, ಸಮಾಜದ ಆಳದಲ್ಲಿ ಬೇರೂರಿರುವ ಪುರುಷ ಪ್ರಧಾನ ಮನಃಸ್ಥಿತಿ. ಮೂರನೆಯದು, ಮೋಕ್ಷ ಪ್ರಾಪ್ತಿ ಎನ್ನುವ ಪರಿಕಲ್ಪನೆ ಎಲ್ಲಾ ಧರ್ಮದಲ್ಲೂ, ಎಲ್ಲಾ ಸಮುದಾಯದಲ್ಲೂ ಇದೆ. ಶಿಕ್ಷಿತರಿದ್ದರೂ ಅಷ್ಟೇ, ಶಿಕ್ಷಣ ವಂಚಿತರಲ್ಲೂ ಅಷ್ಟೇ, ಈ ಮನಃಸ್ಥಿತಿ ಬೇರೂರಿ ಬೆಳೆದಿದೆ. ಇತ್ತೀಚಿನ ವರ್ಷಗಳಂತೂ ವಿಜ್ಞಾನವನ್ನು ಬೆಳೆಸುವ, ಪ್ರಚಾರ ಮಾಡುವ ಬದಲು, ಮೌಢ್ಯವನ್ನೇ ಬಿತ್ತುತ್ತಿದ್ದೇವೆ’ ಎನ್ನುವುದು ಸಾಮಾಜಿಕ ಕಾರ್ಯಕರ್ತೆ ಕೆ.ಎಸ್. ವಿಮಲಾ ಅವರು ಅಭಿಪ್ರಾಯ.

ಐದು ವರ್ಷಗಳಲ್ಲಿ ಜನಿಸಿದವರ ಲಿಂಗಾನುಪಾತ

ಸಾಮಾನ್ಯವಾಗಿ ಲಿಂಗಾನುಪಾತವನ್ನು ಒಂದು ಪ್ರದೇಶದಲ್ಲಿ (ಅದು ಜಿಲ್ಲೆ/ರಾಜ್ಯ/ದೇಶ ಆಗಿರಬಹುದು) ಇರುವ ಒಟ್ಟು ಜನಸಂಖ್ಯೆಯಲ್ಲಿ ಪುರುಷರ ಸಂಖ್ಯೆ ಎಷ್ಟು ಮತ್ತು ಮಹಿಳೆಯರ ಸಂಖ್ಯೆ ಎಷ್ಟು ಎಂಬುದರ ಆಧಾರದಲ್ಲಿ ಲೆಕ್ಕಹಾಕಲಾಗುತ್ತದೆ. ಇದು ಆ ಪ್ರದೇಶದಲ್ಲಿ 1000 ಪುರುಷರಿಗೆ ಹೋಲಿಸಿದರೆ, ಎಷ್ಟು ಮಹಿಳೆಯರಿದ್ದಾರೆ ಎಂಬುದನ್ನು ಸ್ಥೂಲವಾಗಿ ಹೇಳುತ್ತದೆ. ಆದರೆ ಈಚಿನ ದಿನಗಳಲ್ಲಿ ಲಿಂಗಾನುಪಾತದ ಸ್ಥಿತಿಗತಿ ಏನು ಎಂಬುದನ್ನು ಇದು ವಿವರಿಸುವುದಿಲ್ಲ. ಇದಕ್ಕಾಗಿ ಸರ್ಕಾರವು ಕಂಡುಕೊಂಡ ವಿಧಾನವೇ ‘ಐದು ವರ್ಷದಲ್ಲಿ ಜನಿಸಿದವರ ಲಿಂಗಾನುಪಾತ’.

ಐದು ವರ್ಷಗಳ ಅವಧಿಯಲ್ಲಿ ಜನಿಸಿದ ಒಟ್ಟು ಮಕ್ಕಳಲ್ಲಿ, ಗಂಡು ಮಕ್ಕಳೆಷ್ಟು ಮತ್ತು ಹೆಣ್ಣು ಮಕ್ಕಳೆಷ್ಟು ಎಂಬುದನ್ನು ಲೆಕ್ಕಹಾಕಿ ಈ ಲಿಂಗಾನುಪಾತವನ್ನು ನಿರ್ಧರಿಸಲಾಗುತ್ತದೆ. ಹೆಣ್ಣು ಶಿಶುಗಳ ಜನನ ಹೆಚ್ಚುತ್ತಿದೆಯೇ, ಹೆಣ್ಣು ಭ್ರೂಣಗಳ ಹತ್ಯೆ ನಿಂತಿದೆಯೇ ಎಂಬುದರತ್ತ ಈ ಲಿಂಗಾನುಪಾತವು ಬೊಟ್ಟುಮಾಡುತ್ತದೆ. ಹೀಗಾಗಿಯೇ ಈ ಲಿಂಗಾನುಪಾತವನ್ನು ವಾಸ್ತವಕ್ಕೆ ಹತ್ತಿರ ಎಂದು ಪರಿಗಣಿಸಲಾಗುತ್ತದೆ. ಈ ಲಿಂಗಾನುಪಾತದಲ್ಲಿ ಆಗುವ ಏರಿಳಿಕೆಯು, ಹೆಣ್ಣುಮಕ್ಕಳ ವಿಚಾರದಲ್ಲಿ ದೇಶವು ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ. ಇದೇ ಮಾತು ಯಾವುದೇ ರಾಜ್ಯ ಅಥವಾ ಯಾವುದೇ ಜಿಲ್ಲೆಗೂ ಅನ್ವಯವಾಗುತ್ತದೆ.


ಸಾಮಾನ್ಯ ಲಿಂಗಾನುಪಾತಕ್ಕೂ, ಐದು ವರ್ಷದಲ್ಲಿ ಜನಿಸಿದವರ ಲಿಂಗಾನುಪಾತಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಭಾರತದ ಒಟ್ಟು ಜನಸಂಖ್ಯೆಯ ಲಿಂಗಾನುಪಾತವು 1000 ಪುರುಷರಿಗೆ:1020 ಮಹಿಳೆಯರಷ್ಟಿದೆ. ಇದನ್ನು ನೋಡಿದರೆ, ದೇಶದಲ್ಲಿನ ಪುರುಷರಿಗಿಂತ ಮಹಿಳೆಯರ ಸಂಖ್ಯೆಯೇ ಹೆಚ್ಚು ಎಂದು ಭಾಸವಾಗುತ್ತದೆ. ಆದರೆ 2016–2020ರ ಮಧ್ಯೆ ದೇಶದಲ್ಲಿ ಜನಿಸಿದವರ ಲಿಂಗಾನುಪಾತವು 1000 ಗಂಡುಮಕ್ಕಳಿಗೆ: 929 ಹೆಣ್ಣುಮಕ್ಕಳಷ್ಟಿದೆ. ದೇಶವು ಲಿಂಗಾನುಪಾತದಲ್ಲಿ ಇನ್ನೂ ಸಮಾನತೆ ಸಾಧಿಸಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ಕರ್ನಾಟಕದ ಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಲಿಂಗಾನುಪಾತವು 1000 ಪುರುಷರಿಗೆ:1034 ಮಹಿಳೆಯರಷ್ಟಿದೆ. ಆದರೆ ರಾಜ್ಯದಲ್ಲಿ 2016–2020ರ ನಡುವಣ ಐದು ವರ್ಷಗಳಲ್ಲಿ ಜನಿಸಿದವರ ಲಿಂಗಾನುಪಾತವು 1000 ಗಂಡುಮಕ್ಕಳಿಗೆ: 978 ಹೆಣ್ಣುಮಕ್ಕಳಷ್ಟಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಈ ಲಿಂಗಾನುಪಾತವು ಕಡಿಮೆಯೇ ಇದೆ. ಆದರೆ, 16 ಜಿಲ್ಲೆಗಳಲ್ಲಿ 2011–2015ರ ಮಧ್ಯೆ ಜನಿಸಿದವರ ಲಿಂಗಾನುಪಾತಕ್ಕೆ ಹೋಲಿಸಿದರೆ, 2016–2020ರ ನಡುವಣ ಐದು ವರ್ಷಗಳಲ್ಲಿ ಜನಿಸಿದವರ ಲಿಂಗಾನುಪಾತವು ಭಾರಿ ಪ್ರಮಾಣದಲ್ಲಿ ಕುಸಿದಿದೆ. ಅಂತಹ ಜಿಲ್ಲೆಗಳಲ್ಲಿನ ಐದು ವರ್ಷದಲ್ಲಿ ಜನಿಸಿದವರ ಲಿಂಗಾನುಪಾತವು ಈ ರೀತಿ ಇದೆ.

2016–2020ರ ಐದು ವರ್ಷಗಳಲ್ಲಿ ಜನಿಸಿದವರ ಲಿಂಗಾನುಪಾತ

(ಆವರಣದಲ್ಲಿ ಇರುವುದು 2011–15ರ ನಡುವಣ ಐದು ವರ್ಷಗಳಲ್ಲಿ ಜನಿಸಿದವರ ಲಿಂಗಾನುಪಾತ)

ಗಂಡು ಮಕ್ಕಳು / ಹೆಣ್ಣುಮಕ್ಕಳು



ಜಿಲ್ಲೆ	2016–20	(2011–15)
ವಿಜಯಪುರ	1000 : 885	(1000 : 924)
ಬೀದರ್	1000 : 898	(1000 : 1075)
ಯಾದಗಿರಿ	1000 : 922	(1000 : 950)
ಬೆಳಗಾವಿ	1000 : 892	(1000 : 967)
ರಾಯಚೂರು	1000 : 907	(1000 : 1017)
ಹಾವೇರಿ	1000 : 805	(1000 : 974)
ಕೊಪ್ಪಳ	1000 : 952	(1000 : 997)
ದಾವಣಗೆರೆ	1000 : 797	(1000 : 1029)
ಉತ್ತರ ಕನ್ನಡ	1000 : 724	(1000 : 867)
ಬೆಂಗಳೂರು ಗ್ರಾಮಾಂತರ	1000 : 1177	(1000 : 1313)
ಚಿಕ್ಕಮಗಳೂರು	1000 : 849	(1000 : 1444)
ರಾಮನಗರ	1000 : 781	(1000 : 928)
ದಕ್ಷಿಣ ಕನ್ನಡ	1000 : 1038	(1000 : 1136)
ಕೊಡಗು	1000 : 1190	(1000 : 1226)
ಹಾಸನ	1000 : 872	(1000 : 1140)
ಚಾಮರಾಜನಗರ	1000 : 953	(1000 : 1141)

ಆಧಾರ: ಎನ್‌ಎಫ್‌ಎಚ್‌ಎಸ್, ಎನ್‌ಸಿಆರ್‌ಬಿ, ವಿಶ್ವಸಂಸ್ಥೆಯ ‘ಲಿಂಗಾನುಪಾತ ಮತ್ತು ಲಿಂಗ ಆಯ್ಕೆಯಲ್ಲಿ ಪಕ್ಷಪಾತ’ ವರದಿ

27 ವರ್ಷದಲ್ಲಿ 89 ಪ್ರಕರಣ

ಒಂದನೇ ಪುಟದಿಂದ...

ಈ ಸಂಬಂಧ ಒಟ್ಟು ಆರು ವರದಿಗಳನ್ನು ಸಮಿತಿಯು ಸಂಸತ್ತಿಗೆ ಸಲ್ಲಿಸಿದೆ. 2022ರ ಆಗಸ್ಟ್‌ನಲ್ಲಿ ಸಂಸತ್ತಿಗೆ ಸಲ್ಲಿಸಿದ್ದ ಆರನೇ ವರದಿಯಲ್ಲಿ, ‘27 ವರ್ಷಗಳಲ್ಲಿ ಕರ್ನಾಟಕದಲ್ಲಿ ಈ ಕಾಯ್ದೆ ಅಡಿ ದಾಖಲಾಗಿದ್ದು 89 ಪ್ರಕರಣಗಳು ಮಾತ್ರ’ ಎಂದು ಉಲ್ಲೇಖಿಸಿದೆ.

ಜತೆಗೆ 2017–18ರಲ್ಲಿ ಈ ಕಾಯ್ದೆ ಅಡಿ ಕರ್ನಾಟಕದಲ್ಲಿ ಒಂದೂ ಪ್ರಕರಣ ದಾಖಲಾಗಿಲ್ಲ. 2018–19ರಲ್ಲಿ 1, 2019–20ರಲ್ಲಿ 3 ಮತ್ತು 2020–21ರಲ್ಲಿ 1 ಪ್ರಕರಣವನ್ನಷ್ಟೇ ದಾಖಲಿಸಲಾಗಿದೆ. ಕರ್ನಾಟಕವೂ ಸೇರಿ ದೇಶದ ಹಲವು ರಾಜ್ಯಗಳಲ್ಲಿ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಪಾಲಿಸದೇ ಇರುವ ಕಾರಣ, ಕಾಯ್ದೆಯ ಉದ್ದೇಶವೇ ನನೆಗುದಿಗೆ ಬಿದ್ದಂತಾಗಿದೆ ಎಂದು ಸಮಿತಿಯು ತನ್ನ ವರದಿಯಲ್ಲಿ ಕಳವಳ ವ್ಯಕ್ತಪಡಿಸಿದೆ.

ಕರ್ನಾಟಕದಲ್ಲಿ ಈ ಕಾಯ್ದೆ ಅಡಿ ದಾಖಲಾದ ಪ್ರಕರಣಗಳಲ್ಲಿ ತನಿಖೆ ಮತ್ತು ಶಿಕ್ಷೆ ತ್ವರಿತವಾಗಿ ಆಗುತ್ತಿಲ್ಲ ಎಂಬುದರತ್ತಲೂ ವರದಿಯ ದತ್ತಾಂಶಗಳು ಬೊಟ್ಟು ಮಾಡುತ್ತವೆ. 1994ರಿಂದ 2016ರ ಮಾರ್ಚ್‌ವರೆಗೆ ರಾಜ್ಯದಲ್ಲಿ ಈ ಕಾಯ್ದೆ ಅಡಿ 45 ಪ್ರಕರಣಗಳಷ್ಟೇ ದಾಖಲಾಗಿದ್ದವು ಮತ್ತು ಅವುಗಳಲ್ಲಿ ಒಂದರಲ್ಲೂ ಶಿಕ್ಷೆಯಾಗಿರಲಿಲ್ಲ. ನಂತರದ ವರ್ಷಗಳಲ್ಲಿ ಕೆಲವು ಪ್ರಕರಣಗಳಲ್ಲಷ್ಟೇ ಶಿಕ್ಷೆಯಾಗಿದೆ. 1994ರಿಂದ 2021ರ ಡಿಸೆಂಬರ್ ಅಂತ್ಯದವರೆಗೆ ರಾಜ್ಯದಲ್ಲಿ ಈ ಕಾಯ್ದೆ ಅಡಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದ್ದು 38ರಲ್ಲಿ ಮಾತ್ರ.

ಅನ್ಯ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ: ಭ್ರೂಣಲಿಂಗ ಪತ್ತೆ ತಡೆ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿದರೆ, ಅಂತಹ ಪರೀಕ್ಷೆ ನಡೆಸಿದ ಪ್ರಯೋಗಾಲಯ ಅಥವಾ ಆಸ್ಪತ್ರೆ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 315 ಮತ್ತು 316ರ ಅಡಿಯಲ್ಲಿ ಪ್ರಕರಣ ದಾಖಲಿಸಿದರೆ ದಂಪತಿ/ಪತಿ/ಗರ್ಭಿಣಿಯ ಪಾಲಕರು, ವೈದ್ಯ ಮತ್ತು ತಂತ್ರಜ್ಞರಿಗಷ್ಟೇ ಶಿಕ್ಷೆಯಾಗುತ್ತದೆ. ಆಸ್ಪತ್ರೆ ಅಥವಾ ಪ್ರಯೋಗಾಲಯದ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ, ರಾಜ್ಯದಲ್ಲಿ ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ ಐಪಿಸಿ 315 ಮತ್ತು 316ನೇ ಸೆಕ್ಷನ್‌ಗಳ ಅಡಿಯಲ್ಲೇ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.

ಮಂಡ್ಯ ಸಮೀಪದ ಆಲೆಮನೆಯಲ್ಲಿ ಭ್ರೂಣಲಿಂಗ ಪತ್ತೆ ಪರೀಕ್ಷೆ ಮತ್ತು ಹೆಣ್ಣುಭ್ರೂಣ ಹತ್ಯೆ ನಡೆಸುತ್ತಿದ್ದ ತಂಡವೊಂದೇ ಹಿಂದಿನ ಮೂರು ವರ್ಷಗಳಲ್ಲಿ ಇಂತಹ 900ಕ್ಕೂ ಹೆಚ್ಚು ಕೃತ್ಯಗಳನ್ನು ಎಸಗಿದೆ ಎಂಬುದನ್ನು ಪೊಲೀಸರು ದೃಢಪಡಿಸಿದ್ದಾರೆ. ಆದರೆ, ಇಂತಹ ಎಲ್ಲಾ ಕೃತ್ಯಗಳು ಐಪಿಸಿ ಸೆಕ್ಷನ್ ಅಡಿಯಲ್ಲೂ ದಾಖಲಾಗುತ್ತಿಲ್ಲ ಎಂಬುದನ್ನು ಸರ್ಕಾರಿ ದಾಖಲೆಗಳು ಹೇಳುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ ವರದಿಯ ಪ್ರಕಾರ 2021ರಲ್ಲಿ ಕರ್ನಾಟಕದಲ್ಲಿ ಐಪಿಸಿ 315 ಮತ್ತು 316ನೇ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಾಗಿದ್ದು 118 ಪ್ರಕರಣಗಳು ಮಾತ್ರ. ಇವುಗಳಲ್ಲೂ ಎಷ್ಟು ಪ್ರಕರಣಗಳು ಇತ್ಯರ್ಥವಾಗಿವೆ ಮತ್ತು ಎಷ್ಟರಲ್ಲಿ ಶಿಕ್ಷೆಯಾಗಿವೆ ಎಂಬುದರ ಮಾಹಿತಿ ಇಲ್ಲ.



ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ರಿಷಬ್ ಶೆಟ್ಟಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು

ಇಫಿ: ರಿಷಬ್ ಶೆಟ್ಟಿಗೆ ತೀರ್ಪುಗಾರರ ವಿಶೇಷ ಪ್ರಶಸ್ತಿ

ಭಾರತದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ(IFFI–ಇಫಿ) 54ನೇ ಆವೃತ್ತಿಯಲ್ಲಿ ‘ಕಾಂತಾರ’ ಚಿತ್ರಕ್ಕಾಗಿ ನಟ, ನಿರ್ದೇಶಕ ರಿಷಬ್ ಶೆಟ್ಟಿ ಅವರಿಗೆ ‘ತೀರ್ಪುಗಾರರ ವಿಶೇಷ ಪ್ರಶಸ್ತಿ’(ರಜತ ಮಯೂರ) ದೊರೆತಿದೆ.

ಗೋವಾದ ಪಣಜಿಯಲ್ಲಿ ಮಂಗಳವಾರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ಕನ್ನಡ ಚಿತ್ರವೊಂದು ಇದೇ ಮೊದಲ ಬಾರಿಗೆ ಈ ಪ್ರಶಸ್ತಿಗೆ ಭಾಜನವಾಗಿದೆ. ಈ ಬಾರಿ ಅಂತರರಾಷ್ಟ್ರೀಯ ಸ್ಪರ್ಧಾ ವಿಭಾಗದಲ್ಲಿ 15 ಚಿತ್ರಗಳು ಕಣದಲ್ಲಿದ್ದವು. ಈ ಪೈಕಿ ಭಾರತದಿಂದ ‘ಕಾಂತಾರ’ ಸೇರಿದಂತೆ ಒಟ್ಟು ಮೂರು ಚಿತ್ರಗಳು ಸ್ಪರ್ಧೆಯಲ್ಲಿದ್ದವು. ಈ ಪ್ರಶಸ್ತಿ ಪ್ರಮಾಣ ಪತ್ರ, ರಜತ ಮಯೂರ ಮತ್ತು ₹15 ಲಕ್ಷ ನಗದು ಒಳಗೊಂಡಿದೆ.

ಶಂಕರ್‌ನಾಗ್ ಅವರಿಗೆ ಅರ್ಪಣೆ: ‘‘ಸ್ಪೆಷಲ್ ಜ್ಯೂರಿ ಅವಾರ್ಡ್’ ದೊರಕಿದ್ದು, ಎಂದೂ ಮರೆಯಲಾಗದ ಕ್ಷಣ. 1979ರಲ್ಲಿ ನನ್ನ ಸ್ಫೂರ್ತಿಯಾದ ಶಂಕರ್‌ನಾಗ್ ಅವರಿಗೆ ‘ಒಂದಾನೊಂದು ಕಾಲದಲ್ಲಿ’ ಚಿತ್ರಕ್ಕೆ ಅತ್ಯುತ್ತಮ ನಟ ಎಂಬ ಪ್ರಶಸ್ತಿ ಇದೇ ಚಿತ್ರೋತ್ಸವದಲ್ಲಿ ದೊರಕಿತ್ತು. ಅವರು ತೋರಿಸಿರುವ ದಾರಿಯಲ್ಲಿ ನಡೆಯಲು ಪ್ರಯತ್ನಿಸುತ್ತಿರುವ ನನಗೆ ಇಂದು ಈ ಪ್ರಶಸ್ತಿ ದೊರೆತಿರುವುದು ಸಂತಸ ನೀಡಿದೆ. ಜನರ ಪ್ರಶಂಸೆ ಮತ್ತು ಬೆಂಬಲ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ಮತ್ತೊಮ್ಮೆ ಉತ್ತಮವಾದ ಚಿತ್ರವನ್ನು ನೀಡಲು ಶ್ರಮಿಸುತ್ತೇನೆ. ಈ ನನ್ನ ಎಲ್ಲ ಪ್ರಯತ್ನ ಹಾಗೂ ಯಶಸ್ಸಿಗೆ ಕಾರಣರಾದ ಪ್ರೀತಿಯ ಕನ್ನಡಿಗರಿಗೆ ನಾನು ಸದಾ ಆಭಾರಿ. ಈ ಪ್ರಶಸ್ತಿಯನ್ನು ನಾನು ಶಂಕರ್‌ನಾಗ್ ಅವರಿಗೆ ಅರ್ಪಿಸುತ್ತಿದ್ದೇನೆ’ ಎಂದಿದ್ದಾರೆ.

ಸ್ವಿಡ್ಜರ್ಲೆಂಡ್‌ಗೆ ‘ಸಂಜು ಮತ್ತು ಗೀತಾ’

ನಾಗಶೇಖರ್ ಅವರ ನಿರ್ದೇಶನದ, ಶ್ರೀನಗರ ಕಿಟ್ಟಿ ಹಾಗೂ ರಚಿತಾ ರಾಮ್ ನಟನೆಯ ‘ಸಂಜು ವೆಡ್ಸ್ ಗೀತಾ–2’ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ.

‘ಚಿತ್ರದ ಮೊದಲ ಭಾಗಕ್ಕೆ ಸಿಕ್ಕ ಯಶಸ್ಸೇ ಎರಡನೇ ಭಾಗವನ್ನು ಕೈಗೆತ್ತಿ- ಕೊಳ್ಳಲು ಕಾರಣ. ಮೊದಲ ಹಂತದಲ್ಲಿ ಈಗಾಗಲೇ ಆರು ದಿನ ಶೂಟಿಂಗ್ ನಡೆದಿದೆ. ರಂಗಾಯಣ ರಘು, ಸಾಧು ಕೋಕಿಲ ಅವರು ಚಿತ್ರದ ತಾರಾಬಳಗ- ದಲ್ಲಿದ್ದಾರೆ. ಡಿಸೆಂಬರ್ 2ರಿಂದ ಬೆಂಗಳೂರಲ್ಲಿ, ಡಿ.9ರಿಂದ ಸ್ವಿಡ್ಜರ್ಲೆಂಡ್‌ನಲ್ಲಿ 12 ದಿನ ಚಿತ್ರೀಕರಣ ಮುಗಿಸಿ, ನಂತರ ಮುಂಬಯಿ, ಹೈದರಾಬಾದ್‌ನಲ್ಲಿ ಚಿತ್ರೀಕರಣ ನಡೆಸುವ ಆಲೋಚನೆಯಿದೆ’ ಎಂದಿದ್ದಾರೆ ನಾಗಶೇಖರ್.

‘2024ರ ಏಪ್ರಿಲ್ 1ರಂದು ಚಿತ್ರವನ್ನು ಬಿಡುಗಡೆ ಮಾಡಬೇಕು ಎಂದುಕೊಂಡಿದ್ದೇವೆ. ಅದೇ ದಿನ ಮೊದಲ ಭಾಗ ಬಿಡುಗಡೆ ಯಾಗಿತ್ತು’ ಎನ್ನುತ್ತಾರೆ ನಾಗಶೇಖರ್. ನಾಗಶೇಖರ್ ಮೂವೀಸ್ ಹಾಗೂ ಪವಿತ್ರ ಇಂಟರ್‌ನ್ಯಾಷನಲ್ ಮೂವಿ ಮೇಕರ್ಸ್ ಸಹಯೋಗದೊಂದಿಗೆ ಮಹಾನಂದಿ ಕ್ರಿಯೇಶನ್ಸ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನಾಗಶೇಖರ್ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಶ್ರೀಧರ್ ವಿ.ಸಂಭ್ರಮ್ ಸಂಗೀತ ಚಿತ್ರಕ್ಕಿದೆ.



ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಸಹಾಯದ ಸರಪಳಿ!



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಇದು ಈ ವರ್ಷವೇ ಅಮೆರಿಕದ ಕನ್ಸಾಸ್‌ನಲ್ಲಿ ನಡೆದ ಘಟನೆ. ಬಿಲ್ಲಿ ರೇ ಹ್ಯಾರಿಸ್ ಎಂಬ ಮನೆಯಿಲ್ಲದ ಬಡ ವ್ಯಕ್ತಿ ರಸ್ತೆಯಲ್ಲಿ ಜನರ ಹತ್ತಿರ ಸಹಾಯ ಕೇಳುತ್ತಿದ್ದ. ಸಾರಾ ಡಾರ್ಲಿಂಗ್ ಎಂಬ ಮಹಿಳೆ ಆತನ ಪಾತ್ರೆಗೆ ಹಣ ಹಾಕುವಾಗ ಅಚಾನಕ್ಕಾಗಿ ಆಕೆಯ ನಿಶ್ಚಿತಾರ್ಥದ ವಜ್ರದುಂಗುರ ಜಾರಿ ಆ ಪಾತ್ರೆಗೆ ಬಿದ್ದುಬಿಟ್ಟಿತ್ತು. ಕೆಲ ಸಮಯದ ನಂತರ ಬಿಲ್ಲಿ ಉಂಗುರವನ್ನು ನೋಡಿದ. ಎಷ್ಟೆಂದರೂ ಮನುಷ್ಯ, ಚಿಕ್ಕಾಸೂ ಬೇರೆ ಕೈಲಿಲ್ಲ. ಸಹಜವಾಗಿ ಆತನಲ್ಲಿ ಆಸೆ ಮೊಳೆಯಿತು. ಬಂಗಾರದಂಗಡಿಗೆ ಹೋದ. ನಾಲ್ಕು ಸಾವಿರ ಡಾಲರ್ ಕೊಡುವುದಾಗಿ ಹೇಳಿದರು.

ಆದರೆ ಮನೆಯಿಲ್ಲದೇ ಭಿಕ್ಷೆ ಬೇಡುತ್ತಿದ್ದರೂ ಬಿಲ್ಲಿಗೆ ಯಾಕೋ ಆ ಉಂಗುರವನ್ನು ಮಾರಲು ಮನಸ್ಸು ಬರಲಿಲ್ಲ. ಮಾರನೇ ದಿನ ಬಂದ ಸಾರಾಗೆ ಉಂಗುರ ವಾಪಾಸು ಮಾಡಿದ. ಖುಶಿಯಾದ ಸಾರಾ ಮತ್ತಾಕೆಯನ್ನು ಮದುವೆಯಾಗಲಿರುವ ಹುಡುಗ ಇಬ್ಬರೂ ಕ್ರೌಡ್ ಫಂಡಿಂಗ್ ಮಾಡಿ ಒಂದು ಸಾವಿರ ಡಾಲರ್ ಒಟ್ಟುಗೂಡಿಸಿ ಬಿಲ್ಲಿಗೆ ಕೊಡಲು ನಿರ್ಧರಿಸಿದರು. ಆದರೆ ಬಿಲ್ಲಿಯ ಪ್ರಾಮಾಣಿಕತೆ ಜನರಿಗೆ ಅದೆಷ್ಟು ಇಷ್ಟವಾಯಿತು ಎಂದರೆ ಮೂರೇ ತಿಂಗಳಲ್ಲಿ ಬರೋಬ್ಬರಿ ಹತ್ತಿರ ಹತ್ತಿರ ಎರಡು ಲಕ್ಷ ಡಾಲರ್ ಸಂಗ್ರಹವಾಗಿಬಿಟ್ಟಿತು! ಏನೂ ಇಲ್ಲದೇ ಬೀದಿಗೆ ಬಿದ್ದಿದ್ದ ಬಿಲ್ಲಿಯ ಹತ್ತಿರ ಈಗ ಮನೆಯಿದೆ, ಕಾರಿದೆ. ಅಷ್ಟೇ ಅಲ್ಲ, ಮಾಧ್ಯಮಗಳಲ್ಲಿ ಈ ಸುದ್ದಿ ಪ್ರಚಾರವಾಗಿ ಹದಿನಾರು ವರ್ಷಗಳಿಂದ ಅವನು ನೋಡದೇ ಇದ್ದ ಕುಟುಂಬದವರೂ ಸಿಕ್ಕಿದ್ದಾರೆ! ‘ಮೊದಲು ನನಗೆ ಉಂಗುರ ಮಾರುವ ಯೋಚನೆ ಬಂದಿದ್ದು ನಿಜ, ಆದರೆ ಮಾರಲಿಲ್ಲ. ಕಾರಣ ನಾನು ಸಂತನಲ್ಲದಿರಬಹುದು, ಆದರೆ ದೆವ್ವವೂ ಅಲ್ಲ!’ ಎನ್ನುತ್ತಾನಾತ.

ಹಸಿದವರಿಗೆ ಊಟ ನೀಡುವಾಗ ತಾಯಂದಿರು ಮುಂದೆ ತಮ್ಮ ಮಕ್ಕಳಿಗೂ ಯಾರೋ ಸಹಾಯ ಮಾಡುತ್ತಾರೆಂದು ಹೇಳುವುದನ್ನು ಕೇಳಿದ್ದೇವೆ. ಇದು ಶತಶತಮಾನಗಳಿಂದ ಉಳಿದುಕೊಂಡಿರುವ ನಂಬಿಕೆ. ಇಂದು ನಾವು ಯಾರಿಗೋ ಸಹಾಯ ಮಾಡಿದರೆ ನಾಳೆ ನಮಗೋ ನಮ್ಮವರಿಗೋ ಇನ್ಯಾರೋ ಒಳಿತನ್ನು ಮಾಡುವರೆಂಬ ಈ ಪರಿಕಲ್ಪನೆಯೇ ಅದ್ಭುತವಾದದ್ದು. ಈ ಸಹಾಯದ ಸರಪಳಿಯ ಹಿಂದಿರುವ ಆಶಾವಾದ ಪ್ರಬಲವಾದದ್ದು. ಇಂತಹ ಘಟನೆಗಳು ಮನುಷ್ಯತ್ವದ ಮೇಲಿನ ನಂಬಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ. ಸ್ವಾರ್ಥದ ಚಿಪ್ಪಿನಿಂದ ಹೊರಬಂದು ಇತರರಿಗೆ ಸಹಾಯ ಮಾಡಲು ಸ್ಫೂರ್ತಿ ನೀಡುತ್ತವೆ. ಒಳ್ಳೆಯ ಸಂಗತಿಗಳು ಜಗತ್ತಿನ ಎಲ್ಲ ಕಡೆಯಿಂದ ಬರಲಿ ಎಂಬ ಮಾತಿದೆ. ಇಂತಹ ಘಟನೆಗಳೂ ಜಗತ್ತಿನೆಲ್ಲೆಡೆ ನಡೆಯಲಿ. ಸ್ವಾರ್ಥವನ್ನು, ಲೋಭವನ್ನು ಕೊಂಚ ಬದಿಗಿಟ್ಟು ಒಬ್ಬರಿಗೊಬ್ಬರು ಸಹಾಯಹಸ್ತ ಚಾಚುವ ಮನುಷ್ಯರ ಸಂಖ್ಯೆ ಹೆಚ್ಚಾಗುತ್ತಲೇ ಇರಲಿ. ಒಳ್ಳೆಯತನ ಸಾಂಕ್ರಾಮಿಕವಾಗಲಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ನವೆಂಬರ್ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ತೃತೀಯ ಗಂ. 14-26 ನಕ್ಷತ್ರ: ಆರ್ದ್ರಾ ಗಂ. 15-01 ಯೋಗ: ಶುಭ ಗಂ 20-14
ಕರಣ: ವಿಷ್ಟಿ ಗಂ 14-26, ವೃಶ್ಚಿಕ ಮಾಸದ 14 ನೇ ದಿನ,
ಮಳೆನಕ್ಷತ್ರ: ಅನುರಾಧ 4. ರಾಹುಕಾಲ : ಮಧ್ಯಾಹ್ನ 01-30 - 03-00,
ಸೂರ್ಯೋದಯ: 06-41 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ: 15 ಜುಮಾದುಲ್ಲಾವಲ್, **ದಿನ ವಿಶೇಷ :** ಸಂಕಷ್ಟಹರ ಚತುರ್ಥಿ (ಚಂದ್ರೋದಯ - ರಾತ್ರಿ 8:32), ಕನಕದಾಸ ಜಯಂತಿ, **ಅದೃಷ್ಟ ಸಂಖ್ಯೆ :** 8, 1

ಮೇಷ: ವ್ಯಾಪಾರಿಗಳು ಗ್ರಾಹಕರಲ್ಲಿ ಸ್ನೇಹ, ವಿಶ್ವಾಸವನ್ನು ಬೆಳೆಸಿಕೊಳ್ಳು- ವುದರಿಂದ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಪಡೆಯಬಹುದು. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರುವುದು ಒಳ್ಳೆಯದು.

ವೃಷಭ: ವಾತಾವರಣ ನಿಮಗೆ ಬೇಕಾದ ರೀತಿಯಲ್ಲಿ ಇಲ್ಲದಿರುವುದಿಂದ ಪೂರ್ವನಿಯೋಜಿತ ಕೆಲಸಗಳನ್ನು ಮಾಡುವಲ್ಲಿ ಹಿನ್ನಡೆಯಾಗಬಹುದು. ಆರೋಗ್ಯದಲ್ಲಿ ನೀವು ವಹಿಸುವ ಕಾಳಜಿಯು ಕಡಿಮೆಯಾಗುವುದು.

ಮಿಥುನ: ಮಾತುಕತೆಯಿಂದ ಬಗೆಹರಿಸಿಕೊಳ್ಳಬಹುದಾದ ಹಲವು ಸಮಸ್ಯೆಗಳ- ನ್ನು ನಿಮ್ಮ ಮೌನದಿಂದಾಗಿ ಹೆಚ್ಚು ಮಾಡಿಕೊಳ್ಳುವಿರಿ. ಹೊಟ್ಟೆಯುಬ್ಬರ ಅಥವ ಉದರಕ್ಕೆ ಸಂಬಂಧಿಸಿದ ಯಾವುದೇ ತೊಂದರೆಯಾದರೂ ಮನೆಮದ್ದು ಬಳಸಿ.

ಕರ್ಕಾಟಕ: ಎಣ್ಣೆಯಲ್ಲಿ ಕರಿದ ವಸ್ತುಗಳ ಮಾರಾಟಗಾರರಿಗೆ ವ್ಯವಹಾರ ವಿಸ್ತಾರಕ್ಕೆ ಅವಕಾಶ. ವಿದೇಶಿ ವಿನಿಮಯವನ್ನು ಮಾಡುವವರು ಮಧ್ಯವರ್ತಿಗಳ ಕೆಲವು ನೀಚಬುದ್ಧಿಯಿಂದ ಸಣ್ಣಪುಟ್ಟ ನಷ್ಟವನ್ನು ಅನುಭವಿಸುವಿರಿ.

ಸಿಂಹ: ಅಂಚೆ ಕಚೇರಿ ಪರೀಕ್ಷೆ ಬರೆದವರಿಗೆ ನಿಮ್ಮ ಆಕಾಂಕ್ಷೆಗೆ ಮೀರಿದ ಫಲಿತಾಂಶ ದೊರೆದರೂ ಸಹ ಕುಟುಂಬದಿಂದ ದೂರವಾಗಬೇಕಾದ ಪರಿಸ್ಥಿತಿ ಎದುರಾಗುವುದು. ದಿನದ ಪೂರ್ವಾರ್ಧದಲ್ಲಿ ಮಾನಸಿಕ ಖಿನ್ನತೆ ಇರಬಹುದು.

ಕನ್ಯಾ: ನಿಮ್ಮ ಸೌಂದರ್ಯಪ್ರಜ್ಞೆಯು ಇತರರಿಗೂ ಮುದವನ್ನು ಕೊಡುವಂತಿರಲಿ. ಮುಂದಾಲೋಚನೆ ಇಲ್ಲದೆ ತೆಗೆದುಕೊಂಡ ನಿರ್ಧಾರಗಳಿಂದ ಎಡಗುವಿರಿ. ಸಾಯಂಕಾಲದ ವೇಳೆ ಧನ ಲಾಭವಾಗುವ ಯೋಗವಿದೆ.

ತುಲಾ: ಎಲ್ಲಾ ವಿಚಾರದಲ್ಲಿಯೂ ಸಹ ಇತರರ ಅಭಿಪ್ರಾಯವನ್ನು ಕೇಳದೇ ನಿಮ್ಮದೇ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಅಭ್ಯಾಸಿಸಿ. ಬೆನ್ನ ಹಿಂದೆ ಚೂರಿ ಹಾಕುವಂತಹಾ ಹಿತಶತ್ರುಗಳ ಮೇಲೆ ಗಮನವಿರಲಿ.

ವೃಶ್ಚಿಕ: ತಾಯಿಯ ಸಹಾಯದಿಂದ ನಿಮ್ಮ ಸ್ವಂತ ಉದ್ಯೋಗದಲ್ಲಿ ಅಧಿಕವಾದ ಲಾಭವಾಗುವುದು. ಸಹೋದ್ಯೋಗಿಗಳ ಎಲ್ಲಾ ಸಲಹೆಗಳನ್ನು ಸಹ ನಿರಾಕರಣೆ ಮಾಡುವುದು ನಿಮ್ಮ ನಷ್ಟಕ್ಕೆ ಕಾರಣವಾಗುವುದು.

ಧನು: ನೀವು ನಂಬುವ ದೇವಸ್ಥಾನದ ಸೇವೆ ಮಾಡುವುದರಿಂದ ಈಗ ನಿಮಗಿರುವ ಗೊಂದಲಗಳು ನಿವಾರಣೆಯಾಗಿ ಸರಿಯಾದ ಮಾರ್ಗ ಸಿಗುವುದು. ಮಕ್ಕಳ ಶೈಕ್ಷಣಿಕ ಬೆಳವಣಿಗೆ ಸಮಾಧಾನಕರವಾಗಿರುವುದು.

ಮಕರ: ಮನರಂಜನೆಯ ವಿಷಯದಲ್ಲಿ ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯವಾಗುವುದು. ವಿದ್ಯಾಭ್ಯಾಸದಲ್ಲಿ ಅನೇಕ ತೊಂದರೆಯನ್ನು ಎದುರಿಸಬೇ- ಕಾಗುವುದು. ಅನಿರೀಕ್ಷಿತವಾಗಿ ಉಡುಗೊರೆ ದೊರಕುವ ಲಕ್ಷಣಗಳಿರುವುದು.

ಕುಂಭ: ಏಕಮುಖ ಪ್ರತಿಭೆಯನ್ನು ನಾಶಮಾಡಿ ಇನ್ನಿತರೇ ವಿಷಯಗಳಿಗೂ ಅಷ್ಟೇ ಪ್ರಾಮುಖ್ಯತೆ ನೀಡಿ. ವೃತ್ತಿಗೆ ಸಂಬಂಧಿಸಿದಂತೆ ನಿತ್ಯದ ದಿನಚರಿಯನ್ನು ವ್ಯತ್ಯಾಸ ಮಾಡುವುದು ಸರಿಯಲ್ಲ. ನಿಮ್ಮ ವ್ಯವಹಾರಗಳಲ್ಲಿ ಹಿಡಿತ ಸಾಧಿಸಿರಿ.


ಮೀನ: ವ್ಯವಹಾರದಲ್ಲಿ ನಿಮಗೆ ಎದುರಾಗುವ ಸಮಸ್ಯೆಗೆ ನಿಮ್ಮ ಸೋಮಾರಿತನವೇ ಮೂಲ ಕಾರಣವಾಗಲಿದೆ. ಆದ್ದರಿಂದ ಉದಾಸೀನತೆಯ- ನ್ನು ದೂರವಿಡಿ. ಮನೆಯ ಹೆಣ್ಣುಮಕ್ಕಳ ಮದುವೆ ವಿಚಾರ ಪ್ರಸ್ತಾಪಕ್ಕೆ ಬರಲಿದೆ.

ಪದಬಂಧ 5515

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮತಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
3.ನಾಮ ಧರಿಸಿದವನ ಹೆಸರು (4)
5.ದೇವರಿಗೆ ಅರ್ಪಿಸಿ ಪಡೆದುದು (3)
7.ತಿರುಗಿದಾಗ ಕಾಣಿಸಿದ ಕೊಳೆ (2)
9.ಪ್ರನಾಳದಲ್ಲೇ ಕೊಳವೆಯಿದೆ (2)
10.ಕಟ ಕಟ ಶಬ್ದ ಮಾಡುತ್ತಿರುವ ರಥ (3)
11.ಕ್ಷಾಮ ಹೀಗೆ ಬಂದಿದೆ (2)
12.ಪಯಣದಲ್ಲಿ ತಿರುಗಿ ಕಟ್ಟಿರುವ ಬಾಜಿ! (2)
14.ಮಡಿಯಿಂದ ಏರಿದ ಅಟ್ಟ (3)
16.ಅಪರಾಧಿಗಳನ್ನು ಕೊಲ್ಲಲು ನಿಯುಕ್ತನಾದವನು (4)
17.ಕನ್ನಡದವ ಧರಿಸಿದ ಚಾಳೀಸು (4))

ಮೇಲಿಂದ ಕೆಳಕ್ಕೆ
1.ಅರಸಿದಾಗ ರಾಜ ಕಾಣಿಸಿದನಲ್ಲಾ! (3)
2.ಪ್ರಗತಿಯಲ್ಲಿರುವ ನಕಲು ಉಲ್ಟಾಪಲ್ಟಾ ಆಗಿದೆ (2)
3.ಶಬ್ದಕ್ಕೊಂದು ಪರ್ಯಾಯ ನುಡಿ (2)
4.ಯಮನ ಹತ್ತಿರವಿರುವ ಜೋಡಿ (3)
6.ಒಟ್ಟಿಗೆ ನಡೆದ ಮದುವೆ (7)
8.ಈತ ಸ್ವಪ್ನವನ್ನು ಕಾಣುವನು (5)
9.ಹೆಸರನ್ನಿಡುವ ಶಾಸ್ತ್ರ (5)
11.ಈತ ದುಡ್ಡಿಲ್ಲದವನು (3)
13.ಪದ ಹೇಳಿ ಪಡೆದ ಬಿಲ್ಲೆ (3)
14.ಮಧುರ ಫಲ ನೀಡುವ ವೃಕ್ಷ (2)
15.ತಿರುಗಿ ನಿಂತು ಕಟ್ಟು! (2)



5514ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉರಗ 3.ಗಡಿಗೆ
5.ಅಲೆ 6.ತರಾಟೆ
7.ತಮ 9.ಮರ್ಜಿ
11.ಕದಪು 13.ಆಳು
14.ಇಲ್ಲಣ 15.ಗಮಾರ

ಮೇಲಿಂದ ಕೆಳಕ್ಕೆ:
1.ಉಯ್ಯಾಲೆ 2.ಗಣಿತ
3.ಗಲಾಟೆ 4.ಗೆಳತಿ
5.ಅನ್ವರ್ಥನಾಮ 8.ಮದುಮಗಳು
10.ಜೀಗಳ 11.ಕಲ್ಯಾಣ
12.ಪುಲ್ಲಿಂಗ 13.ಆದರ

ಸುಡೊಕು 5901

		4		9		1		8
	1	2		3			6	
		7	4		1	3		9
2	9				4	6		
1	4			5				
							9	4
3		9			5		7	
	8			1		9		3
4		1	3		9		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5900 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

17 ಮಸೂದೆಗಳ ಚರ್ಚೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಒಟ್ಟು ಏಳು ಹೊಸ ಮಸೂದೆಗಳನ್ನು ಮಂಡಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ತೆಲಂಗಾಣದಲ್ಲಿ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆ, ಜಮ್ಮು ಮತ್ತು ಕಾಶ್ಮೀರ ಹಾಗೂ ಪುದುಚೇರಿ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮಸೂದೆಗಳೂ ಇದರಲ್ಲಿ ಸೇರಿವೆ.

ಇವಲ್ಲದೆ, ಅಂಗೀಕಾರಕ್ಕೆ ಬಾಕಿ ಇರುವ ಹತ್ತು ಮಸೂದೆಗಳು ಕೂಡ ಚರ್ಚೆಗೆ ಬರಲಿವೆ. ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ (ನೇಮಕ, ಸೇವಾ ನಿಬಂಧನೆಗಳು ಮತ್ತು ಅಧಿಕಾರ ಅವಧಿ) ಮಸೂದೆ ಕೂಡ ಚರ್ಚೆಗೆ ಬರಲಿದೆ. ಈ ಮಸೂದೆಯು ಮುಖ್ಯ ಚುನಾವಣಾ ಆಯುಕ್ತ ಹಾಗೂ ಚುನಾವಣಾ ಆಯುಕ್ತರ ನೇಮಕವನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಇಲ್ಲದ ಸಮಿತಿಯೊಂದರ ಮೂಲಕ ನಡೆಸುವ ಪ್ರಸ್ತಾವ ಹೊಂದಿದೆ.

ಜಿಎಸ್‌ಟಿ ಮಂಡಳಿಯ ಕೆಲವು ಶಿಫಾರಸುಗಳನ್ನು ಜಾರಿಗೆ ತರಲು ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಎರಡನೆಯ ತಿದ್ದುಪಡಿ) ಮಸೂದೆ 2023ನ್ನು ಮಂಡಿಸುವ ಬಗ್ಗೆಯೂ ಕೇಂದ್ರ ಆಲೋಚನೆ ನಡೆಸಿದೆ.

ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಮಸೂದೆಗೆ ಸಂಸತ್ತಿನ ಒಪ್ಪಿಗೆ ಪಡೆದುಕೊಳ್ಳುವುದು ಕೇಂದ್ರದ ಪ್ರಮುಖ ಉದ್ದೇಶ ಆಗಿರಲಿದೆ. ಈ ಮಸೂದೆಗಳನ್ನು ಗೃಹ ಸಚಿವಾಲಯಕ್ಕೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿಯು ಪರಿಶೀಲಿಸಿದೆ.

ಸುಧಾ, ಮಯೂರ ಓದಿರಿ

ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ • 2024ರ ಜನವರಿ 1ರಿಂದ ಅನ್ವಯ

ಗರೀಬ್ ಕಲ್ಯಾಣ: ಮತ್ತೆ 5 ವರ್ಷ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ 81.35 ಕೋಟಿ ಫಲಾನುಭವಿಗಳಿಗೆ ಉಚಿತವಾಗಿ ಆಹಾರಧಾನ್ಯ ಒದಗಿಸುವ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯನ್ನು (ಪಿಎಂಜಿಕೆಎವೈ) ಮತ್ತೆ ಐದು ವರ್ಷ ವಿಸ್ತರಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.

ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ. ಈ ಯೋಜನೆ ಅಡಿ ಬಡ ಕುಟುಂಬಗಳಿಗೆ ಪ್ರತಿ ತಿಂಗಳು 5 ಕೆ.ಜಿ. ಆಹಾರ ಧಾನ್ಯ ವಿತರಿಸಲಾಗುತ್ತದೆ. ದೇಶದಲ್ಲಿ ಕೋವಿಡ್ ವ್ಯಾಪಕವಾಗಿ ಹರಡಿದ್ದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು 2020ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿತ್ತು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್, ‘ಯೋಜನೆಯನ್ನು 2024ರ ಜನವರಿ 1ರಿಂದ ಅನ್ವಯವಾಗುವಂತೆ ಇನ್ನೂ ಐದು ವರ್ಷಗಳವರೆಗೆ ವಿಸ್ತರಿಸಲಾಗಿದೆ. ಐದು ವರ್ಷಗಳ ಅವಧಿಗೆ ಸುಮಾರು ₹11.80 ಲಕ್ಷ ಕೋಟಿಗಳಷ್ಟು ವೆಚ್ಚವಾಗಲಿದೆ’ ಎಂದರು.

ಆಹಾರ ಧಾನ್ಯಗಳ ವಿತರಣೆಯು (ಅಕ್ಕಿ, ಗೋಧಿ ಮತ್ತು ಧಾನ್ಯಗಳು / ಸಿರಿಧಾನ್ಯಗಳು) ಆಹಾರ ಭದ್ರತೆಯನ್ನು ಬಲಪಡಿಸುತ್ತದೆ. ದೇಶದ ಬಡ ಮತ್ತು ದುರ್ಬಲ ವರ್ಗಗಳ ಆರ್ಥಿಕ ಸಂಕಷ್ಟ ತಗ್ಗಿಸುತ್ತದೆ. 5 ಲಕ್ಷಕ್ಕೂ ಹೆಚ್ಚು ನ್ಯಾಯಬೆಲೆ ಅಂಗಡಿಗಳ ಜಾಲದ ಮೂಲಕ ಎಲ್ಲ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಹಾರ ಧಾನ್ಯಗಳನ್ನು ಉಚಿತವಾಗಿ ತಲುಪಿಸಲಾಗುವುದು ಎಂದರು.

15 ಸಾವಿರ ಮಹಿಳಾ ಸ್ವಸಹಾಯ ಗುಂಪುಗಳಿಗೆ ಡ್ರೋನ್

15,000 ಮಹಿಳಾ ಸ್ವ ಸಹಾಯ ಗುಂಪುಗಳಿಗೆ(ಎಸ್‌ಎಚ್‌ಜಿ) 2024–25ರ ಹಣಕಾಸು ವರ್ಷದಿಂದ ಎರಡು ವರ್ಷಗಳಲ್ಲಿ ಡ್ರೋನ್‌ಗಳನ್ನು ಒದಗಿಸಲು ₹1,261 ಕೋಟಿ ವಿನಿಯೋಗಕ್ಕೆ ಸಂಪುಟ ಒಪ್ಪಿಗೆ ಸೂಚಿಸಿದೆ.

'2024–25 ಹಾಗೂ 2025–26ರ ಹಣಕಾಸು ವರ್ಷದಲ್ಲಿ ಆಯ್ದ 15,000 ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಡ್ರೋನ್‌ಗಳನ್ನು ವಿತರಿಸುವ ಯೋಜನೆ ಇದಾಗಿದೆ. ಸ್ವಸಹಾಯ ಗುಂಪುಗಳು ಈ ಡ್ರೋನ್‌ಗಳನ್ನು ರೈತರಿಗೆ ಕೃಷಿ ಕೆಲಸಕ್ಕೆ ಬಾಡಿಗೆ ನೀಡಿ ಆದಾಯ ಗಳಿಸಬಹುದಾಗಿದೆ’ ಎಂದು ಸಚಿವ ಅನುರಾಗ್ ಠಾಕೂರ್ ತಿಳಿಸಿದರು.

ಈ ಯೋಜನೆಯು ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಸುಸ್ಥಿರ ಉದ್ಯಮಕ್ಕೆ ನೆರವಾಗಲಿದ್ದು, ಜೀವನೋಪಾಯಕ್ಕೆ ಅನುಕೂಲವಾಗಲಿದೆ. ಈ ಮೂಲಕ ವರ್ಷಕ್ಕೆ ಕನಿಷ್ಠ ಪಕ್ಷ ₹1 ಲಕ್ಷ ಆದಾಯ ಗಳಿಸಬಹುದಾಗಿದೆ ಎಂದು ಹೇಳಿದರು.

ಆಗಸ್ಟ್ 15ರ ತಮ್ಮ ಸ್ವಾತಂತ್ರ್ಯ ದಿನದ ಭಾಷಣದಲ್ಲಿ, ಡ್ರೋನ್ ತಂತ್ರಜ್ಞಾನದೊಂದಿಗೆ ಸ್ವಸಹಾಯ ಗುಂಪುಗಳಿಗೆ ಶಕ್ತಿ ನೀಡುವುದಾಗಿ ಮೋದಿ ಘೋಷಿಸಿದ್ದರು. ಗ್ರಾಮೀಣ ಅಭಿವೃದ್ಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸಾಮರ್ಥ್ಯವನ್ನು ಹೆಚ್ಚಿಸುವ ವಿಷಯದ ಪ್ರಸ್ತಾಪದ ಸಂದರ್ಭ ಹೇಳಿದ್ದರು.

ಪಿಎಂ ಜನ್ ಮನ್‌ಗೆ ₹24,104 ಕೋಟಿ:

ಇದಲ್ಲದೆ, ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನಕ್ಕೆ (ಪಿಎಂ ಜನ್ ಮನ್) ಒಟ್ಟು ₹24,104 ಕೋಟಿಯ (ಕೇಂದ್ರ ಪಾಲು ₹15,336 ಕೋಟಿ ಮತ್ತು ರಾಜ್ಯದ ಪಾಲು ₹8,768 ಕೋಟಿ) ಅನುಮೋದನೆ ನೀಡಿದೆ.

ನಿರ್ದಿಷ್ಟವಾಗಿ ದುರ್ಬಲ ಬುಡಕಟ್ಟು ಗುಂಪುಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸಲು ಈ ಮೊತ್ತ ವಿನಿಯೋಗಿಸಲಾಗುವುದು. ಇದು ಸುರಕ್ಷಿತ ವಸತಿ, ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯ, ಶಿಕ್ಷಣ, ಆರೋಗ್ಯ ಮತ್ತು ಪೋಷಣೆಗೆ ಸುಧಾರಿತ ಲಭ್ಯತೆ, ರಸ್ತೆ ಮತ್ತು ದೂರಸಂಪರ್ಕ ಮತ್ತು ಸುಸ್ಥಿರ ಜೀವನೋಪಾಯದ ಅವಕಾಶಗಳಂತಹ ಮೂಲಸೌಲಭ್ಯಗಳನ್ನು ಒದಗಿಸುತ್ತದೆ. ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕ್ರಿಯಾ ಯೋಜನೆಯಡಿ ಮುಂದಿನ ಮೂರು ವರ್ಷಗಳಲ್ಲಿ ಮಿಷನ್ ಅನ್ನು ಕಾರ್ಯಗತಗೊಳಿಸಲು ₹15,000 ಕೋಟಿ ಲಭ್ಯವಾಗಲಿದೆ ಎಂದು ಅವರು ಹೇಳಿದರು.

ಕಾರ್ಯ ಉದ್ದೇಶದ ನಿಯಮಕ್ಕೆ ಅಸ್ತು

ಕೇಂದ್ರ ಸಚಿವ ಸಂಪುಟವು 16 ನೇ ಹಣಕಾಸು ಆಯೋಗದ ಕಾರ್ಯ ಉದ್ದೇಶದ ನಿಯಮಕ್ಕೆ ಅನುಮೋದನೆ ನೀಡಿದೆ.

ಕೇಂದ್ರ ಮತ್ತು ರಾಜ್ಯಗಳ ನಡುವಿನ ತೆರಿಗೆ ಆದಾಯ ಹಂಚಿಕೆ, ರಾಜ್ಯಗಳಿಗೆ ಅನುದಾನ ಹಂಚಿಕೆಗೆ ಶಿಫಾರಸು ಮಾಡುವುದರ ಜೊತೆಗೆ, ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಕಷ್ಟು ಸಂಪನ್ಮೂಲಗಳನ್ನು ಖಚಿತಪಡಿಸಿಕೊಳ್ಳಲು, ವಿಪತ್ತು ನಿರ್ವಹಣೆಗೆ ಕ್ರಮಗಳನ್ನು ಸೂಚಿಸಲು ಆಯೋಗವನ್ನು ಕೇಳಲಾಗಿದೆ ಎಂದು ಸಚಿವ ಅನುರಾಗ್ ಠಾಕೂರ್ ಅವರು ಹೇಳಿದರು.

16ನೇ ಹಣಕಾಸು ಆಯೋಗವು ತನ್ನ ವರದಿಯನ್ನು ಅಕ್ಟೋಬರ್ 2025 ರೊಳಗೆ ಸಲ್ಲಿಸಲಿದೆ. 2026ರ ಏಪ್ರಿಲ್‌ನಿಂದ ಐದು ವರ್ಷಗಳ ಅವಧಿಗೆ ಶಿಫಾರಸುಗಳು ಅನ್ವಯವಾಗಲಿವೆ.

‘ರಾಜ್ಯಗಳು, ಕೇಂದ್ರ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ಪಡೆದ ನಂತರ ಆಯೋಗವು ಶಿಫಾರಸುಗಳನ್ನು ನೀಡಲಿದೆ’ ಎಂದು ಅವರು ಹೇಳಿದರು.


16ನೇ ಹಣಕಾಸು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ಸರ್ಕಾರ ಶೀಘ್ರವೇ ನೇಮಕ ಮಾಡಲಿದೆ ಎಂದರು.

15ನೇ ಹಣಕಾಸು ಆಯೋಗವನ್ನು 2017ರ ನವೆಂಬರ್ 27ರಂದು ರಚಿಸಲಾಗಿತ್ತು. 2020ರಲ್ಲಿ ಆಯೋಗ ವರದಿ ನೀಡಿತ್ತು. ಆಯೋಗದ ಶಿಫಾರಸುಗಳು 2025-26ರ ಹಣಕಾಸು ವರ್ಷದವರೆಗೆ ಜಾರಿಯಲ್ಲಿರಲಿವೆ.

‘ಆಯೋಗವು ವಿಪತ್ತು ನಿರ್ವಹಣಾ ಉಪಕ್ರಮಗಳಿಗೆ ಹಣಕಾಸು ಒದಗಿಸುವ ಪ್ರಸ್ತುತ ವ್ಯವಸ್ಥೆಗಳನ್ನು ಪರಿಶೀಲಿಸಬಹುದು. ವಿಪತ್ತು ನಿರ್ವಹಣಾ ಕಾಯ್ದೆ 2005ರ ಅಡಿಯಲ್ಲಿ ರಚಿಸಲಾದ ನಿಧಿಗಳನ್ನು ಉಲ್ಲೇಖಿಸಿ ಮತ್ತು ಅದರ ಬಗ್ಗೆ ಸೂಕ್ತ ಶಿಫಾರಸುಗಳನ್ನು ಮಾಡಬಹುದು’ ಎಂದು ಹಣಕಾಸು ಸಚಿವಾಲಯದ ಹೇಳಿಕೆ ತಿಳಿಸಿದೆ.

ಕೇಂದ್ರ ಪ್ರಾಯೋಜಿತ ಯೋಜನೆಯಾಗಿ ಮುಂದುವರಿಕೆ: ತ್ವರಿತ ವಿಶೇಷ ನ್ಯಾಯಾಲಯಗಳನ್ನು 2026ರ ಮಾರ್ಚ್ 31ರ ವರೆಗೆ ಕೇಂದ್ರ ಪ್ರಾಯೋಜಿತ ಯೋಜನೆಯಾಗಿ ಮುಂದುವರಿಸಲು ಸಂಪುಟ ಅನುಮೋದಿಸಿದೆ. ಇದರೊಂದಿಗೆ ₹1,952 ಕೋಟಿಯನ್ನು ಕೇಂದ್ರ ಸರ್ಕಾರದ ಪಾಲಿನ ಹಣದ ಜೊತೆಗೆ ನಿರ್ಭಯಾ ನಿಧಿಯನ್ನು ಒದಗಿಸಲಾಗಿದೆ.





ಶ್ರೀಲಂಕಾದಲ್ಲಿ ಭಾರತದಿಂದ ಮನೆಗಳ ನಿರ್ಮಾಣ

ಕೊಲಂಬೊ (ಪಿಟಿಐ): ಶ್ರೀಲಂಕಾದ ಚಹಾ ಬೆಳೆಯುವ ಪ್ರದೇಶಗಳಲ್ಲಿ ಭಾರತ 10,000ಕ್ಕೂ ಹೆಚ್ಚು ಮನೆಗಳನ್ನು ನಿರ್ಮಾಣ ಮಾಡಲಿದೆ.

ಭಾರತದ ವಸತಿ ಯೋಜನೆಯ ನಾಲ್ಕನೇ ಹಂತದಲ್ಲಿ ಮನೆಗಳನ್ನು ನಿರ್ಮಿಸುವ ಸಲುವಾಗಿ ಭಾರತದ ಹೈಕಮಿಷನ್ ಮಂಗಳವಾರ ಮಹತ್ವದ ಎರಡು ಒಪ್ಪಂದಗಳಿಗೆ ಸಹಿ ಹಾಕಿದೆ ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ.

ಖರ್ಗೆ ಅವರ ಚುನಾವಣಾ ರಾಜಕಾರಣದ ಜೀವನಗಾಥೆ ಕುರಿತ ಪುಸ್ತಕ ಬಿಡುಗಡೆ

ನಾಯಕರಿಂದ ‘ಇಂಡಿಯಾ’ ಒಗ್ಗಟ್ಟಿನ ಮಂತ್ರ

ಪ್ರಜಾವಾಣಿ ವಾರ್ತೆ



ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ‘ಚುನಾವಣಾ ರಾಜಕಾರಣದ ಜೀವನಗಾಥೆ’ ಪುಸ್ತಕವನ್ನು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ದೆಹಲಿಯಲ್ಲಿ ಬುಧವಾರ ಬಿಡುಗಡೆ ಮಾಡಿದರು. ಟಿ.ಆರ್. ಬಾಲು, ಸೀತಾರಾಮ್ ಯೆಚೂರಿ ಮತ್ತು ಕೃತಿಯ ಸಂಪಾದಕ ಸುಖದೇವ್ ಥೋರಟ್ ಅವರು ಇದ್ದರು –ಪಿಟಿಐ ಚಿತ್ರ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ 50 ವರ್ಷಗಳ ‘ಚುನಾವಣಾ ರಾಜಕಾರಣದ ಜೀವನಗಾಥೆ’ ಕೃತಿಯನ್ನು ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಬುಧವಾರ ಇಲ್ಲಿ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಸೋನಿಯಾ, ‘ಖರ್ಗೆ ಅವರು ಯಾವಾಗಲೂ ತಮ್ಮ ವೈಯಕ್ತಿಕ ಹಿತಾಸಕ್ತಿಗಿಂತ ಪಕ್ಷಕ್ಕಾಗಿ ಹಾಗೂ ಪಕ್ಷದ ಸಂಘಟನೆ ಬಲಪಡಿಸಲು ಮೊದಲ ಆದ್ಯತೆ ನೀಡಿದ್ದಾರೆ. ದೇಶ ಇಂದು ಬಿಕ್ಕಟ್ಟಿನಲ್ಲಿದೆ. ಸ್ವಾತಂತ್ರ್ಯ ನಂತರ ಸ್ಥಾಪನೆಯಾದ ಎಲ್ಲ ಸಂಸ್ಥೆಗಳನ್ನು ಮುಚ್ಚಲು ಈಗಿನ ಸರ್ಕಾರ ಮುಂದಾಗಿದೆ. ಭಾರತದ ಆತ್ಮಕ್ಕಾಗಿ ನಡೆಯುವ ಐತಿಹಾಸಿಕ ಯುದ್ಧದಲ್ಲಿ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸಲು ಖರ್ಗೆ ಅವರೇ ಅತ್ಯುತ್ತಮ ನಾಯಕರು’ ಎಂದು ಹೇಳಿದರು.

ಡಿಎಂಕೆಯ ಟಿ.ಆರ್. ಬಾಲು, ಸಿಪಿಐ (ಎಂ) ನಾಯಕ ಸೀತಾರಾಮ ಯೆಚೂರಿ ಮತ್ತು ಆರ್‌ಜೆಡಿ ಸಂಸದ ಮನೋಜ್ ಕುಮಾರ್ ಝಾ ಅವರು ಖರ್ಗೆ ಅವರ ನಾಯಕತ್ವ ಗುಣವನ್ನು ಶ್ಲಾಘಿಸಿದರು. ವಿರೋಧ ಪಕ್ಷಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಮುನ್ನಡೆಯಬೇಕು ಎಂದೂ ಕಿವಿಮಾತು ಹೇಳಿದರು.

‘ಎಲ್ಲ ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಪ್ರಯತ್ನಗಳು ನಡೆಯುತ್ತಿದ್ದು, ತಮ್ಮ ಭಿನ್ನಾಭಿಪ್ರಾಯಗಳನ್ನು ದೂರವಿಟ್ಟು ಅವರನ್ನು ಒಟ್ಟಾಗಿ ಮುನ್ನಡೆಸುವ ದೊಡ್ಡ ಜವಾಬ್ದಾರಿ ಖರ್ಗೆ ಅವರ ಮೇಲಿದೆ’ ಎಂದು ಯೆಚೂರಿ ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ‘ಮತದಾರರು ಮತ್ತು ಪಕ್ಷದ ಮುಖಂಡರು ನನ್ನ ಮೇಲೆ ತೋರಿದ ನಂಬಿಕೆಯಿಂದ ನನ್ನ ಕ್ಷೇತ್ರದ, ನನ್ನ ರಾಜ್ಯ ಮತ್ತು ನನ್ನ ದೇಶದ ಜನರಿಗೆ ಸೇವೆ ಸಲ್ಲಿಸಲು ಸಾಧ್ಯವಾಯಿತು. ಪ್ರಜಾಪ್ರಭುತ್ವ ಹಾಗೂ ಸಂವಿಧಾನದಿಂದಾಗಿ ನಾನು ಈ ಹಂತಕ್ಕೆ ತಲುಪಿದ್ದೇನೆ. ಆದರೆ, ಈಗ ಸಂವಿಧಾನವೇ ಅಪಾಯದಲ್ಲಿದೆ. ಈಗಿನ ಸರ್ಕಾರಕ್ಕೆ ಸಂವಿಧಾನದ ಮೇಲೆ ನಂಬಿಕೆ ಇಲ್ಲ’ ಎಂದು ಹೇಳಿದರು.

ಸುಖದೇವ್ ಥೋರಟ್ ಹಾಗೂ ಚೇತನ್ ಶಿಂಧೆ ಸಂಪಾದಕತ್ವದ 'ಮಲ್ಲಿಕಾರ್ಜುನ ಖರ್ಗೆ: ಕರುಣೆ, ನ್ಯಾಯ ಮತ್ತು ಅಂತರ್ಗತ ಅಭಿವೃದ್ಧಿಯೊಂದಿಗೆ ರಾಜಕೀಯ ತೊಡಗುವಿಕೆ' ಕೃತಿಗೆ 75 ಮಂದಿ ಲೇಖನಗಳನ್ನು ಬರೆದಿದ್ದಾರೆ. ಸೋನಿಯಾ ಗಾಂಧಿ, ರಾಮನಾಥ್ ಕೋವಿಂದ್, ಮನಮೋಹನ್ ಸಿಂಗ್, ಎಂ.ವೆಂಕಯ್ಯ ನಾಯ್ಡು, ರಾಹುಲ್ ಗಾಂಧಿ, ಶರದ್ ಪವಾರ್, ನಿತಿನ್ ಗಡ್ಕರಿ, ಜ್ಯೋತಿರಾದಿತ್ಯ ಸಿಂಧಿಯಾ, ಎಸ್.ಎಂ.ಕೃಷ್ಣ ಮತ್ತಿತರ ನಾಯಕರ ಲೇಖನಗಳು ಕೃತಿಯಲ್ಲಿವೆ.

ಗುತ್ತಿಗೆದಾರರಿಗೆ ಹಣ ಬಾಕಿ: ಹೈಕೋರ್ಟ್ ತರಾಟೆ

ಒಂದನೇ ಪುಟದಿಂದ

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರ ಉತ್ತರಕ್ಕೆ ಇನ್ನಿಲ್ಲದ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘ನಿಮ್ಮ ದಾಖಲೆಗಳನ್ನೇ ಒಮ್ಮೆ ತೆಗೆದು ನೋಡಿ. ಇಬ್ಬರು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಾಕಿ ಹಣ ಪಾವತಿಗೆ ಬಿಬಿಎಂಪಿ ಅನುಸರಿಸುತ್ತಿರುವ ವಿಧಾನವೇ ನಮಗೆ ತಿಳಿಯುತ್ತಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಟೆಂಡರ್ ಕರೆದು, ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಳಿಕ ಮೊತ್ತ ಪಾವತಿಗೆ ಷರತ್ತುಗಳನ್ನು ಒಡ್ಡುವುದು, ಅನಗತ್ಯ ವಿಳಂಬ ಮಾಡುವುದು ಎಷ್ಟರ ಮಟ್ಟಿಗೆ ಸರಿ‘ ಎಂದು ಖಾರವಾಗಿ ನುಡಿಯಿತು.

‘2023ರ ಅಕ್ಟೋಬರ್ 30ರಂದು ನೀಡಿರುವ ಮಧ್ಯಂತರ ಆದೇಶದಲ್ಲೇ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಆದರೂ ಬಾಕಿ ಪಾವತಿಗೆ ಮೀನಮೇಷ ಎಣಿಸುತ್ತಿದ್ದೀರಿ. ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರರಿಗೆ ಹಣ ಪಾವತಿಸದೆ ಕಚೇರಿಗೆ ಅಲೆದಾಡಿಸುವುದು ಸರಿಯೇ‘ ಎಂದು ಪ್ರಶ್ನಿಸಿತು.

ಅರ್ಜಿಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ.ಅಜಯ್ ನಾಗಭೂಷಣ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬಿಬಿಎಂಪಿ ಮುಖ್ಯ ಲೆಕ್ಕಾಧಿಕಾರಿ ವಾಣಿ, ಬಿಬಿಎಂಪಿ ಮಲ್ಲೇಶ್ವರ ವಿಭಾಗದ ಕಾರ್ಯಕಾರಿ ಎಂಜಿನಿಯರ್ ಜೈಶಂಕರ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

‘ಮನೆಯಿಂದ ‘ಸ್ವಚ್ಛತೆ’ ಆರಂಭಿಸಿ’

‘ಒಂದು ವೇಳೆ ಸ್ವಚ್ಛತಾ ಕಾರ್ಯಾಚರಣೆ ಆರಂಭಿಸುವುದಿದ್ದರೆ ಅದನ್ನು ಮೊದಲು ನಿಮ್ಮ ಮನೆಯಿಂದ ಆರಂಭಿಸಿ’ ಎಂದು ನ್ಯಾಯಪೀಠ ಹೇಳಿತು.

ವಿಚಾರಣೆ ವೇಳೆ, ಬಿಬಿಎಂಪಿ ಪರ ವಕೀಲರು ನಕಲಿ ಬಿಲ್‌ಗಳ ವಿಚಾರ ಪ್ರಸ್ತಾಪಿಸಿದರು. ಇದಕ್ಕೆ ಕಿಡಿಕಾರಿದ ನ್ಯಾಯಪೀಠ, ‘ಅದಕ್ಕೂ ಈ ಅರ್ಜಿದಾರರಿಗೂ ಸಂಬಂಧವಿಲ್ಲ. ಇಂತಹ ವಿಷಯಗಳಲ್ಲಿ ನೀವು ನಿಮ್ಮ ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಾ? ರಾಜ್ಯ ಸರ್ಕಾರ ವಿವೇಚನೆಯಿಂದ ಕಾರ್ಯ ನಿರ್ವಹಿಸಬೇಕು‘ ಎಂದು ತಾಕೀತು ಮಾಡಿತು.

ದಂಪತಿ ಜಗಳ ಮಾರ್ಗ ಬದಲಿಸಿದ ವಿಮಾನ

ನವದೆಹಲಿ (ಪಿಟಿಐ): ದಂಪತಿ ಮಧ್ಯೆ ವಾಗ್ವಾದ ನಡೆದ ಕಾರಣ ಮ್ಯೂನಿಚ್–ಬ್ಯಾಂಕಾಕ್ ತಲುಪಬೇಕಿದ್ದ ಲುಫ್ತಾನ್ಸಾ ವಿಮಾನವು ಮಾರ್ಗ ಬದಲಿಸಿ ಬುಧವಾರ ನವದೆಹಲಿಯಲ್ಲಿ ಇಳಿಯಿತು ಎಂದು ಅಧಿಕೃತ ಮೂಲಗಳು ತಿಳಿಸಿವೆ.

‘ವಿಮಾನವು ಟೇಕ್‌ಆಫ್ ಆದ ನಂತರ ಜರ್ಮನಿ ಮೂಲದ ವ್ಯಕ್ತಿ ಮತ್ತು ಥಾಯ್ಲೆಂಡ್ ಮೂಲದ ಅವರ ಪತ್ನಿ ನಡುವೆ ವಾಗ್ವಾದ ನಡೆದಿದ್ದು ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಹೀಗಾಗಿ ಪೈಲಟ್‌ಗಳು ಏರ್‌ಟ್ರಾಫಿಕ್ ಕಂಟ್ರೋಲ್ (ಎಟಿಸಿ) ಸಂಪರ್ಕಿಸಿ ಪರಿಸ್ಥಿತಿ ವಿವರಿಸಿ ದೆಹಲಿಯಲ್ಲಿ ವಿಮಾನ ಇಳಿಸಲು ಅನುಮತಿ ಪಡೆದರು. ನಂತರ ವಿಮಾನವು ಬೆಳಿಗ್ಗೆ 10.26ಕ್ಕೆ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿತು’ ಎಂದು ತಿಳಿಸಿವೆ.

‘ಪ್ರಯಾಣಿಕರೊಬ್ಬರು ಅಶಿಸ್ತಿನ ವರ್ತನೆ ತೋರಿದ್ದರಿಂದ ವಿಮಾನವು ದೆಹಲಿಯತ್ತ ಮಾರ್ಗ ಬದಲಾಯಿಸಿತು’ ಎಂದು ಲುಫ್ತಾನ್ಸಾ ವಿಮಾನಯಾನ ಸಂಸ್ಥೆ ತಿಳಿಸಿದೆ.

ಮೊದಲಿಗೆ, ಪತಿಯು ತಮಗೆ ಬೆದರಿಕೆವೊಡ್ಡುತ್ತಿದ್ದಾರೆ ಎಂದು ಆರೋಪಿಸಿ ಪತ್ನಿಯು ಪೈಲಟ್ ಬಳಿ ದೂರಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘53 ವರ್ಷದ ಜರ್ಮನಿ ಮೂಲದ ಪ್ರಯಾಣಿಕ ಆಹಾರವನ್ನು ಎಸೆದು, ಲೈಟರ್ ಬಳಸಿ ಹೊದಿಕೆಯನ್ನು ಸುಟ್ಟುಹಾಕುವುದಾಗಿ ಬೆದರಿಸಿದರು, ಪತ್ನಿಯ ಮೇಲೆ ಕಿರುಚಾಡಿದರು. ವಿಮಾನ ಸಿಬ್ಬಂದಿಯ ಸೂಚನೆಯನ್ನೂ ಪಾಲಿಸಲಿಲ್ಲ. ಹೀಗಾಗಿ ಪೈಲಟ್ ವಿಮಾನದ ಮಾರ್ಗ ಬದಲಾಯಿಸಿದರು. ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ದೆಹಲಿಯಲ್ಲಿ ವ್ಯಕ್ತಿಯನ್ನು ವಿಮಾನದಿಂದ ಕೆಳಗಿಳಿಸಿದರು. ಅವರ ಪತ್ನಿ ಬ್ಯಾಂಕಾಕ್‌ಗೆ ಪ್ರಯಾಣ ಮುಂದುವರಿಸಿದರು’ ಎಂದು ಮೂಲಗಳು ತಿಳಿಸಿವೆ.

ಆರೋಪಿಯನ್ನು ದೆಹಲಿ ಪೊಲೀಸರಿಗೆ ಒಪ್ಪಿಸಬೇಕೇ, ಅವರ ಕ್ಷಮೆಯನ್ನು ಪರಿಗಣಿಸಬೇಕೇ ಎಂಬ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ ಎಂದೂ ತಿಳಿಸಿವೆ.

ಒತ್ತೆಯಾಳು ಬಿಡುಗಡೆಗಾಗಿ ಗಂಭೀರ ಪ್ರಸ್ತಾವ ಒಪ್ಪಲೂ ಸಿದ್ಧ: ಇಸ್ರೇಲ್

ಮತ್ತೆ ಕದನ ವಿರಾಮ ವಿಸ್ತರಣೆಗೆ ಮಾತುಕತೆ

ಗಾಜಾ/ ಜೆರುಸಲೇಂ (ರಾಯಿಟರ್ಸ್/ಎಪಿ): ಇಸ್ರೇಲ್ ಹಾಗೂ ಹಮಾಸ್ ಬಂಡುಕೋರರ ಸಹಮತದ ಮೇರೆಗೆ ವಿಸ್ತರಣೆಯಾಗಿದ್ದ ಎರಡು ದಿನಗಳ ಕದನ ವಿರಾಮವು ಬುಧವಾರ ಅಂತ್ಯಗೊಂಡಿದೆ.

ಇದರ ಬೆನ್ನಲ್ಲೇ ಮಾನವೀಯ ದೃಷ್ಟಿಯಿಂದ ಮತ್ತೆ ಕದನ ವಿರಾಮದ ಸಂಭಾವ್ಯ ವಿಸ್ತರಣೆಗೆ ಸಂಬಂಧಿಸಿದಂತೆ ಮಧ್ಯಸ್ಥಿಕೆಯ ಹೊಣೆ ಹೊತ್ತಿರುವ ಈಜಿಪ್ಟ್ ಹಾಗೂ ಕತಾರ್ ರಾಜತಾಂತ್ರಿಕ ಸಮಾಲೋಚನೆಯಲ್ಲಿ ತೊಡಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೀರ್ಘಕಾಲದವರೆಗೆ ವಿಸ್ತರಿಸುವ ಸಂಬಂಧ ಇಸ್ರೇಲ್ ಹಾಗೂ ಹಮಾಸ್ ಇಂಗಿತ ವ್ಯಕ್ತಪಡಿಸಿವೆ. ಆದರೆ, ಇನ್ನೂ ಯಾವುದೇ ಅಧಿಕೃತ ಒಪ್ಪಂದವಾಗಿಲ್ಲ ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದೆಡೆ, ಜಾಗತಿಕ ಮಟ್ಟದಲ್ಲಿಯೂ ಕದನ ವಿರಾಮ ವಿಸ್ತರಣೆಗೆ ಒತ್ತಡ ಹೆಚ್ಚುತ್ತಿದೆ. ‘ಮಾನವೀಯ ಆಧಾರದ ಮೇಲೆ ವಿಸ್ತರಿಸಬೇಕಿದೆ. ಜೋ ಬೈಡನ್ ಸರ್ಕಾರ ಕೂಡ ಇದನ್ನೇ ಎದುರು ನೋಡುತ್ತಿದೆ’ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಹೇಳಿದ್ದಾರೆ.

ಪ್ರಸ್ತಾವ ಒಪ್ಪಲು ಸಿದ್ಧ: ‘ಬಂಡುಕೋರರ ಸುಪರ್ದಿಯಲ್ಲಿರುವ ಉಳಿದ ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಗಾಗಿ ನಾವು ಯಾವುದೇ ಕ್ರಮಕ್ಕೂ ಸಿದ್ಧರಿದ್ದೇವೆ. ಗಂಭೀರ ಪ್ರಸ್ತಾವವನ್ನೂ ಒಪ್ಪಿಕೊಳ್ಳುತ್ತೇವೆ’ ಎಂದು ಇಸ್ರೇಲ್ ಸರ್ಕಾರದ ವಕ್ತಾರ ಎಲಾನ್ ಲೆವಿ ಹೇಳಿದ್ದಾರೆ.

ಇಸ್ರೇಲ್ ವಿರುದ್ಧ ಮತ ಚಲಾಯಿಸಿದ ಭಾರತ

ವಿಶ್ವಸಂಸ್ಥೆ (ಪಿಟಿಐ): ಸಿರಿಯಾದ ಗೋಲನ್ ಪ್ರದೇಶದ ಅತಿಕ್ರಮಣ ತೆರವಿಗೆ ಮುಂದಾಗದ ಇಸ್ರೇಲ್‌ನ ನಡೆ ಖಂಡಿಸಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಂಗಳವಾರ ಮಂಡಿಸಿದ ಕರಡು ನಿರ್ಣಯದ ಪರ ಭಾರತ ಮತ ಚಲಾಯಿಸಿದೆ.

ಸಿರಿಯಾದ ನೈರುತ್ಯ ಭಾಗದಲ್ಲಿ ಗೋಲನ್ ಪ್ರದೇಶವಿದೆ. 1967ರ ಜೂನ್ 5ರಂದು ಇಸ್ರೇಲ್ ಪಡೆಗಳು ಈ ಪ್ರದೇಶವನ್ನು ವಶಪಡಿಸಿಕೊಂಡಿದ್ದು, ವಸಾಹತು ಚಟುವಟಿಕೆ ನಡೆಸುತ್ತಿವೆ ಎಂದು ಹೇಳಲಾಗಿದೆ. ಮಧ್ಯಪ್ರಾಚ್ಯ ಸ್ಥಿತಿಗತಿ ಕಾರ್ಯಸೂಚಿಯಡಿ ‘ಸಿರಿಯಾದ ಗೋಲನ್’ ಹೆಸರಿನಲ್ಲಿ ಈಜಿಪ್ಟ್ ಈ ಕರಡು ನಿರ್ಣಯ ಮಂಡಿಸಿತ್ತು. 91 ರಾಷ್ಟ್ರಗಳು ನಿರ್ಣಯದ ಪರ ಮತ ಚಲಾಯಿಸಿದರೆ ಎಂಟು ದೇಶಗಳು ವಿರುದ್ಧವಾಗಿ ಮತ ಚಲಾಯಿಸಿವೆ. 62 ದೇಶಗಳು ನಿರ್ಣಯದಿಂದ ದೂರ ಉಳಿದಿವೆ.

ಭಾರತೀಯ ಐ.ಟಿ ವೃತ್ತಿಪರರಿಗೆ ಅನುಕೂಲ: ಅಮೆರಿಕ ಹೇಳಿಕೆ

ಶೀಘ್ರದಲ್ಲಿ ಎಚ್–1ಬಿ ವೀಸಾ ನವೀಕರಣ

ವಾಷಿಂಗ್ಟನ್ (ಪಿಟಿಐ): ಎಚ್–1ಬಿ ವೀಸಾ ನವೀಕರಣಕ್ಕೆ ಸಂಬಂಧಿಸಿ ಅಮೆರಿಕವು ಡಿಸೆಂಬರ್‌ನಲ್ಲಿ ಹಮ್ಮಿಕೊಂಡಿರುವ ಪ್ರಾಯೋಗಿಕ ಕಾರ್ಯಕ್ರಮದಿಂದ ಭಾರತದ ಐ.ಟಿ ವೃತ್ತಿಪರರಿಗೆ ಹೆಚ್ಚಿನ ಪ್ರಯೋಜನ ಲಭಿಸುವ ನಿರೀಕ್ಷೆಯಿದೆ.

‘ಭಾರತೀಯ ಉದ್ಯೋಗಿಗಳನ್ನೇ ಕೇಂದ್ರೀಕರಿಸಿ ತ್ವರಿತಗತಿಯಲ್ಲಿ ಅವರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈ ಪ್ರಾಯೋಗಿಕ ಕಾರ್ಯಕ್ರಮ ರೂಪಿಸಲಾಗಿದೆ’ ಎಂದು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಅಮೆರಿಕದ ವೀಸಾ ಸೇವೆಗಳ ಉಪ ಕಾರ್ಯದರ್ಶಿ ಜೂಲಿ ಸ್ಟಫ್ಟ್ ಹೇಳಿದ್ದಾರೆ.

ಎಚ್–1ಬಿ ವಲಸೆಯೇತರ ವೀಸಾ ಆಗಿದ್ದು, ಅಮೆರಿಕದ ಸಂಸ್ಥೆಗಳು ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ. ತಾಂತ್ರಿಕ ನೈಪುಣ್ಯಕ್ಕೆ ಅನುಗುಣವಾಗಿ ಉದ್ಯೋಗಿಗಳ ನೇಮಕಾತಿ ನಡೆಯಲಿದೆ.

ಅಮೆರಿಕದ ಕಂಪನಿಗಳು ಪ್ರತಿವರ್ಷ ಭಾರತ, ಚೀನಾದಿಂದ ಸಾವಿರಾರು ಉದ್ಯೋಗಿಗಳನ್ನು ಈ ವೀಸಾ ಅಡಿಯಲ್ಲಿ ನೇಮಕ ಮಾಡಿಕೊಳ್ಳುತ್ತವೆ.

1.40 ಲಕ್ಷ ವಿದ್ಯಾರ್ಥಿಗಳಿಗೆ ವೀಸಾ

ಜನರ ಸಹಭಾಗಿತ್ವಕ್ಕೆ ಉತ್ತೇಜನ ನೀಡುವ ಭಾಗವಾಗಿ ಅಧ್ಯಕ್ಷ ಜೋ ಬೈಡನ್ ನೇತೃತ್ವದ ಅಮೆರಿಕ ಸರ್ಕಾರವು ಕಳೆದ ಸಾಲಿನಡಿ 1.40 ಲಕ್ಷ ಭಾರತೀಯ ವಿದ್ಯಾರ್ಥಿಗಳಿಗೆ ವೀಸಾ ನೀಡಿದೆ. ಅಲ್ಲದೇ, ವೀಸಾ ಕಾಯುವಿಕೆ ಅವಧಿ ಕಡಿಮೆ ಮಾಡಲು ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಜೂಲಿ ಸ್ಟಫ್ಟ್ ತಿಳಿಸಿದ್ದಾರೆ.

‘ಭಾರತೀಯ ವಿದ್ಯಾರ್ಥಿಗಳು ಅಮೆರಿಕದಲ್ಲಿ ವ್ಯಾಸಂಗಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿದ್ದಾರೆ. ತರಗತಿಗಳು ಆರಂಭವಾಗುವುದಕ್ಕೂ ಮೊದಲು ಅರ್ಹರ ಸಂದರ್ಶನ ನಡೆಸಿ ವೀಸಾ ನೀಡಲಾಗುತ್ತಿದೆ. ಭಾರತದಲ್ಲಿ ವಾರದ ಏಳು ದಿನವೂ ವೀಸಾ ಕಚೇರಿ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

‘ಬೇಕಿದೆ ಮುಕ್ತ ಮಾರುಕಟ್ಟೆ– ಸಹಾನುಭೂತಿಯುಳ್ಳ ಬಂಡವಾಳಶಾಹಿ ವ್ಯವಸ್ಥೆ’

ದೇಶದ ಅಭಿವೃದ್ಧಿಗೆ ಮೂರ್ತಿ ಸೂತ್ರ

ಪ್ರಜಾವಾಣಿ ವಾರ್ತೆ



ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ಸಂವಾದ ಕಾರ್ಯಕ್ರಮದಲ್ಲಿ ಇನ್ಫೊಸಿಸ್ ಸಂಸ್ಥಾಪಕ ಎನ್‌ಆರ್‌. ನಾರಾಯಣಮೂರ್ತಿ ಮಾತನಾಡಿದರು. ಜೆರೋದಾ ಕಂಪನಿ ಸಂಸ್ಥಾಪಕ ನಿತಿನ್ ಕಾಮತ್ ಕಾರ್ಯಕ್ರಮ ನಡೆಸಿಕೊಟ್ಟರು

ಬೆಂಗಳೂರು: ‘ಮುಕ್ತ ಮಾರುಕಟ್ಟೆ ಹಾಗೂ ಸಹಾನುಭೂತಿಯುಳ್ಳ ಬಂಡವಾಳಶಾಹಿ ವ್ಯವಸ್ಥೆಯೊಂದೇ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳ ಅಭಿವೃದ್ಧಿಗೆ ಇರುವ ಪರಿಹಾರ’ ಎಂದು ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅಭಿಪ್ರಾಯಪಟ್ಟರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ಮೊದಲ ದಿನವಾದ ಬುಧವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜಗತ್ತಿನಲ್ಲಿ ಸಮಾಜವಾದ, ಎಡಪಂಥೀಯ ಸಿದ್ಧಾಂತಗಳನ್ನು ನಂಬಿದ ರಾಷ್ಟ್ರಗಳು ಅಷ್ಟಾಗಿ ಉತ್ತಮ ಸ್ಥಿತಿಯಲ್ಲಿಲ್ಲ. ಇಂಥ ಸಿದ್ಧಾಂತ ನಂಬಿದ್ದ ಸೋವಿಯತ್ ಒಕ್ಕೂಟವೇ ಇಲ್ಲವಾಗಿದೆ. ಇಂಥ ಸಂದರ್ಭದಲ್ಲಿ ಸಹಾನುಭೂತಿಯುಳ್ಳ ಬಂಡವಾಳಶಾಹಿ ವ್ಯವಸ್ಥೆ ನಮ್ಮ ರಾಷ್ಟ್ರಕ್ಕೆ ಅಗತ್ಯವಿದೆ. ಇದೇ ಸಂದರ್ಭದಲ್ಲಿ ಬಂಡವಾಳ ಹೂಡುವವರು ತಮ್ಮ ಕಂಪನಿಯಲ್ಲಿ ದುಡಿಯುವ ಕಟ್ಟಕಡೆಯ ವ್ಯಕ್ತಿಯ ಹಿತವನ್ನು ಗಮನದಲ್ಲಿಟ್ಟುಕೊಂಡೇ ಯಾವುದೇ ಕ್ರಮವನ್ನು ಕೈಗೊಳ್ಳಬೇಕು. ಹೀಗಾದಲ್ಲಿ ಮಾತ್ರ ಎಲ್ಲರ ಉದ್ಧಾರ ಸಾಧ್ಯ’ ಎಂದರು.

‘ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಕಟ್ಟಾ ಅಭಿಮಾನಿಯಾದ ನಮ್ಮ ತಂದೆಯ ಪ್ರಭಾವದಿಂದ ನಾವೂ ಸಮಾಜವಾದ ಹಾಗೂ ಸ್ವಲ್ಪ ಮಟ್ಟಿನ ಎಡಪಂಥೀಯವಾದವನ್ನು ಅನುಸರಿಸುತ್ತಿದ್ದೆವು. ಆ ಕಾಲಕ್ಕೆ ದೇಶದ ಪರಿಸ್ಥಿತಿಗೆ ಅದು ಅಗತ್ಯವಿತ್ತು. ಆದರೆ ನಾನು ಫ್ರಾನ್ಸ್‌ನಂತ ಅಭಿವೃದ್ಧಿ ಹೊಂದಿದ ರಾಷ್ಟ್ರದಲ್ಲಿ ಒಂದಷ್ಟು ಕಾಲ ಇದ್ದ ನಂತರ, ನನ್ನ ಆಲೋಚನೆಯೇ ತಪ್ಪು ಎಂದೆನಿಸಿತು. ನಮ್ಮ ದೇಶದ ಅಭಿವೃದ್ಧಿಗೆ ಬಂಡವಾಳಶಾಹಿ ವ್ಯವಸ್ಥೆ ಅಗತ್ಯ, ಆದರೆ ಅದು ಸಹಾನುಭೂತಿಯುಳ್ಳದ್ದಾಗಿರಬೇಕು ಎಂಬುದು ಸ್ಪಷ್ಟವಾಯಿತು’ ಎಂದರು.

‘ತೆರಿಗೆ ವ್ಯವಸ್ಥೆ ಕುರಿತು ಮಾತನಾಡಿದ ನಾರಾಯಣಮೂರ್ತಿ, ‘ಭಾರತ ಬಡ ರಾಷ್ಟ್ರ. ಇಲ್ಲಿರುವ ಬಹುತೇಕರ ತಿಂಗಳ ಆದಾಯ ₹6 ಸಾವಿರದಿಂದ ₹15 ಸಾವಿರವರೆಗೆ ಇದೆ. ಇವರನ್ನು ಸಲಹುವುದರ ಜತೆಗೆ ದೇಶದ ಮೂಲಸೌಕರ್ಯ ಹೆಚ್ಚಿಸುವ ಜವಾಬ್ದಾರಿಯೂ ಸರ್ಕಾರಕ್ಕಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಿಗಿಂತ ನಾವು ಹೆಚ್ಚಿನ ತೆರಿಗೆ ನೀಡುತ್ತಿರಬಹುದು. ಆದರೆ ಸದ್ಯದ ಪರಿಸ್ಥಿತಿಗೆ ಇದು ಅನಿವಾರ್ಯ. ಆ ಮೂಲಕ ಸದೃಢ, ಭ್ರಷ್ಟಾಚಾರ ರಹಿತ ಸರ್ಕಾರ ನಡೆಸಲು ಅನುಕೂಲವಾಗಲಿದೆ’ ಎಂದರು.

‘ದೇಶದ ಅರ್ಥವ್ಯವಸ್ಥೆಯನ್ನು ಉತ್ತಮ ಪಡಿಸಿಕೊಳ್ಳಬೇಕಾದರೆ ಪಕ್ಕದ ಚೀನಾ ಅಳವಡಿಸಿಕೊಂಡ ಉತ್ತಮ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸುವ ಅಗತ್ಯವಿದೆ. ನಮ್ಮ ದೇಶದಲ್ಲಿರುವ ರಾಜಕೀಯ ಪಕ್ಷಗಳು ದೇಶ ಮೊದಲು, ಪಕ್ಷ ನಂತರ ಎಂಬ ಮನಸ್ಥಿತಿ ಅಳವಡಿಸಿಕೊಂಡು ಎಲ್ಲಾ ಪಕ್ಷಗಳಲ್ಲಿರುವ ಪರಿಣಿತರು ಒಂದು ಸಮಿತಿ ರಚಿಸಬೇಕು. ಅದರ ಮೂಲಕ ವಿದೇಶಿ ಬಂಡವಾಳವನ್ನು ಹೇಗೆ ದೇಶಕ್ಕೆ ಹರಿಸಬಹುದು ಎಂಬುದರ ಕುರಿತು ನೀಲನಕ್ಷೆ ಸಿದ್ಧಪಡಿಸಬೇಕು’ ಎಂದು ನಾರಾಯಣಮೂರ್ತಿ ಸಲಹೆ ನೀಡಿದರು.

ಜೆರೋದಾ ಕಂಪನಿ ಸಂಸ್ಥಾಪಕ ನಿತಿನ್ ಕಾಮತ್ ಅವರು ಕಾರ್ಯಕ್ರಮ ನಡೆಸಿಕೊಟ್ಟರು.

‘ಉಚಿತ ಪಡೆದವರು ಮರುಕೊಡುಗೆ ನೀಡಲಿ’

‘ಬಡಜನರೇ ಹೆಚ್ಚು ಇರುವ ದೇಶದಲ್ಲಿ ಉಚಿತ ಕೊಡುಗೆಗಳನ್ನು ನೀಡುವುದು ತಪ್ಪಲ್ಲ. ಆದರೆ ಉಚಿತ ಕೊಡುಗೆ ಪಡೆಯುವವರಿಂದ ಕನಿಷ್ಠ ಜವಾಬ್ದಾರಿಯನ್ನಾದರೂ ಸರ್ಕಾರ ನಿರೀಕ್ಷಿಸಬೇಕು. ಅವರೂ ಮರುಕೊಡುಗೆ ನೀಡಬೇಕು. ಹೀಗಾದಾಗ ಮಾತ್ರ ನೀಡುವ ಕೊಡುಗೆಗೊಂದು ಬೆಲೆ ಹಾಗೂ ಪಡೆದವರಿಗೊಂದು ಜವಾಬ್ದಾರಿ ಇರಲಿದೆ. ಇದರಿಂದ ಮುಂದಿನ ಸಮಾಜ ದೇಶ ಕುರಿತು ಹೆಚ್ಚಿನ ಜವಾಬ್ದಾರಿ ಹೊಂದಲು ಸಾಧ್ಯ’ ಎಂದು ನಾರಾಯಣಮೂರ್ತಿ ಅಭಿಪ್ರಾಯ ವ್ಯಕ್ತಪಡಿಸಿದರು. ಸಭೆ ಕರತಾಡನದ ಮೂಲಕ ಸಮ್ಮತಿ ಸೂಚಿಸಿತು.

‘ತಂತ್ರಜ್ಞರ ಲಭ್ಯತೆಗೆ ಇಂಗ್ಲಿಷ್ ಮಾಧ್ಯಮ ಶಾಲೆ ಕಡ್ಡಾಯವಾಗಲಿ’

‘ಇಲ್ಲಿನ ಕಂಪನಿಗಳಿಗೆ ಸ್ಥಳೀಯ ತಂತ್ರಜ್ಞರ ಲಭ್ಯತೆ ಪ್ರಮಾಣ ಶೇ 60ರಷ್ಟು ಮಾತ್ರ ಇದೆ. ಶೇ 100ರಷ್ಟನ್ನು ನಾವು ಸೃಜಿಸಬೇಕೆಂದರೆ ಕಡ್ಡಾಯವಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭಿಸಬೇಕು’ ನಾರಾಯಣಮೂರ್ತಿ ಹೇಳಿದರು.

ಶಿಕ್ಷಣ ವ್ಯವಸ್ಥೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಜಾರಿಗೆ ತಂದ ನೂತನ ಶಿಕ್ಷಣ ನೀತಿಗೆ ಈ ದೇಶದ ದಿಕ್ಕನ್ನೇ ಬದಲಿಸುವ ಶಕ್ತಿ ಇದೆ. ಜಾಗತಿಕ ಮಟ್ಟದ ಒಟ್ಟು ತಂತ್ರಾಂಶ ರಫ್ತು ಉದ್ಯಮದಲ್ಲಿ ಶೇ 37ರಷ್ಟು ಬೆಂಗಳೂರು ನೀಡುತ್ತದೆ. ತಂತ್ರಜ್ಞರ ಲಭ್ಯತೆ ಕಡಿಮೆ ಇದೆ. ಅದು ಪೂರೈಕೆಯಾಗಬೇಕಾದರೆ ಇಂಗ್ಲಿಷ್ ಕಲಿಯಲೇಬೇಕು. ಕನ್ನಡಿಗನಾಗಿ ನನಗೂ ಕನ್ನಡದ ಕುರಿತು ಅಭಿಮಾನವಿದೆ. ಆದರೆ, ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವುದು ಅಗತ್ಯ’ ಎಂದರು.

ಸ್ಕ್ಯಾನ್ ಮಾಡಿ ₹30 ಪಾವತಿಸಿದರೆ ಒಂದು ಪ್ಲೇಟ್ ಸಿದ್ಧ

ಪಾನಿಪೂರಿಗೂ ಬಂತು ರೋಬಾಟಿಕ್ ಯಂತ್ರ

• ಚಂದ್ರಹಾಸ ಹಿರೇಮಳಲಿ



ಬೆಂಗಳೂರಿನಲ್ಲಿ ಬುಧವಾರ ಆರಂಭವಾದ ಬೆಂಗಳೂರು ತಂತ್ರಜ್ಞಾನ ಶೃಂಗದಲ್ಲಿ ಜನರ ಗಮನ ಸೆಳೆದ ರೋಬಾಟಿಕ್ ಪಾನಿಪೂರಿ ಯಂತ್ರ–ಪ್ರಜಾವಾಣಿ ಚಿತ್ರ

ಬೆಂಗಳೂರು: ನೀವು ಪಾನಿಪೂರಿ ಪ್ರಿಯರೇ.. ಹಾಗಾದರೆ ಇನ್ನು ಮೂರು ತಿಂಗಳು ಕಾಯಿರಿ. ನೀವಿರುವ ಸಮೀಪದ ಆಸುಪಾಸಿನಲ್ಲೇ ಕಾಣಬಹುದಾದ ಯಂತ್ರಕ್ಕೆ ₹30 ಪಾವತಿಸಿದರೆ ಸಾಕು (ಕ್ಯೂಆರ್ ಕೋಡ್ ಸ್ಕ್ಯಾನ್) ಸ್ವಾದಿಷ್ಟ ಪಾನಿಪೂರಿ ನಿಮ್ಮ ಕೈಸೇರುತ್ತದೆ.

ಹೆಬ್ಬಾಳದ ‘ಎಐ ಬೋಟ್ ಇಂಕ್ ಪ್ರೈವೇಟ್ ಲಿಮಿಟೆಡ್’ನ ಸುರೇಂದ್ರ–ಅಂಜಲಿ ದಂಪತಿ ಎರಡು ವರ್ಷಗಳ ಪರಿಶ್ರಮದಿಂದ ವಿಶ್ವದ ಮೊದಲ ರೋಬಾಟಿಕ್ ಪಾನಿಪೂರಿ ಯಂತ್ರ (ಗೋಲ್‌ಬೋಟ್) ಸಿದ್ಧವಾಗಿದೆ. ಬೆಂಗಳೂರಿನಲ್ಲಿ ಬುಧವಾರ ಆರಂಭವಾದ ತಂತ್ರಜ್ಞಾನ ಶೃಂಗಸಭೆಯಲ್ಲಿ ಈ ಯಂತ್ರವನ್ನು ಪ್ರದರ್ಶನಕ್ಕೆ ಇಡಲಾಗಿದ್ದು, ಉಚಿತವಾಗಿ ನೀಡುತ್ತಿರುವ ಪಾನಿಪೂರಿ ಸವಿಯಲು ಜನರು ಸಾಲುಗಟ್ಟಿ ನಿಂತಿದ್ದರು.

ಪಾನಿಪೂರಿ, ಗೋಲಗೊಪ್ಪ ಸೇರಿದಂತೆ ನಾಲ್ಕು ವಿವಿಧ ಪೂರಿಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಯಂತ್ರದಲ್ಲಿ ಅಳವಡಿಸಲಾಗಿದೆ. ಹಣ ಪಾವತಿಸಿದ ತಕ್ಷಣ ಆಯ್ಕೆ ಮಾಡಿದ ತಿನಿಸು ಪಡೆಯಬಹುದು. ತನ್ನೊಳಗೆ ಸಂಗ್ರಹಿಸಿದ ಸಾಮಗ್ರಿಗಳನ್ನು ಬಳಸಿಕೊಂಡು ಒಂದು ಪ್ಲೇಟ್ ಸಿದ್ಧಪಡಿಸಲು ಈಗ ಅಭಿವೃದ್ಧಿಪಡಿಸಿರುವ ಯಂತ್ರ ಮೂರು ನಿಮಿಷ ತೆಗೆದುಕೊಳ್ಳುತ್ತಿದೆ. ಇನ್ನಷ್ಟು ಸುಧಾರಿತ ತಂತ್ರಜ್ಞಾನ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಸಿದ್ಧಪಡಿಸುವ ಅವಧಿ 100 ಸೆಕೆಂಡ್‌ಗೆ ಇಳಿಯಲಿದೆ ಎನ್ನುತ್ತಾರೆ ಸುರೇಂದ್ರ.

ಕೋವಿಡ್ ಪರಿಸ್ಥಿತಿ ನೀಡಿದ ಅವಕಾಶ: ಬ್ರಿಟನ್‌ನ ಮಾಹಿತಿ ತಂತ್ರಜ್ಞಾನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸುರೇಂದ್ರ, ಕೋವಿಡ್ ಸಮಯದಲ್ಲಿ ಬೆಂಗಳೂರಿಗೆ ಹಿಂದಿರುಗಿದ್ದರು. ಒಂದು ದಿನ ಪತ್ನಿ ಜತೆ ಪಾನಿಪೂರಿ ಸವಿಯಲು ಹೋದಾಗ ಸ್ವಚ್ಛತೆಯ ಕೊರತೆ, ಕೋವಿಡ್ ಸಮಯದಲ್ಲಿ ತಿನ್ನಲು ಹಿಂದೇಟು ಹಾಕುತ್ತಿದ್ದ ಜನರನ್ನು ಗಮನಿಸಿದ ಪತ್ನಿ ಅಂಜಲಿ ಇಂತಹ ಒಂದು ಯಂತ್ರದ ಪರಿಕಲ್ಪನೆ ನೀಡಿದ್ದರು. ಅದನ್ನು ಸವಾಲಾಗಿ ಸ್ವೀಕರಿಸಿದ ಪತಿ ಎಂಜಿನಿಯರ್‌ಗಳಾದ ಅರವಿಂದ್, ಗೌತಮ್ ಅವರ ಸಹಕಾರದಲ್ಲಿ ಎರಡು ವರ್ಷಗಳ ಪ್ರಯೋಗದ ನಂತರ ರೋಬಾಟಿಕ್ ಯಂತ್ರ ಸಿದ್ಧಪಡಿಸಿದ್ದಾರೆ.

₹ 500 ಕೋಟಿ ಹೂಡಿಕೆ

ಸಿದ್ಧವಾಗಿರುವ ತಂತ್ರಜ್ಞಾನ ಬಳಸಿಕೊಂಡು ಪಾನಿಪೂರಿ ಯಂತ್ರಗಳನ್ನು ಸಿದ್ಧಪಡಿಸಲು ಕೆಲ ಕಂಪನಿಗಳು ₹500 ಕೋಟಿ ವಿನಿಯೋಗಿಸಲು ಮುಂದೆ ಬಂದಿವೆ. ಐದು ತಿಂಗಳ ಒಳಗೆ ಯಂತ್ರಗಳು ಸಿದ್ಧವಾಗಲಿವೆ. ಮೊದಲ ಹಂತದಲ್ಲಿ ಬೆಂಗಳೂರಿನ ಜನದಟ್ಟಣೆ ಪ್ರದೇಶಗಳು, ಕಚೇರಿಗಳು, ಕಾಲೇಜುಗಳ ಸಮೀಪ 500 ಯಂತ್ರಗಳು ಸ್ಥಾಪನೆಯಾಗಲಿವೆ. ನಂತರ ಇತರೆ ನಗರಗಳತ್ತ ಚಿತ್ತ ಹರಿಸಲಾಗುವುದು. ಪ್ರತಿ 10 ಯೂನಿಟ್‌ಗಳಿಗೆ ಒಬ್ಬರನ್ನು ಮೇಲುಸ್ತುವಾರಿಯಾಗಿ ನೇಮಿಸಲಾಗುವುದು ಎಂದು ಸುರೇಂದ್ರ ವಿವರಿಸಿದರು.

ಹೃದಯ ಬಡಿತ ಆಲಿಸುವ ಎಐ ಸ್ಟೆಥಸ್ಕೋಪ್

• ಸುಧೀಂದ್ರ ಪ್ರಸಾದ್ ಇ.ಎಸ್.



ಎಐ ಸ್ಟೆಥಸ್ಕೋಪ್‌ನಿಂದ ಪರೀಕ್ಷಿಸುತ್ತಿರುವುದು – ಪ್ರಜಾವಾಣಿ ಚಿತ್ರ

ಬೆಂಗಳೂರು: ಹೃದಯ ಬಡಿತ ಸರಿಯಾಗಿದೆಯೇ? ಶ್ವಾಸಕೋಶ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆಯೇ? ಇವೆಲ್ಲದ ಮಾಹಿತಿಯನ್ನೂ ನಿಖರವಾಗಿ ಡಿಜಿಟಲ್ ಸ್ವರೂಪದಲ್ಲಿ ನೀಡುವ ‘ಎಐಸ್ಟೆಥ್’ ಎಂಬ ಸ್ಟೆಥಸ್ಕೋಪ್ ಬೆಂಗಳೂರು ಟೆಕ್ ಶೃಂಗದಲ್ಲಿ ಪ್ರದರ್ಶನವಾಗುತ್ತಿದೆ.

ಬೆಂಗಳೂರು ವಿಜ್ಞಾನ ಸಂಸ್ಥೆಯ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಐ ಹೆಲ್ತ್ ಹೈವೇ ಇಂಡಿಯಾ ಕಂಪನಿ ಎಐಸ್ಟೆಥ್ ಅಭಿವೃದ್ಧಿಪಡಿಸಿದೆ.

ಸಾಮಾನ್ಯ ಸ್ಟೆಥಸ್ಕೋಪ್‌ನಂತೆಯೇ ಇರುವ ಈ ಸಾಧನದಿಂದ ಹೃದಯದ ಬಡಿತವನ್ನು ಆಲಿಸಬಹುದು ಹಾಗೂ ಇದೇ ಮಾಹಿತಿ ಸ್ಪೆಕ್ಟ್ರೋಗ್ರಾಮ್ ಹಾಗೂ ವೇವ್ ಮಾದರಿಯಲ್ಲಿ ಮೊಬೈಲ್‌ನಲ್ಲಿರುವ ಆ್ಯಪ್‌ನಲ್ಲೂ ಲಭ್ಯವಾಗುತ್ತದೆ. ಟೆಲಿಕನ್ಸಲ್ಟೇಷನ್ ಹಾಗೂ ದೂರದಲ್ಲಿರುವವರನ್ನು ತಪಾಸಣೆ ಮಾಡಿ ಹೃದಯ ಬಡಿತದ ಆಧಾರದಲ್ಲಿ ನಿಖರ ಮಾಹಿತಿ ಪಡೆಯಬಹುದಾಗಿದೆ.

ಮಕ್ಕಳಲ್ಲಿ ಹೃದಯ ಸಂಬಂಧಿ ಸಮಸ್ಯೆ ಇದ್ದಾಗ ಇಸಿಜಿ ಮಾಡಲಾಗದು. ಅಂಥ ಸಂದರ್ಭದಲ್ಲಿ ಅವರ ಹೃದಯ ಬಡಿತವನ್ನು ಆಲಿಸಿ, ನಿಖರ ಮಾಹಿತಿ ನೀಡಲು ಈ ಎಐಸ್ಟೆಥ್ ನೆರವಾಗಲಿದೆ. ವೈದ್ಯರು ದೂರದಲ್ಲಿದ್ದು, ರೋಗಿಗೆ ತಕ್ಷಣ ವೈದ್ಯಕೀಯ ನೆರವಿನ ಅಗತ್ಯವಿದ್ದಲ್ಲಿ, ಈ ಎಐಸ್ಟೆಥ್‌ನ ಸಾಧನದಿಂದ ವ್ಯಕ್ತಿಯ ಹೃದಯ ಬಡಿತದ ಮಾಹಿತಿಯನ್ನು ವೈದ್ಯರಿಗೆ ಮೊಬೈಲ್ ಮೂಲಕ ಕಳುಹಿಸಲು ಸಾಧ್ಯ ಎನ್ನುತ್ತಾರೆ ಕಂಪನಿಯ ಸಿಬ್ಬಂದಿ.

ಮೊಬೈಲ್‌ನಲ್ಲಿ ದಾಖಲಾಗುವ ಆರೋಗ್ಯ ಮಾಹಿತಿಯನ್ನು ಗೌಪ್ಯವಾಗಿಡಲು ಸಾಧ್ಯವಿದೆ. ಸ್ಟೆಥಸ್ಕೋಪ್‌ಗೆ ಆಧುನಿಕ ಬ್ಲೂಟೂತ್ ತಂತ್ರಜ್ಞಾನ ಅಳವಡಿಸಿರುವುದರಿಂದ, ಸಾಧನ ಹಾಗೂ ಮೊಬೈಲ್ ನಡುವಿನ ಸಂವಹನ ತ್ವರಿತಗತಿಯಲ್ಲಿರುತ್ತದೆ ಎಂದು ಅವರು ವಿವರಿಸಿದರು. ಈ ಸಾಧನದಿಂದ ಲಭ್ಯವಾಗುವ ಮಾಹಿತಿ ಅತ್ಯಂತ ನಿಖರವಾಗಿದ್ದು, ವೈದ್ಯರಿಗೆ ಚಿಕಿತ್ಸೆ ನೀಡಲು ಹೆಚ್ಚು ಸಹಕಾರಿಯಾಗಲಿದೆ ಎನ್ನುತ್ತಾರೆ ಎಐಸ್ಟೆಥ್‌ನ ತಂತ್ರಜ್ಞರು.

ಬಿ.ಟಿ ಆರ್ಥಿಕತೆ ವಿಸ್ತರಣೆ ಗುರಿ

ಒಂದನೇ ಪುಟದಿಂದ

ಈ ಕ್ಷೇತ್ರದ ಬೆಳವಣಿಗೆಗೆ ಪೂರಕವಾದ ಕೌಶಲ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ, ತರಬೇತಿ ಕಾರ್ಯಕ್ರಮಗಳ ಅನುಷ್ಠಾನ, ವಿಶೇಷ ಆರ್ಥಿಕ ವಲಯಗಳ ನಿರ್ಮಾಣ, ಗೇಮಿಂಗ್ ಕ್ಷೇತ್ರದ ಉನ್ನತ ಅಧ್ಯಯನ ಕೇಂದ್ರ ಸ್ಥಾಪನೆಯ ಪ್ರಸ್ತಾವಗಳು ಕರಡು ನೀತಿಯಲ್ಲಿವೆ.


ಐ.ಟಿ ನೀತಿಯಲ್ಲಿನ ಉತ್ತೇಜನಗಳು

- ಕೌಶಲಯುತ ಮಾನವ ಸಂಪನ್ಮೂಲ ಅಭಿವೃದ್ಧಿಗೆ ನೆರವು
- ಬಿ.ಟಿ ಕ್ಷೇತ್ರದಲ್ಲಿ ಉದ್ಯಮಶೀಲತೆ ಅಧ್ಯಯನಕ್ಕೆ ತಿಂಗಳಿಗೆ ₹ 50,000 ಶಿಷ್ಯವೇತನವುಳ್ಳ ಒಂದು ವರ್ಷದ ಅವಧಿಯ ಫೆಲೋಶಿಪ್
- ಬಿ.ಟಿ ಕ್ಷೇತ್ರದ ಉತ್ಪಾದನಾ ಘಟಕಗಳ ನಿರ್ಮಾಣಕ್ಕೆ ₹ 10 ಕೋಟಿಗಳವರೆಗೆ ಸಹಾಯಧನ
- ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಬಯೋ ಫೌಂಡ್ರಿಗಳ ನಿರ್ಮಾಣಕ್ಕೆ ನೆರವು

ಎವಿಜಿಸಿ–ಎಕ್ಸ್‌ಆರ್ 3.0 ನೀತಿಯಲ್ಲಿನ ಉತ್ತೇಜನಗಳು

- ಕಿಟ್‌ವೆನ್ ನಿಧಿ–4ರ ಮೂಲಕ ಆರ್ಥಿಕ ನೆರವು
- ಉದ್ಯೋಗ ಸೃಷ್ಟಿ ಮತ್ತು ತರಬೇತಿ ಕಾರ್ಯಕ್ರಮದ ವೆಚ್ಚ ಮರುಭರಿಸುವುದು
- ನವೋದ್ಯಮಗಳ ಆರಂಭಕ್ಕೆ ನೆರವು ನೀಡುವುದು
- ಅನಿಮೇಷನ್ ಸಿನಿಮಾ, ಕಿರುಚಿತ್ರಗಳ ನಿರ್ಮಾಣಕ್ಕೆ ಸಹಾಯಧನ
- ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ನೆರವು ಒದಗಿಸುವುದು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,890
ಇಂದಿನ ಅಂತ್ಯ	20,096
▲	207
ದಿನದ ಗರಿಷ್ಠ	20,104

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹945 (955)
ಸೂರ್ಯಕಾಂತಿ (ರಿಫೈನ್ಡ್)	₹950 (957)
ಪಾಮೋಲಿನ್	₹838 (840)

ವಿನಿಮಯ ದರ

$ ಡಾಲರ್	83.31
£ ಪೌಂಡ್	105.75
€ ಯುರೊ	91.53
¥ ಯೆನ್ (100ಕ್ಕೆ)	56

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹230-463
ದ್ವಿತಳಿ (ಬಿ.ವಿ)	₹324-593

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹150
ಆರ್‌ಎಸ್‌ಎಸ್‌-5	₹146
ಗುಡ್ ಲಾಟ್	₹130

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹3800-4400
ಮಧ್ಯಮ	₹3000-3800
ಸಣ್ಣ	₹2000-3000

4 ಟ್ರಿಲಿಯನ್ ಡಾಲರ್‌ಗೆ ಬಿಎಸ್‌ಇ ಮೌಲ್ಯ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯ (ಬಿಎಸ್‌ಇ) ಮಾರುಕಟ್ಟೆ ಬಂಡವಾಳ ಮೌಲ್ಯವು ಬುಧವಾರದ ವಹಿವಾಟಿನಲ್ಲಿ ದಾಖಲೆಯ 4 ಟ್ರಿಲಿಯನ್ ಡಾಲರ್‌ಗೆ (₹333.29 ಲಕ್ಷ ಕೋಟಿ) ಏರಿಕೆ ಕಂಡಿದ್ದು, ಹೊಸ ಮೈಲಿಗಲ್ಲು ತಲುಪಿದೆ.


ಷೇರುಪೇಟೆಯು ಎರಡೂವರೆ ವರ್ಷಗಳಲ್ಲಿ ಈ ಮಟ್ಟವನ್ನು ತಲುಪಿದೆ. 2021ರ ಮೇ 24ರಂದು ಮಾರುಕಟ್ಟೆ ಮೌಲ್ಯವ 3 ಟ್ರಿಲಿಯನ್ ಡಾಲರ್ ಇತ್ತು. 2023ರಲ್ಲಿ ಈವರೆಗೆ ಬಿಎಸ್‌ಇ 6,061 ಅಂಶ ಏರಿಕೆ ಕಂಡಿದ್ದು, ಮಾರುಕಟ್ಟೆ ಮೌಲ್ಯವು ₹50.90 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ.

ಷೇರುಪೇಟೆಗಳಲ್ಲಿ ಬುಧವಾರ ಸಕಾರಾತ್ಮಕ ಮಟ್ಟದಲ್ಲಿಯೇ ವಹಿವಾಟು ಆರಂಭ ಆಯಿತು. ಎಚ್‌ಡಿಎಫ್‌ಸಿ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಮತ್ತು ಟಿಸಿಎಸ್ ಷೇರುಗಳನ್ನು ಹೂಡಿಕೆದಾರರು ಹೆಚ್ಚಾಗಿ ಖರೀದಿ ನಡೆಸಿದ್ದರಿಂದ ಸೂಚ್ಯಂಕಗಳು ಏರಿಕೆ ಕಾಣುವಂತಾಯಿತು.


ಬಿಎಸ್‌ಇ ಸೆನ್ಸೆಕ್ಸ್ 728 ಅಂಶ ಏರಿಕೆ ಕಂಡು 66,901 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 207 ಅಂಶ ಏರಿಕೆ ಕಂಡು 20 ಸಾವಿರದ ಗಡಿ ದಾಟಿ 20,096 ಅಂಶಗಳಿಗೆ ತಲುಪಿತು.

> **ವಿದೇಶಿ ಬಂಡವಾಳ ಒಳಹರಿವು ಮತ್ತು ಕಂಪನಿಗಳ ಎರಡನೇ ತ್ರೈಮಾಸಿಕ ಫಲಿತಾಂಶ ಉತ್ತಮ ಆಗಿರುವುದು ಷೇರುಪೇಟೆಯ ಈ ಸಾಧನೆಗೆ ನೆರವಾಗಿವೆ**
>
> **ದೀಪಕ್ ಜಸನಿ,** ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ

ಬಿಎಸ್‌ಇ ಮಾರುಕಟ್ಟೆ ಮೌಲ್ಯದ ಏರಿಕೆ



4 ಟ್ರಿಲಿಯನ್ ಡಾಲರ್ ಮೌಲ್ಯದ ವಿಶ್ವದ ಮಾರುಕಟ್ಟೆಗಳು



ಮಾಹಿತಿ: ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್

9 ಕಂಪನಿಗಳಿಗೆ ಷೇರುಪೇಟೆಗೆ ನಿಷೇಧ

ನವದೆಹಲಿ (ಪಿಟಿಐ): ಹೂಡಿಕೆ ಸಲಹಾ ನಿಯಮಗಳನ್ನು ಉಲ್ಲಂಘಿಸಿರುವ 9 ಕಂಪನಿಗಳಿಗೆ ಎರಡು ವರ್ಷಗಳವರೆಗೆ ಷೇರುಪೇಟೆ ಪ್ರವೇಶಿಸಿದಂತೆ ನಿಷೇಧ ಹೇರಲಾಗಿದೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಹೇಳಿದೆ.

ನೋಂದಾಯಿಸದ ಹೂಡಿಕೆ ಸಲಹಾ ಸೇವೆಗಳ ಮೂಲಕ ಹೂಡಿಕೆದಾರರಿಂದ ಸಂಗ್ರಹಿಸಿರುವ ₹8 ಕೋಟಿಯನ್ನು ಮೂರು ತಿಂಗಳ ಒಳಗಾಗಿ ಮರುಪಾವತಿ ಮಾಡುವಂತೆ ನಿರ್ದೇಶನ ನೀಡಿದೆ. ಅಲ್ಲದೆ, ₹18 ಲಕ್ಷ ದಂಡವನ್ನು ವಿಧಿಸಿದ್ದು, 45 ದಿನಗಳ ಒಳಗಾಗಿ ಅದನ್ನು ಪಾವತಿಸುವಂತೆಯೂ ಸೂಚನೆ ನೀಡಿದೆ.

9 ಕಂಪನಿಗಳು: ಯೋಗೇಶ್ ಕುಕಡಿಯಾ, ರಾಜೇಶ್ ಆರ್. ಕೆ., ನಿತಿನ್ ರಾಜ್, ಸಿಂಗಲ್2ನಾಯ್ಸ್ ಕ್ಯಾಪಿಟಲ್ ಪಾರ್ಟ್ನರ್ಸ್, ಇನ್‌ವೆಸ್ಟೊ ಇನ್‌ವೆಸ್ಟ್‌ಮೆಂಟ್ ಅಡ್ವೈಸರ್ಸ್, ಎಸ್‌ಎಸ್ ಇನ್ಫೊ ಸೇಲ್ಸ್, ಎಸ್.ಐ. ಡಿಜಿ ಸೇಲ್ಸ್, ಸಿ.ಟಿ. ವೆಬ್ ಸೇಲ್ಸ್ ಮತ್ತು ಎಂ.ಎಲ್. ಟೆಲೆ ಸೇಲ್ಸ್.

ಸಂಕ್ಷಿಪ್ತ ಸುದ್ದಿ

ಎಲ್‌ಐಸಿ ಜೀವನ್ ಉತ್ಸವ ಯೋಜನೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ‘ಜೀವನ್ ಉತ್ಸವ’ ಎನ್ನುವ ಹೊಸ ಯೋಜನೆಯನ್ನು ಬುಧವಾರ ಆರಂಭಿಸಿದೆ.

ಪ್ರೀಮಿಯಂ ಪಾವತಿ ಅವಧಿಯು ಕನಿಷ್ಠ 5 ವರ್ಷಗಳಿಂದ ಗರಿಷ್ಠ 16 ವರ್ಷಗಳವರೆಗೆ ಇದೆ. ಯೋಜನೆಯ ಪ್ರಯೋಜನಗಳನ್ನು ಖಾತರಿಪಡಿಸಲಾಗಿದೆ. ಪಾಲಿಸಿ ಅವಧಿ ಮುಕ್ತಾಯದ ನಂತರ ವಿಮಾದಾರರು ಜೀವಿತಾವಧಿಯ ಪ್ರಯೋಜನ (ಸರ್ವೈವಲ್ ಬೆನಿಫಿಟ್) ಆಗಿ ವಿಮೆ ಮೊತ್ತದ ಶೇ 10 ಅನ್ನು ಪಡೆಯುವ ಆಯ್ಕೆ ಹೊಂದಿರುತ್ತಾರೆ. ವರ್ಷಕ್ಕೊಮ್ಮೆ ಸಂಚಿತ ಮೌಲ್ಯದ ಶೇ 75ರವರೆಗೆ ಹಿಂಪಡೆಯಬಹುದು ಎಂದು ಕಂಪನಿ ತಿಳಿಸಿದೆ.

ಜಿಆರ್‌ಟಿ: ವಿಶೇಷ ಕೊಡುಗೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು ಗ್ರಾಹಕರಿಗೆ ಅನ್‌ಕಟ್ ಮತ್ತು ಪೋಲ್ಕಿ ವಜ್ರದ ಮೌಲ್ಯದ ಮೇಲೆ ಶೇ 15 ರಿಯಾಯಿತಿ ಘೋಷಿಸಿದೆ.

ಅನ್‌ಕಟ್ ಡೈಮಂಡ್ ಜುವೆಲರಿ ಸಂಗ್ರಹವು ಗ್ರಾಹಕರಿಗೆ ಇಷ್ಟವಾಗುವ ವಿಶ್ವಾಸ ಇದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ‘ಆನಂದ್’ ಅನಂತಪದ್ಮನಾಭನ್ ಅವರು ಹೇಳಿದ್ದಾರೆ.

ಬುಕಿಂಗ್ ಹೋಲ್ಡಿಂಗ್ಸ್‌ನ ಕೇಂದ್ರ ಆರಂಭ

ಬೆಂಗಳೂರು (ಪಿಟಿಐ): ಆನ್‌ಲೈನ್ ಮೂಲಕ ಪ್ರಯಾಣ ಮತ್ತು ಅದಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವ ಅಮೆರಿಕದ ಬುಕಿಂಗ್ ಹೋಲ್ಡಿಂಗ್ಸ್ ಕಂಪನಿಯ ಬೆಂಗಳೂರಿನ ಬೆಳ್ಳಂದೂರಿನಲ್ಲಿ ಇರುವ ಉತ್ಕೃಷ್ಟತಾ ಕೇಂದ್ರವು ಬುಧವಾರ ಉದ್ಘಾಟನೆ ಆಗಿದೆ.

48,500 ಚದರ ಅಡಿ ವಿಸ್ತೀರ್ಣದಲ್ಲಿ ಈ ಕೇಂದ್ರ ಸ್ಥಾಪಿಸಲಾಗಿದೆ. ಕಂಪನಿಯ ಬ್ರ್ಯಾಂಡ್‌ಗಳಿಗೆ ಅಗತ್ಯವಾದ ಬೆಂಬಲ ನೀಡುವುದರ ಜೊತೆಗೆ ಫಿನ್‌ಟೆಕ್, ಹಣಕಾಸು ಸೇವೆಗಳು, ಸೈಬರ್ ಭದ್ರತೆ ವಿಷಯಗಳ ಬಗ್ಗೆ ಈ ಕೇಂದ್ರವು ಗಮನ ಹರಿಸಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

29-11-2023

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	930 (932)
ಪಾಮ್ ವಾರದ ಡೆಲಿವರಿ	840 (842)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,400 (61,700)
ಬೆಳ್ಳಿ ಕೆ.ಜಿ 75,650 (74,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	580
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36500
ಹಳತು	43500-47000
ಕಾರ್ಕಳ	
ಹಳತು	30000-47000
ಶಿವಮೊಗ್ಗ	
ಬೆಟ್ಟೆ	47000-53332
ಗೊರಬಾಲು	20000-38259
ಹೊಸತು	45559-46898
ರಾಶಿ	42869-47109
ಸರಕು	47169-77210
ಸಿದ್ದಾಪುರ	
ಬಿಳಿಗೋಟು	31399-33399
ಚಾಲಿ	37009-39099
ಕೆಂಪುಗೋಟು	28019-28019
ರಾಶಿ	44059-46539
ತಟ್ಟಿಬೆಟ್ಟೆ	37209-41609
ಶಿರಸಿ	
ಬೆಟ್ಟೆ	41210-44809
ಬಿಳಿಗೋಟು	28899-36176
ಚಾಲಿ	37210-40399
ಕೆಂಪುಗೋಟು	27099-33299
ರಾಶಿ	44869-48009

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ		ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	12200	-	-
ಎಸಿ	-	6800	-	
ಆರ್‌ಪಿ	-	10000	-	-
ಆರ್‌ಸಿ	-	5800	-	-

ಭಾರತ ಕ್ರಿಕೆಟ್ ತಂಡದ ನೆರವು ಸಿಬ್ಬಂದಿ ಗುತ್ತಿಗೆ ವಿಸ್ತರಣೆ, ಲಕ್ಷ್ಮಣ್ ಸ್ಥಾನವೂ ಅಬಾಧಿತ

ಕೋಚ್ ಆಗಿ ದ್ರಾವಿಡ್ ಮುಂದುವರಿಕೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ರಾಹುಲ್ ದ್ರಾವಿಡ್ ಅವರ ಗುತ್ತಿಗೆ ಅವಧಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಬುಧವಾರ ಮುಂದುವರಿಸಿದೆ. ಆದರೆ ಅವರ ಅವಧಿ ಎಲ್ಲಿಯವರೆಗೆ ಇದೆ ಎಂಬುದನ್ನು ತಿಳಿಸಿಲ್ಲ.

ದ್ರಾವಿಡ್ ತರಬೇತಿಯ ಭಾರತ ತಂಡ ಇತ್ತೀಚೆಗೆ ಏಕದಿನ ವಿಶ್ವಕಪ್‌ನಲ್ಲಿ ಅಮೋಘ ಪ್ರದರ್ಶನ ನೀಡಿತ್ತು. ಅಹಮದಾಬಾದಿನಲ್ಲಿ ನ. 19ರಂದು ಫೈನಲ್‌ನಲ್ಲಿ ಆಸ್ಟ್ರೇಲಿಯಾಕ್ಕೆ ಸೋಲುವ ಮೊದಲು ಸತತವಾಗಿ 10 ಪಂದ್ಯಗಳನ್ನು ಗೆದ್ದು ಅಜೇಯ ಸಾಧನೆ ಪ್ರದರ್ಶಿಸಿತ್ತು.

ದ್ರಾವಿಡ್ ಅವರೊಂದಿಗೆ ನೆರವು ಸಿಬ್ಬಂದಿ ಗುತ್ತಿಗೆಯನ್ನೂ ವಿಸ್ತರಿಸಲಾಗಿದೆ.

ರವಿ ಶಾಸ್ತ್ರಿ ಅವರ ಉತ್ತರಾಧಿಕಾರಿಯಾಗಿ 2021ರ ನವೆಂಬರ್‌ನಲ್ಲಿ (ಟಿ20 ವಿಶ್ವಕಪ್ ನಂತರ) ದ್ರಾವಿಡ್ ಎರಡು ವರ್ಷಗಳ ಅವಧಿಗೆ ಕೋಚ್ ಆಗಿ ನೇಮಕಗೊಂಡಿದ್ದರು. ವಿಶ್ವಕಪ್‌ವರೆಗೆ ಅವರ ಗುತ್ತಿಗೆ ಅವಧಿಯಿತ್ತು. ದ್ರಾವಿಡ್ ಅವಧಿಯಲ್ಲಿ ಭಾರತ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲೂ ರನ್ನರ್ ಅಪ್ ಆಗಿತ್ತು. ಅಲ್ಲೂ ಆಸ್ಟ್ರೇಲಿಯಾ ಜಯಶಾಲಿಯಾಗಿತ್ತು.

'ಐಸಿಸಿ ಟ್ರೋಫಿ ಗೆಲ್ಲಿಸಿಕೊಡಬೇಕೆಂಬ ದ್ರಾವಿಡ್ ಬೆನ್ನಿಗೆ ಬಿಸಿಸಿಐ ನಿಲ್ಲಲಿದೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸ್ಥಿರವಾದ ಪ್ರದರ್ಶನ ನೀಡಲು ಅಗತ್ಯವಿರುವ ಎಲ್ಲಾ ರೀತಿಯ ಬೆಂಬಲವನ್ನು ಅವರಿಗೆ ನೀಡಲಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಭಾರತ ಸುಮಾರು 12 ವರ್ಷಗಳಿಂದ ಐಸಿಸಿಯ ಯಾವುದೇ ಪ್ರಮುಖ ಟ್ರೋಫಿ ಗೆದ್ದುಕೊಂಡಿಲ್ಲ.

'ಟೀಮ್ ಇಂಡಿಯಾ ಜೊತೆಗಿನ ಕಳೆದ ಎರಡು ವರ್ಷಗಳು ಸ್ಮರಣೀಯವಾಗಿದೆ. ಜೊತೆಯಾಗಿ ನಾವು ಏಳುಬೀಳುಗಳನ್ನು ಕಂಡೆವು. ಈ ಯಾನದಲ್ಲಿ ತಂಡದೊಳಗೆ ಸಿಕ್ಕ ಬೆಂಬಲ ಮತ್ತು ಅನ್ಯೋನ್ಯತೆ ಅದ್ಭುತ' ಎಂದು ಅವರು ಹೇಳಿದರು.

ದ್ರಾವಿಡ್ ಅವರ ಅವಧಿ ಮುಂದಿನ ವರ್ಷದ ಜೂನ್– ಜುಲೈ ತಿಂಗಳಲ್ಲಿ ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯುವ ಟಿ20 ವಿಶ್ವಕಪ್‌ವರೆಗೆ ಮುಂದುವರಿಯಲಿದೆ ಎಂದು ನಿರೀಕ್ಷಿಸಲಾಗಿದೆ.

50 ವರ್ಷದ ದ್ರಾವಿಡ್ ಜತೆ ನೆರವು ಸಿಬ್ಬಂದಿಯಾಗಿದ್ದ ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೋಡ್, ಬೌಲಿಂಗ್ ಕೋಚ್ ಪರಾಸ್ ಮಹಾಂಬ್ರೆ ಮತ್ತು ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಅವರ ಗುತ್ತಿಗೆ ಅವಧಿಯನ್ನೂ ಮುಂದುವರಿಸಲಾಗಿದೆ.

ವಿಶ್ವಕಪ್ ನಂತರ ದ್ರಾವಿಡ್ ಜೊತೆ ಬಿಸಿಸಿಐ ಮಾತುಕತೆ ನಡೆಸಿತ್ತು. 'ಭಾರತ ತಂಡವನ್ನು ಸಶಕ್ತವಾಗಿ ರೂಪಿಸುವಲ್ಲಿ ದ್ರಾವಿಡ್ ವಹಿಸಿದ ಪಾತ್ರವನ್ನು ಬಿಸಿಸಿಐ ಗುರುತಿಸಿದೆ. ಅವರ ವೃತ್ತಿಪರತೆಯನ್ನು ಶ್ಲಾಘಿಸುತ್ತಿದೆ' ಎಂದು ಹೇಳಿಕೆ ತಿಳಿಸಿದೆ.

2012ರಲ್ಲಿ ಕ್ರಿಕೆಟ್‌ಗೆ ವಿದಾಯ ಹೇಳಿದ್ದ ದ್ರಾವಿಡ್ 164 ಟೆಸ್ಟ್‌ಗಳಿಂದ 13,288 ರನ್ ಗಳಿಸಿದ್ದಾರೆ. ಭಾರತದಲ್ಲಿ ಸಚಿನ್ ತೆಂಡೂಲ್ಕರ್ ನಂತರ ಎರಡನೇ ಸ್ಥಾನದ ಸಾಧನೆಯಿದು. ವಿಶ್ವದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದಾರೆ.


ರಾಹುಲ್ ದ್ರಾವಿಡ್

ಜುಲೈನಲ್ಲಿ ಭಾರತ ತಂಡದ ಲಂಕಾ ಪ್ರವಾಸ

ಕೊಲಂಬೊ (ಪಿಟಿಐ): ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾ ಕ್ರಿಕೆಟ್ ಮತ್ತು ಅದರ ಪ್ರಸಾರ ಸಂಸ್ಥೆಗೆ ಖುಷಿಯ ಸುದ್ದಿಯೊಂದಿದೆ. ಭಾರತ ಕ್ರಿಕೆಟ್ ತಂಡವು 2024ರ ಜುಲೈ–ಆಗಸ್ಟ್‌ನಲ್ಲಿ ಆರು ಸೀಮಿತ ಓವರುಗಳ ಪಂದ್ಯಗಳನ್ನಾಡಲು ದ್ವೀಪರಾಷ್ಟ್ರಕ್ಕೆ ಅಲ್ಪಾವಧಿಯ ಪ್ರವಾಸವನ್ನು ಕೈಗೊಳ್ಳಲಿದೆ ಎಂದು ಮಂಡಳಿ ಬುಧವಾರ ಪ್ರಕಟಿಸಿದೆ.

ಶ್ರೀಲಂಕಾ ಕ್ರಿಕೆಟ್‌ನಲ್ಲಿ ಸರ್ಕಾರದ ಹಸ್ತಕ್ಷೇಪ ವಿರೋಧಿಸಿ ಐಸಿಸಿಯು ಇತ್ತೀಚೆಗೆ ಆ ದೇಶದ ಕ್ರಿಕೆಟ್ ಮಂಡಳಿಯ ಮೇಲೆ ನಿಷೇಧ ಹೇರಿದೆ. 19 ವರ್ಷದೊಳಗಿನವರ ವಿಶ್ವಕಪ್ ಕೂಡ ಅಲ್ಲಿಂದ ದಕ್ಷಿಣ ಆಫ್ರಿಕಕ್ಕೆ ಸ್ಥಳಾಂತರಿಸಿದೆ. ಆದರೆ ಈಗಾಗಲೇ ಬದ್ಧರಾಗಿರುವ ದ್ವಿಪಕ್ಷೀಯ ಸರಣಿಗಳನ್ನು ನಡೆಸಲು ರಾಷ್ಟ್ರೀಯ ತಂಡಗಳಿಗೆ ಅವಕಾಶ ನೀಡಲಾಗಿದೆ. ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ಬಿಡುಗಡೆ ಮಾಡಿರುವ 2024ರ ಕ್ಯಾಲೆಂಡರ್ ಪ್ರಕಾರ, ಭಾರತ ಮೂರು ಏಕದಿನ ಮತ್ತು ಮೂರು ಟಿ20 ಪಂದ್ಯಗಳನ್ನು ಆಡಬೇಕಾಗಿದೆ.

ದಕ್ಷಿಣ ಆಫ್ರಿಕಾ ಪ್ರವಾಸ: ಟಿ20 ತಂಡದ ನೇತೃತ್ವ ವಹಿಸಲು ರೋಹಿತ್‌ಗೆ ಬಿಸಿಸಿಐ ಮನವೊಲಿಕೆ?



ನವದೆಹಲಿ (ಪಿಟಿಐ): ಹೋದ ಸಲದ (2022) ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಸೋತ ನಂತರ ಚುಟುಕು ಕ್ರಿಕೆಟ್ ಮಾದರಿಯಲ್ಲಿ ತಂಡದ ನೇತೃತ್ವವನ್ನು ವಹಿಸಲು ರೋಹಿತ್ ಶರ್ಮಾ ಹಿಂಜರಿದಿದ್ದರೂ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಖ್ಯಸ್ಥರು ಅವರ ಮನವೊಲಿಕೆಗೆ ಮುಂದಾಗಲಿದ್ದಾರೆ. ಇದೇ ವೇಳೆ ಮಂಡಳಿಯು ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಮೂರು ತಂಡಗಳನ್ನು ಗುರುವಾರ ಪ್ರಕಟಿಸಲಿದೆ.

ಬಿಸಿಸಿಐ ಕಾರ್ಯದರ್ಶಿ ಮತ್ತು ಆಯ್ಕೆ ಸಮಿತಿ ಸಂಚಾಲಕ ಜಯ್ ಶಾ ಅವರು ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರಕರ್ ಅವರನ್ನು ಇಲ್ಲಿ ಭೇಟಿಯಾಗಲಿದ್ದು, ತಂಡಗಳ ರಚನೆ ಬಗ್ಗೆ ಚರ್ಚಿಸಲಿದ್ದಾರೆ. ಜೊತೆಗೆ ಮುಂದಿನ ಪ್ರಮುಖ ಟೂರ್ನಿ ಆಗಿರುವ ಟಿ20 ವಿಶ್ವಕಪ್‌ಗೆ ಕಾರ್ಯಯೋಜನೆ ರೂಪಿಸುವ ಬಗ್ಗೆಯೂ ಸಮಾಲೋಚಿಸಲಿದ್ದಾರೆ.

ಟಿ20 ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರುವಿಶ್ವಕಪ್ ವೇಳೆ ಆದ ಪಾದದ ಸ್ನಾಯು ನೋವಿನಿಂದ ಇನ್ನೊಂದು ತಿಂಗಳು ಹೊರಗಿರಲಿದ್ದಾರೆ. ಹೀಗಾಗಿ ಒಂದೊ ಸೂರ್ಯಕುಮಾರ್ ಅವರಿಗೆ ಹೊಣೆ ವಹಿಸಬೇಕು ಇಲ್ಲವೇ ರೋಹಿತ್ ಶರ್ಮಾ ಅವರ ನಾಯಕತ್ವ ಕೌಶಲದ ಮೇಲೆ ನಂಬಿಕೆಯಿಡಬೇಕಾಗಿದೆ. ಏಕದಿನ ವಿಶ್ವಕಪ್ ವೇಳೆ ರೋಹಿತ್ ನಾಯಕತ್ವ ಮೆಚ್ಚುಗೆಗೆ ಪಾತ್ರವಾಗಿತ್ತು.

ಈ ಮೊದಲು ತಾವು ಟಿ20 ಪಂದ್ಯದಲ್ಲಿ ಆಡಲು ಬಯಸುವುದಿಲ್ಲ ಎಂದು ರೋಹಿತ್ ಹೇಳಿದ್ದರು. ಆದರೆ ಏಕ ದಿನ ವಿಶ್ವಕಪ್‌ನಲ್ಲಿ ತಂಡ ಮುನ್ನಡೆಸಿದ ರೀತಿ ಗಮನಿಸಿದರೆ ಟಿ20 ವಿಶ್ವಕಪ್‌ವರೆಗೆ ಅವರೇ ತಂಡದ ನೇತೃತ್ವ ವಹಿಸಲು ಯೋಗ್ಯ ಎಂದು ಬಿಸಿಸಿಐಗೆ ಮನವರಿಕೆಯಾದಂತಿದೆ. ಟಿ20 ನಾಯಕತ್ವಕ್ಕೆ ರೋಹಿತ್ ಒಪ್ಪದೇ ಹೋದಲ್ಲಿ ಸೂರ್ಯಕುಮಾರ್ ಯಾದವ್ ಅವರು ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಟಿ20 ತಂಡದ ಕಪ್ತಾನ ಆಗಲಿದ್ದಾರೆ ಎಂದು ಈ ಬೆಳವಣಿಗೆಗಳ ಅರಿವಿರುವ ಬಿಸಿಸಿಐ ಮೂಲವೊಂದು ಪಿಟಿಐಗೆ ತಿಳಿಸಿದೆ.

ವಿರಾಟ್ ಕೊಹ್ಲಿ ಅವರು ದಕ್ಷಿಣ ಆಫ್ರಿಕಾ ಪ್ರವಾಸದ ವೇಳೆ ಸೀಮಿತ ಓವರುಗಳ ಕ್ರಿಕೆಟ್‌ನಿಂದ ವಿರಾಮ ಬಯಸಿದ್ದಾರೆ.

ದಕ್ಷಿಣ ಆಫ್ರಿಕಾ ಪ್ರವಾಸದ ವೇಳೆ ಭಾರತ 11 ದಿನಗಳಲ್ಲಿ ಸೀಮಿತ ಓವರುಗಳ ಆರು ಪಂದ್ಯ ಆಡಬೇಕಿದೆ. ಐದು ದಿನಗಳಲ್ಲಿ ಮೂರು ಏಕದಿನ ಪಂದ್ಯ ಆಡಬೇಕಾಗಿದೆ. ಟೆಸ್ಟ್ ಸರಣಿ ಡಿಸೆಂಬರ್ 26ರಂದು ಆರಂಭವಾಗಲಿದೆ.

ಹೊಸಮುಖ ಸಂದೇಹ

ರಾಹುಲ್ ಮತ್ತು ಶ್ರೇಯಸ್ ಅಯ್ಯರ್ ಟೆಸ್ಟ್ ತಂಡಕ್ಕೆ ಪುನರಾಗಮನ ಮಾಡುವುದು ಖಚಿತವಾಗಿದೆ. ಗಾಯಾಳಾಗಿದ್ದ ಕಾರಣ ಈ ಇಬ್ಬರು ಈ ಹಿಂದಿನ ಸರಣಿಗಳಿಗೆ ಅಲಭ್ಯರಾಗಿದ್ದರು. ಅಜಿಂಕ್ಯ ರಹಾನೆ ಅವರಿಗೆ ಅವಕಾಶ ಸಿಗುವುದು ಅನುಮಾನ. ಚೇತೇಶ್ವರ ಪೂಜಾರ ಪುನರಾಗಮದ ಸಾಧ್ಯತೆಯೂ ಕಡಿಮೆ.


ಎನ್‌ಸಿಎ ಮುಖ್ಯಸ್ಥರಾಗಿ ವಿ.ವಿ.ಎಸ್. ಮುಂದುವರಿಕೆ

ವಿ.ವಿ.ಎಸ್. ಲಕ್ಷ್ಮಣ್ ಅವರನ್ನು ಎನ್‌ಸಿಎ ಮುಖ್ಯಸ್ಥರನ್ನಾಗಿ ಮುಂದುವರಿಸಲಾಗಿದೆ. ದ್ರಾವಿಡ್ ಅವರು ಅಲ್ಪಾವಧಿಯ ಕೆಲವು ಸರಣಿಗಳಿಗೆ ಬಿಡುವು ಪಡೆದುಕೊಂಡಿದ್ದಾಗ ಲಕ್ಷ್ಮಣ್ ಅವರು ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.

ಯು ಮುಂಬಾಗೆ ಸುರೀಂದರ್ ಸಾರಥ್ಯ

ಮುಂಬೈ (ಪಿಟಿಐ): ಸುರೀಂದರ್ ಸಿಂಗ್ ಅವರನ್ನು ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಗೆ ಯು ಮುಂಬಾ ತಂಡವು ನಾಯಕರನ್ನಾಗಿ ಉಳಿಸಿಕೊಂಡಿದೆ.

ಬುಧವಾರ ತಂಡದ ಹೊಸ ಜೆರ್ಸಿಯನ್ನು ಅನಾವರಣಗೊಳಿಸಲಾಯಿತು. ಇದೇ ವೇಳೆ ರಿಂಕು ಶರ್ಮಾ ಮತ್ತು ಮಹೇಂದರ್ ಸಿಂಗ್ ಅವರನ್ನು ಉಪನಾಯಕರಾಗಿ ಘೋಷಿಸಲಾಯಿತು.



ಸುರಂಗದಲ್ಲಿ ಸಿಲುಕಿದ 41 ಕಾರ್ಮಿಕರ ಪವಾಡಸದೃಷ ರಕ್ಷಣೆ!

ಕರ್ನಾಟಕ ತಂಡದ ಅಜೇಯ ಓಟ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ದೇವದತ್ತ ಅಬ್ಬರದ ಆಟ

ಅಹಮದಾಬಾದ್: ದೇವದತ್ತ ಪಡಿಕ್ಕಲ್ ಅಬ್ಬರದ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನಲ್ಲಿ ಅಜೇಯ ಓಟ ಮುಂದುವರಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದ ಎ ಗ್ರೌಂಡ್‌ನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು 7 ವಿಕೆಟ್‌ಗಳಿಂದ ಬಿಹಾರ ಎದುರು ಜಯಿಸಿತು. ಇದರೊಂದಿಗೆ ಟೂರ್ನಿಯಲ್ಲಿ ಸತತ ನಾಲ್ಕನೇ ಗೆಲುವು ದಾಖಲಿಸಿತು. ಆದರೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಕರ್ನಾಟಕಕ್ಕಿಂತ (+2.643) ನೆಟ್ ರನ್‌ರೇಟ್‌ನಲ್ಲಿ ಸ್ವಲ್ಪ ಹೆಚ್ಚಿರುವ ಹರಿಯಾಣ (+2.674) ಮೊದಲ ಸ್ಥಾನದಲ್ಲಿದೆ.

ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬಿಹಾರ ತಂಡದ ಶಕಿಬುಲ್ ಗನಿ (ಔಟಾಗದೆ 113; 100ಎ, 4X9, 6X5) ಅವರ ಏಕಾಂಗಿ ಹೋರಾಟದ ಶತಕದಿಂದಾಗಿ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 217 ರನ್ ಗಳಿಸಿತು. ಕರ್ನಾಟಕದ ಸ್ಪಿನ್ನರ್ ಜೆ. ಸುಚಿತ್ ಮೂರು ವಿಕೆಟ್ ಗಳಿಸಿದರು. ಬಾಬುಲ್ ಕುಮಾರ್ ಅವರು ರನ್ ಔಟ್ ಆಗಲೂ ಸುಚಿತ್ ಚುರುಕಿನ ಫೀಲ್ಡಿಂಗ್ ಕಾರಣವಾಯಿತು.

ಗುರಿ ಬೆನ್ನಟ್ಟಿದ ಕರ್ನಾಟಕಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ಮೊದಲ ಓವರ್‌ನಲ್ಲಿ ಆರ್. ಸಮರ್ಥ್ ಔಟಾದರು. ನಿಕಿನ್ ಜೋಸ್ ಮತ್ತು ಮಯಂಕ್ ಅಗರವಾಲ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಗಳಿಸಿದರು. 16ನೇ ಓವರ್‌ನಲ್ಲಿ ಆಷುತೋಷ್ ಅಮನ್ ಬೌಲಿಂಗ್‌ನಲ್ಲಿ ಮಯಂಕ್ ಔಟಾದರು.

ಕ್ರೀಸ್‌ಗೆ ಬಂದ ದೇವದತ್ತ ಪಡಿಕ್ಕಲ್ ಬೀಸಾಟ ಆರಂಭಿಸಿದರು. ಕಳೆದ ಮೂರು ಪಂದ್ಯದಲ್ಲಿ ಎರಡು ಅರ್ಧಶತಕ ಮತ್ತು ಒಂದು ಶತಕ ಹೊಡೆದಿದ್ದ ದೇವದತ್ತ ಈ ಪಂದ್ಯದಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡಿದರು. ಕೇವಲ 57 ಎಸೆತಗಳಲ್ಲಿ ಅಜೇಯ 93 ರನ್ ಗಳಿಸಿದರು. ಅದರಲ್ಲಿ 9 ಬೌಂಡರಿ ಮತ್ತು ಐದು ಸಿಕ್ಸರ್‌ಗಳಿದ್ದವು.

ದೇವದತ್ತ ಮತ್ತು ನಿಕಿನ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಗಳಿಸಿದರು. 26ನೇ ಓವರ್‌ನಲ್ಲಿ ನಿಕಿನ್ ಅವರು ಆರ್. ಪ್ರತಾಪ್ ಸಿಂಗ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ನಂತರದ ಆಟದಲ್ಲಿ ದೇವದತ್ತ ಮತ್ತು ಅನುಭವಿ ಮನೀಷ್ ಪಾಂಡೆ (ಔಟಾಗದೆ 17) ತಂಡವನ್ನು ಗೆಲುವಿನ ದಡ ಸೇರಿಸಿದರು.

ಭಾರತ ತಂಡದ ಕದ ತಟ್ಟುತ್ತಿರುವ ದೇವದತ್ತಗೆ ಈ ಪಂದ್ಯದಲ್ಲಿ ಏಳು ರನ್ ಅಂತರದಿಂದ ಶತಕ ಕೈತಪ್ಪಿತು. ನಾಲ್ಕು ಪಂದ್ಯಗಳಿಂದ 351 ರನ್ ಗಳಿಸಿರುವ ಅವರು ಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರು.

ಸಂಕ್ಷಿಪ್ತ ಸ್ಕೋರು: ಬಿಹಾರ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 217 (ಶರ್ಮನ್ ನಿಗ್ರೋದ್ 21, ಶಕೀಬುಲ್ ಗನಿ ಔಟಾಗದೆ 113, ಆಷುತೋಷ್ ಅಮನ್ ಔಟಾಗದೆ 33,ಜೆ. ಸುಚಿತ್ 27ಕ್ಕೆ3) **ಕರ್ನಾಟಕ:** 33.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 218 (ಮಯಂಕ್ ಅಗರವಾಲ್ 28, ನಿಕಿನ್ ಜೋಸ್ 69, ದೇವದತ್ತ ಪಡಿಕ್ಕಲ್ ಔಟಾಗದೆ 93, ವೀರ್‌ಪ್ರತಾಪ್ ಸಿಂಗ್ 31ಕ್ಕೆ1, ಆಷುತೋಷ್ ಅಮನ್ 36ಕ್ಕೆ1)

ಫಲಿತಾಂಶ: ಕರ್ನಾಟಕ ತಂಡಕ್ಕೆ 7 ವಿಕೆಟ್‌ಗಳ ಜಯ.


ದೇವದತ್ತ ಪಡಿಕ್ಕಲ್

ಸಂಕ್ಷಿಪ್ತ ಸುದ್ದಿ

ಶ್ರೀಕಾಂತ್‌ಗೆ ನಿರಾಸೆ, ಉನ್ನತಿ ಮುನ್ನಡೆ

ಲಖನೌ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಸೈಯ್ಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಮೊದಲ ಸುತ್ತಿನಲ್ಲೇ ಕೊರಿಯಾದ ಆಟಗಾರನಿಗೆ ನೇರ ಸೆಟ್‌ಗಳಲ್ಲಿ ಮಣಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಹದಿಹರೆಯದ ಆಟಗಾರ್ತಿ ಉನ್ನತಿ ಹೂಡಾ, ಸ್ವದೇಶದ ಆಕರ್ಷಿ ಕಶ್ಯಪ್ ಅವರನ್ನು ಆಘಾತ ನೀಡಿ ಎರಡನೇ ಸುತ್ತನ್ನು ಪ್ರವೇಶಿಸಿದರು. ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ 21-23, 8-23ರಲ್ಲಿ ಕೊರಿಯಾದ ಚಿಯಾ ಹಾವ್ಲೊ ಲಿ ಅವರೆದುರು ಸೋಲನುಭವಿಸಿದರು.

ದೇಶದ ಉದಯೋನ್ಮುಖ ಆಟಗಾರ್ತಿಯರಲ್ಲಿ ಒಬ್ಬರಾದ 16 ವರ್ಷದ ಉನ್ನತಿ 15-21 21-19, 21-18 ರಿಂದ ಆಕರ್ಷಿ ಅವರನ್ನು ಸೋಲಿಸಲು 77 ನಿಮಿಷ ತೆಗೆದುಕೊಂಡರು.

ಬಿಎಫ್‌ಸಿಗೆ ಇಂದು ಪಂಜಾಬ್ ಸವಾಲು

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡದವರು ಗುರುವಾರ ತವರಿನಲ್ಲಿ ಪಂಜಾಬ್ ಎಫ್‌ಸಿ ತಂಡವನ್ನು ಎದುರಿಸಲಿದ್ದು, ಗೆಲುವಿನ ವಿಶ್ವಾಸದಲ್ಲಿದ್ದಾರೆ.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಬಿಎಫ್‌ಸಿ ತಂಡ ಈ ಋತುವಿನ ಎರಡನೇ ಜಯದ ನಿರೀಕ್ಷೆಯಲ್ಲಿದ್ದರೆ, ಪಂಜಾಬ್ ತಂಡ ಮೊದಲ ಗೆಲುವು ದಕ್ಕಿಸುವ ತವಕದಲ್ಲಿದೆ.

ಏಳು ಪಂದ್ಯಗಳನ್ನು ಆಡಿರುವ ಸುನಿಲ್ ಚೆಟ್ರಿ ಬಳಗ ಒಂದರಲ್ಲಿ ಗೆಲುವು ಸಾಧಿಸಿದ್ದರೆ, ಮೂರು ಪಂದ್ಯಗಳಲ್ಲಿ ಡ್ರಾ ಸಾಧಿಸಿದೆ. ಉಳಿದ ಮೂರು ಪಂದ್ಯಗಳಲ್ಲಿ ಪರಾಭವಗೊಂಡಿದೆ. 7 ಅಂಕದೊಂದಿಗೆ ಬಿಎಫ್‌ಸಿ ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಪಂಜಾಬ್ ಪಾಯಿಂಟ್ ಪಟ್ಟಿಯಲ್ಲಿ ಕೊನೆಯ (12ನೇ) ಸ್ಥಾನದಲ್ಲಿದೆ.





ಪುರುಷರ 4x400 ಮೀಟರ್ಸ್ ರಿಲೆಯಲ್ಲಿ ದಾಖಲೆಯೊಂದಿಗೆ ಚಿನ್ನ ಗೆದ್ದ ಆಳ್ವಾಸ್ ಕಾಲೇಜಿನ ಕಾರ್ತಿಕ್, ಶರಣ್, ಸದನ್ ಮತ್ತು ಸೂರ್ಯ (ಎಡ). ಮಹಿಳೆಯರ 4x400 ಮೀ ರಿಲೆಯಲ್ಲಿ ಚಿನ್ನ ಗೆದ್ದ ಆಳ್ವಾಸ್ ಕಾಲೇಜಿನ ಭೂಮಿಕಾ, ದುರ್ಗಾ, ವಿಸ್ಮಯ ಮತ್ತು ಶೈಲಜಾ ಅವರ ಸಂಭ್ರಮ

ಸ್ಪ್ರಿಂಟ್‌ನಲ್ಲಿ ಭೂಮಿಕಾ ಹ್ಯಾಟ್ರಿಕ್ ಸಾಧನೆ

ಅಥ್ಲೆಟಿಕ್ಸ್: ರಿಲೆಯಲ್ಲಿ ಆಳ್ವಾಸ್ ಪಾರಮ್ಯ; ದಾಖಲೆ ಸಮಗಟ್ಟಿದ ಶರಣ್, ದುರ್ಗಾ

ಪ್ರಜಾವಾಣಿ ವಾರ್ತೆ


ಮೂಡುಬಿದಿರೆ (ದಕ್ಷಿಣ ಕನ್ನಡ): ಮೊದಲ ದಿನ ವೇಗದ ಓಟಗಾರ್ತಿಯಾಗಿ ಗಮನ ಸೆಳೆದ ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್‌ನ ಭೂಮಿಕಾ ಅವರು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಥ್ಲೆಟಿಕ್ ಕೂಟದ ಸ್ಪ್ರಿಂಟ್‌ನಲ್ಲಿ ಹ್ಯಾಟ್ರಿಕ್ ಚಿನ್ನದ ಸಾಧನೆ ಮಾಡಿದರು.

ಸ್ವರಾಜ್ಯ ಮೈದಾನದಲ್ಲಿ ನಡೆಯುತ್ತಿ ರುವ ಕೂಟದ ಎರಡನೇ ದಿನವಾದ ಬುಧವಾರ ಮಹಿಳೆಯರ 200 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದ ಭೂಮಿಕಾ 4x400 ಮೀ ರಿಲೆಯಲ್ಲೂ ಆತಿಥೇಯರಿಗೆ ಚಿನ್ನ ತಂದುಕೊಡಲು ನೆರವಾದರು.

200 ಮೀಟರ್ಸ್ ಓಟದಲ್ಲಿ ತಮ್ಮದೇ ಸಂಸ್ಥೆಯ ದುರ್ಗಾ ಅವರನ್ನು 2 ಸೆಕೆಂಡುಗಳ ಅಂತರದಲ್ಲಿ ಭೂಮಿಕಾ ಹಿಂದಿಕ್ಕಿದರು. ಈ ಸ್ಪರ್ಧೆಯ ಎಲ್ಲ ಪದಕಗಳು ಆಳ್ವಾಸ್ ಪಾಲಾದವು. ಪುರುಷ ಮತ್ತು ಮಹಿಳೆಯರ ರಿಲೆಯಲ್ಲೂ ಆಳ್ವಾಸ್ ಚಿನ್ನ ಗಳಿಸಿತು.

ಎರಡನೇ ದಿನ ಒಂದು ಕೂಟ ದಾಖಲೆ ನಿರ್ಮಾಣವಾದರೆ, 2 ದಾಖಲೆಗಳು ಸಮನಾದವು. ಪುರುಷರ 200 ಮೀ. ಓಟದಲ್ಲಿ ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸ್‌ನ ಶರಣ್ ಕೆ. ಮತ್ತು ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಇದೇ ಸಂಸ್ಥೆಯ ದುರ್ಗಾ ಹಿಂದಿನ ದಾಖಲೆಯನ್ನು ಸಮಗೊಳಿಸಿದರು. ಪುರುಷರ 4x400 ಮೀ. ರಿಲೆಯಲ್ಲಿ 3ನಿ 27.2ಸೆ. (ಕೂಟ ದಾಖಲೆ: ಹಿಂದಿನ ದಾಖಲೆ: 3ನಿ 36 ಸೆ, ಆಳ್ವಾಸ್; 2020); ಆಳ್ವಾಸ್ ದಾಖಲೆ ಬರೆಯಿತು.

'ಮೌಲ್ಯ ಕಳೆದುಕೊಂಡ ಟಿ20 ಸರಣಿ'



ಗುವಾಹಟಿ (ಪಿಟಿಐ): ವಿಶ್ವಕಪ್ ಬೆನ್ನಿಗೇ ಭಾರತ–ಆಸ್ಟ್ರೇಲಿಯಾ ನಡುವಣ ಐದು ಪಂದ್ಯಗಳ ಟಿ–20 ಸರಣಿಯನ್ನು ನಡೆಸಿದ್ದರಿಂದ ಈ ಸರಣಿಯ ಮೌಲ್ಯ ಕಡಿಮೆಯಾಗಿದೆ. ಮಾತ್ರವಲ್ಲ ಈ ರೀತಿ ಅತಿಯಾದ ಕ್ರಿಕೆಟ್‌ನಿಂದ ಆಟಗಾರರು ದೈಹಿಕವಾಗಿ ಮತ್ತು ಮಾನಸಿಕವಾಗಿ ದಣಿಯುತ್ತಾರೆ ಎಂದು ಆಸ್ಟ್ರೇಲಿಯಾದ ಕ್ರಿಕೆಟ್ ದಿಗ್ಗಜರಲ್ಲಿ ಒಬ್ಬರಾದ ಮೈಕೆಲ್ ಹಸ್ಸಿ ಅಭಿಪ್ರಾಯಪಟ್ಟಿದ್ದಾರೆ.

ನ. 19ರಂದು ಭಾರತ ವಿರುದ್ಧ ನಡೆದ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಗೆದ್ದ ನಾಲ್ಕೇ ದಿನಗಳ ನಂತರ ಇವೆರಡು ತಂಡಗಳ ನಡುವೆ ಮೊದಲ ಟಿ–20 ಪಂದ್ಯ ನಡೆದಿತ್ತು.

'ಈ 20 ಸರಣಿಯು ಮೌಲ್ಯ ಕಳೆದುಕೊಂಡಿದೆ ಎಂಬುದು ನನ್ನ ಭಾವನೆ. ವಿಶ್ವಕಪ್ ಟೂರ್ನಿಯ ಮೌಲ್ಯ ಕಡಿಮೆಯಾಗಿಲ್ಲ. ಆದರೆ, ಈ ಸರಣಿಯ ಮೌಲ್ಯವಂತೂ ಕಡಿಮೆಯಾಗಿದೆ. ವಿಶ್ವಕಪ್‌ನಲ್ಲಿ ಉಭಯ ತಂಡಗಳಲ್ಲಿ ಆಡಿದ್ದ ಆಟಗಾರರಲ್ಲಿ ಹಲವರು ತವರಿಗೆ ಮರಳಿ ಟೆಸ್ಟ್ ಸರಣಿಗೆ ಸಜ್ಜಾಗುತ್ತಿದ್ದಾರೆ. ಇದು ಆಸ್ಟ್ರೇಲಿಯಾದ ಅತ್ಯುತ್ತಮ ಟಿ–20 ತಂಡವಲ್ಲ' ಎಂದು ಆಸ್ಟ್ರೇಲಿಯಾದ ರೇಡಿಯೊ ಜಾಲವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ಹಾಕಿ: ಪಂಜಾಬ್ ತಂಡಕ್ಕೆ ಕಿರೀಟ

ಚೆನ್ನೈ (ಪಿಟಿಐ): ಪಂಜಾಬ್ ತಂಡವು ಸೀನಿಯರ್ ಪುರುಷರ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಹರಿಯಾಣ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 9–8ರಿಂದ ರೋಚಕವಾಗಿ ಮಣಿಸಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ನಿಗದಿತ ಸಮಯದಲ್ಲಿ ಪಂಜಾಬ್ ಮತ್ತು ಹರಿಯಾಣ ತಂಡಗಳು ತಲಾ ಎರಡು ಗೋಲುಗಳಿಂದ ಸಮಬಲ ಸಾಧಿಸಿದ್ದವು. ಪಂದ್ಯದ 13ನೇ ನಿಮಿಷದಲ್ಲಿ ಹರ್ಜೀತ್ ಸಿಂಗ್ ಪಂಜಾಬ್ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ, ಹರಿಯಾಣದ ಸಂಜಯ್ (25ನೇ) ಪೆನಾಲ್ಟಿ ಕಾರ್ನರ್‌ನಲ್ಲಿ ಚೆಂಡನ್ನು ಗುರಿ ಸೇರಿಸಿ ಗೋಲು ಸಮಬಲಗೊಳಿಸಿದರು. ಭಾರತ ತಂಡ ಆಟಗಾರ ಹಾಗೂ ಪಂಜಾಬ್ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ (42ನೇ) ಮತ್ತೆ ತಂಡಕ್ಕೆ ಮುನ್ನಡೆ ಕೊಟ್ಟರು. ಅದಾದ ಎಂಟೇ ನಿಮಿಷದಲ್ಲಿ ರಾಜಂತ್ (50ನೇ) ಹರಿಯಾಣದ ಗೋಲನ್ನು ಸಮಬಲ ಗೊಳಿಸಿದರು.

ಕರ್ನಾಟಕಕ್ಕೆ ನಾಲ್ಕನೇ ಸ್ಥಾನ: ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ತಮಿಳುನಾಡು ಮತ್ತು ಕರ್ನಾಟಕ ತಂಡಗಳು 3–3ರ ಸಮಬಲ ಸಾಧಿಸಿದವು. ಬಳಿಕ ಪೆನಾಲ್ಟಿ ಶೂಟೌಟ್‌ನಲ್ಲಿ ಆತಿಥೇಯ ತಂಡ 5–3ರಿಂದ ಗೆಲುವು ಸಾಧಿಸಿ ತೃತೀಯ ಸ್ಥಾನ ಪಡೆಯಿತು.

ಬೂಮ್ರಾ ಅವರಿಗೆ ಬೇಸರ ಆಗಿರಬಹುದು: ಶ್ರೀಕಾಂತ್

ಚೆನ್ನೈ (ಪಿಟಿಐ): ಹಾರ್ದಿಕ್ ಪಾಂಡ್ಯ ಅವರು ಮುಂಬೈ ಇಂಡಿಯನ್ಸ್‌ಗೆ ಮರಳಿರುವ ಕಾರಣ ನಾಯಕತ್ವ ವಹಿಸುವ ತಮ್ಮ ಆಸೆ ಕೈಗೂಡದೇ ಹೋಗಬಹುದೆಂಬ ನೋವು ಜಸ್ಪ್ರೀತ್ ಬೂಮ್ರಾ ಅವರಿಗೆ ಕಾಡಿರಬಹುದು ಎಂದು ಭಾರತ ತಂಡದ ಮಾಜಿ ಆಟಗಾರ ಕೆ.ಶ್ರೀಕಾಂತ್ ಅಭಿಪ್ರಾಯಪಟ್ಟಿದ್ದಾರೆ.

ಗುಜರಾತ್ ಟೈಟನ್ಸ್‌ಗೆ ಎರಡು ವರ್ಷ ಆಡಿದ ನಂತರ ಹಾರ್ದಿಕ್ ಅವರು ಭಾನುವಾರ ಮುಂಬೈ ತಂಡಕ್ಕೆ ವಾಪಸಾಗಿದ್ದಾರೆ. 2015 ರಿಂದ 2022ರವರೆಗೆ ಅವರು ಮುಂಬೈ ತಂಡದಲ್ಲಿದ್ದರು.

ಗುಜರಾತ್‌ಗೆ ದೊಡ್ಡ ಮೊತ್ತ ಪಾವ ತಿಸಿ ಮುಂಬೈ ತಂಡ ಹಾರ್ದಿಕ್ ಅವರನ್ನು ಪಡೆದ ಬಳಿಕ ಬೂಮ್ರಾ ಅವರು ಇನ್‌ಸ್ಟಾ ಸ್ಟೋರಿಯಲ್ಲಿ 'ಕೆಲವೊಮ್ಮೆ ಮೌನವೇ ಅತ್ಯುತ್ತಮ ಉತ್ತರವಾಗುತ್ತದೆ' ಎಂದು ಒಗಟಿನ ರೀತಿ ಸಂದೇಶ ಹಾಕಿದ್ದರು.


ಭಾರತ ಕ್ರಿಕೆಟ್ ತಂಡದ ಬೌಲರ್ ಮುಖೇಶ್ ಕುಮಾರ್ ಅವರು ಗೋರಖ್‌ಪುರದಲ್ಲಿ ಮಂಗಳವಾರ ತಮ್ಮ ಬಾಲ್ಯದ ಗೆಳತಿ ಬಿಹಾರದ ದಿವ್ಯಾ ಸಿಂಗ್ ಅವರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟರು.

ಅಥ್ಲೆಟಿಕ್ಸ್: ದಕ್ಷಿಣ ಕನ್ನಡ ತಂಡಕ್ಕೆ ಸಮಗ್ರ ಪ್ರಶಸ್ತಿ

ಧಾರವಾಡ: ದಕ್ಷಿಣ ಕನ್ನಡ ಜಿಲ್ಲಾ ತಂಡ, ನಗರದಲ್ಲಿ ಬುಧವಾರ ನಡೆದ ಪದವಿಪೂರ್ವ ಕಾಲೇಜು ವಿದ್ಯಾರ್ಥಿನಿಯರ ರಾಜ್ಯಮಟ್ಟದ ಅಥ್ಲೆಟಿಕ್ಸ್‌ನಲ್ಲಿ ಒಟ್ಟು 42 ಅಂಕ ಪಡೆದು ಸಮಗ್ರ ಚಾಂಪಿಯನ್ ಪಟ್ಟ ಪಡೆಯಿತು.

ಬೆಳಗಾವಿ ಜಿಲ್ಲೆ ತಂಡ 39 ಅಂಕ ಪಡೆದು ರನ್ನರ್ ಅಪ್ ಸ್ಥಾನ ಗಳಿಸಿತು. ಬೆಂಗಳೂರು ಉತ್ತರ ಜಿಲ್ಲೆಯ ಶ್ರೀರಕ್ಷಾ ಅವರು ಅತ್ಯುತ್ತಮ ಅಥ್ಲೀಟ್ ಗೌರವಕ್ಕೆ ಪಾತ್ರರಾದರು. ಅವರು 3 ಸಾವಿರ ಮೀಟರ್ ಮತ್ತು 1,500 ಮೀ. ಓಟದಲ್ಲಿ ಪ್ರಥಮ, 4 ಕಿ.ಮೀ ಗುಡ್ಡಗಾಡು ಓಟ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು ಒಟ್ಟು 11 ಅಂಕ ಗಳಿಸಿ ಚಾಂಪಿಯನ್ ಆದರು.

ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿ: ಭಾರತ ಶುಭಾರಂಭ

ಸ್ಯಾಂಟಿಯಾಗೊ, ಚಿಲಿ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಭಾರತದ ಆಟಗಾರ್ತಿಯರು ಎಫ್‌ಐಎಚ್ ಮಹಿಳೆಯರ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಬುಧವಾರ ನಡೆದ ಆರಂಭಿಕ ಪಂದ್ಯದಲ್ಲಿ ಭಾರತವು 12–0 ಯಿಂದ ಕೆನಡಾ ತಂಡವನ್ನು ಸುಲಭವಾಗಿ ಮಣಿಸಿತು. ಈ ಹಿಂದಿನ 3 ಮುಖಾಮುಖಿಯಲ್ಲೂ ಗೆಲುವು ಸಾಧಿಸಿದ್ದ ಭಾರತ ಇಲ್ಲೂ ಪಾರಮ್ಯ ಮೆರೆಯಿತು.

ಭಾರತ ತಂಡದ ಪರ ಖಾನ್ ಮುಮ್ತಾಜ್ (26, 41, 54, 60ನೇ ನಿ) ನಾಲ್ಕು ಗೋಲು ಗಳಿಸಿ ಮಿಂಚಿದರೆ, ಅನ್ನು (4, 6, 39ನೇ) ಮತ್ತು ದೀಪಿಕಾ ಸೋರೆಂಗ್ (34, 50, 54ನೇ) ತಲಾ ಹ್ಯಾಟ್ರಿಕ್ ಗೋಲು ತಂದಿತ್ತರು. ಟೊಪ್ನೋ ದೀಪಿ ಮೋನಿಕಾ (21ನೇ) ಮತ್ತು ನೀಲಂ (45) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ರಾಮಕುಮಾರ್‌ಗೆ ಸಾಟಿಯಾಗದ ಮಲಿಕ್

• ಬಸವರಾಜ ದಳವಾಯಿ

ಕಲಬುರಗಿ: ಸುಲಭ ಜಯ ಸಾಧಿಸಿದ ಭಾರತದ ರಾಮಕುಮಾರ್ ರಾಮನಾಥನ್ ಹಾಗೂ ಹೋರಾಡಿ ಗೆದ್ದ ರಿಷಿ ರೆಡ್ಡಿ ಅವರು ಕಲಬುರಗಿ ಓಪನ್ ಪುರುಷರ ಐಟಿಎಫ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದ ಪ್ರೀ-ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ಸುತ್ತಿನ ಹಣಾಹಣಿಯಲ್ಲಿ ಬುಧವಾರ ಐದನೇ ಶ್ರೇಯಾಂಕದ ರಾಮ್‌ಕುಮಾರ್ ಅವರಿಗೆ 6–0, 6–0ಯಿಂದ ಸ್ವದೇಶದ ಅಜಯ್ ಮಲಿಕ್ ವಿರುದ್ಧ ನಿರಾಯಾಸ ಜಯ ಒಲಿಯಿತು.

ಕೇವಲ 40 ನಿಮಿಷಗಳಲ್ಲಿ ಮುಗಿದ ಈ ಸೆಣಸಾಟದಲ್ಲಿ ಅನುಭವಿ ರಾಮಕುಮಾರ್, ಅರ್ಹತಾ ಸುತ್ತಿನಿಂದ ಗೆದ್ದುಬಂದ ಆಟಗಾರನ ವಿರುದ್ಧ ಸಂಪೂರ್ಣ ಪಾರಮ್ಯ ಮೆರೆದರು. ಅವರ ವೇಗದ ಸರ್ವ್‌ಗಳ ಮುಂದೆ ಅಜಯ್ ಬಳಿ ಉತ್ತರವಿರಲಿಲ್ಲ. ಮತ್ತೊಂದು ಸೆಣಸಾಟದಲ್ಲಿ ಕರ್ನಾಟಕದ ರಿಷಿ 6–4, 7–5ರಿಂದ ದೆಹಲಿಯ ಪಾರ್ಥ್ ಅಗರವಾಲ್ ಅವರಿಗೆ ಸೋಲುಣಿಸಿದರು. ಅರ್ಹತಾ ಸುತ್ತಿನಲ್ಲಿ ಗೆದ್ದು ಮುಖ್ಯ ಸುತ್ತಿಗೆ ಪ್ರವೇಶ ಪಡೆದಿರುವ ರಿಷಿ ಅವರು 'ಲಕ್ಕಿ ಲೂಸರ್' ವಿರುದ್ಧ ಚಿತ್ತಾಕರ್ಷಕ ಆಟವಾಡಿದರು. ಮೊದಲ ಸೆಟ್‌ನ ಮೊದಲ ಗೇಮ್ ರಿಷಿ ಗೆದ್ದರು. ಆದರೆ ಸತತ ಎರಡು ಗೇಮ್ ಜಯಿಸಿದ ಪಾರ್ಥ್ ತಿರುಗೇಟು ನೀಡಿದರು. ಬಳಿಕ ದೀರ್ಘ ರ‍್ಯಾಲಿಗಳಲ್ಲಿ ಮಿಂಚಿದ ರಿಷಿ ಸೆಟ್ ತಮ್ಮದಾಗಿಸಿಕೊಂಡರು.

ಎರಡನೇ ಸೆಟ್‌ನಲ್ಲೂ ಪಾರ್ಥ್ ಅವರು ಭಾರೀ ಪೈಪೋಟಿ ನೀಡಿದರೂ ರಿಷಿ ಅವರ ಬ್ಯಾಕ್‌ಹ್ಯಾಂಡ್ ಹೊಡೆತಗಳು ಹಾಗೂ ಚುರುಕಿನ ಪಾದಚಲನೆಯ ಆಟದ ಮುಂದೆ ಶರಣಾಗಬೇಕಾಯಿತು. ಈ ನಡುವೆ ಆಯಾಸದಿಂದ ಬಳಲಿ ವೈದ್ಯಕೀಯ ವಿರಾಮ ಪಡೆದರೂ ರಿಷಿ ಅವರ ಆಟ ಮನಮೋಹಕವಾಗಿತ್ತು.

ಇನ್ನುಳಿದ ಹಣಾಹಣಿಗಳಲ್ಲಿ ಅಸ್ಟ್ರಿಯಾದ ಡೇವಿಡ್ ಪಿಚ್ಲರ್ 6–0, 6–3ರಿಂದ ಅರ್ಜುನ್ ಮಹದೇವನ್ ಎದುರು, ಭರತ್ ನಿಶೋಕ್ ಕುಮಾರನ್ 6–4,6–4ರಿಂದ ನಿತಿನ್ ಕುಮಾರ್ ಸಿನ್ಹಾ ವಿರುದ್ಧ, ಅಮೆರಿಕದ ಹ್ಯಾರಿಸನ್ ಆ್ಯಡಮ್ಸ್ 7–5, 6–1ರಿಂದ ಭಾರತದ ದೇವ್ ಜೇವಿಯಾ ವಿರುದ್ಧ, ರಿಷಭ್ ಅಗರವಾಲ್ 6–4, 3–6, 6–4ರಿಂದ ಸ್ವದೇಶದ ಜಗಮೀತ್ ಸಿಂಗ್ ವಿರುದ್ಧ, ಸಿದ್ಧಾರ್ಥ್ ರಾವತ್ 6–3, 6–4ರಿಂದ ಜಪಾನ್‌ನ ತೈಸಿ ಇಚಿಕಾವಾ ಎದುರು ಗೆದ್ದು ಪ್ರೀಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

ಒರ್ಲೋವ್ ಗಾಯಗೊಂಡು ನಿವೃತ್ತಿ: ಅಗ್ರಶ್ರೇಯಾಂಕದ ಆಟಗಾರ ಉಕ್ರೇನ್‌ನ ಒರ್ಲೋವ್ ಅವರು ಭುಜದ ನೋವಿನ ಕಾರಣ ಪಂದ್ಯದಿಂದ ಹಿಂದೆ ಸರಿದರು. ಅವರ ವಿರುದ್ಧ ಕಣಕ್ಕಿಳಿದಿದ್ದ ಮನೀಷ್ ಸುರೇಶ್ ಕುಮಾರ್ ಈ ವೇಳೆ 6–3, 2–0ರಿಂದ ಮುನ್ನಡೆಯಲ್ಲಿದ್ದರು. ಹೀಗಾಗಿ ಮನೀಷ್ ವಿಜೇತರೆಂದು ಪ್ರಕಟಿಸಲಾಯಿತು. ಇದೇ ರೀತಿ ಭಾರತದ ಧ್ರುವ ಹಿರ್ಪಾರ ಅವರೂ 2–6, 0–2ರಿಂದ ಜಪಾನ್‌ನ ಸೆಯಿಟಾ ವಟಾನ್ಬೆ ಎದುರು ಹಿನ್ನಡೆಯಲ್ಲಿದ್ದಾಗ ಗಾಯಗೊಂಡು ಹಿಂದೆ ಸರಿದರು.


ಭಾರತದ ರಾಮಕುಮಾರ್ ರಾಮನಾಥನ್ ಆಟದ ವೈಖರಿ–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ರಾಮ್– ಪೂರವ್ ಜೋಡಿಗೆ ಆಘಾತ

ಡಬಲ್ಸ್‌ನಲ್ಲಿ ಅಗ್ರಶ್ರೇಯಾಂಕ ಹೊಂದಿದ್ದ ಭಾರತದ ರಾಮಕುಮಾರ್ ರಾಮನಾಥನ್–ಪುರವ್ ರಾಜಾ ಜೋಡಿ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿತು. ಶ್ರೇಯಾಂಕರಹಿತ ಆಟಗಾರರಾದ ಭಾರತದ ಸಾಯಿ ಕಾರ್ತಿಕ್ ರೆಡ್ಡಿ– ಕಬೀರ್ ಹಂಸ್ 7–5, 6–3ರಿಂದ ರಾಮಕುಮಾರ್– ಪೂರವ್ ಅವರನ್ನು ಸೋಲಿಸಿ ಕ್ವಾರ್ಟರ್‌ಫೈನಲ್ ತಲುಪಿದರು.